DEMAND No. 53.—Capital Outlay on Schemes of Government Trading.

124. Capital Outlay on Schemes of Government Trading.

"That a further sum not exceeding Rs. 8,00,000 be granted to the Government to defray the charges which will come in course of payment during the financial year for the period ending 31st day of March 1966, in respect of 'Capital Outlay on Schemes of Government Trading'."

DEMAND No. 54.—Advances and Loans.

Q. Loans and Advances by State/Union Territory Governments.

"That a further sum not exceeding Rs. 3,50,00,400 be granted to the Government to defray the charges which will come in course of payment during the financial year for the period ending 31st day of March 1966, in respect of 'Loans and Advances by State/Union Territory Governments'."

Mr. SPEAKER.—The House will adjourn and reassemble at 2 P.M. to-day.

The House adjourned at Twenty-Five Minutes past Twelve of the Clock and re-assembled at Two of the Clock.

[MR. SPEAKER in the Chair.]

BUDGET ESTIMATES FOR 1966-67—DEMANDS FOR GRANTS

DEMAND No. 10—General Administration

Mr. SPEAKER.—Now, Demands for 1966-67.

Sri S. NIJALINGAPPA (Chief Minister).—Sir, on the recommendation of the Governor of Mysore, I beg to move :

"That a sum not exceeding Rs. 3,60,72,000 be granted to to this Government to defray the charges which will come in course of payment during the financial year for the period ending 31st day of March 1967, in respect of Demand No. 10—'General Administration'."

Mr. SPEAKER.—Motion moved:

"That a sum not exceeding Rs. 3,60,72,000 be granted to the Government to defray charges which will come in course of payment during the financial year for the period ending 31st day of March 1967, in respect of Demand No. 10—'General Administration'."

Along with this Demand the other Demand Nos. 29, 30, 45, 46, 27 9 and 11 are also deemed to have been moved and are open for discussion.

Sri Gopala Gowda has raised a point; I do not think there is time for me to give a ruling. If I have to give a ruling, I am ready. In the meanwhile, the Debate will go on.

Sri B. R. SUNTHANKAR (Belgaum City).—Sir, I will restrict my observations only to the General Administration, that is Demand No. 10. Sir, if we look to the number of Government employees in the state, we would find that every year the number is being increased by 10,000 According to the figures that are available to us, at the end of March 1959 the total number of government employees was 1,41,000. At the end of March 1960, it was 1,53,000; at the end of March 1961 it was 1,63,000 and the latest figure that is made available shows 1,72,000. So, it will be clear from this that every year there is an addition of 10,000 in the army of government employees. But, Sir, the question is, with this addition in the force of the civil services in the State, is efficiency increasing? The answer is clear 'no'. The public administration in the State is deteriorating day by day. Sir, it is a very sorry state of affairs. There is no improvement in the administration in spite of criticism levelled on the floor of this House and suggestions made here; in spite of all this, there has been no improvement during all these years. All evils of public administrative are prevailing in the administration here-red tapism, delay, slackness, corruption, nepotism and one moreism is there, *i.e.*, casteism. The atmosphere of the State seems to be surcharged with casteism. All these isms and evils have vitiated the public administration in the State, not only public administration but the life of the people. Unless the tone of the administration is improved there is no chance of improvement in the State as a whole. There have been a number of reports, Gorwala Report, A. G. R. Committee Report etc., But all their recommendations have proved fruitless. Public Administration has become sluggish and frigid. The administration is also unresponsive. The Hon'ble Chief Minister in his reply to the Governor's Address in 1964 said that there had been improvement to the extent of one or one and half per cent in matters of delay. That means for total improvement it would take a century. It is at a snails pace that the administration is moving. As the A.G.R. committee pointed out the delay and corruption are a vicious circle. On account of delay there is corruption and on account of corruption there is delay. Now the anti-corruption department has been handed over to

the Vigilance Commission. The vigilance has become another hoax because it is not giving any result. It is nearly more than a year since this commission is set up and what progress it has made ? what effect it has on the administration ? It is quite imperceptible. As I have already stated efficiency is decreasing. Similarly there is lack of public mindedness in the services. With increase in the number of higher officers their higher salaries and emoluments, the bureacracy in the State has become more sophisticated. There are rules and procedures but in the State what a common sees is that rules and procedures are meant for the convenience of officers and not for the convenience of public. That is why developmental efforts and planning have failed in this State. A new saying has come to vogue in Gujarati: "Mogalai Gayi Thagare; Peswai Gayi Nagare; Congressayi Gayi Pagare". That means the Moghuls lost on account of erecting huge constructions and monuments ; Peswas lost on account of beating of drums and fighting Wars and finally what about the Congress : Congress is being lost on account of salaries. That is a new saying that has come in force.

Sir with this hierarchy of officers and parapharnalnia of Ministers and Deputy Ministers the administration to worsening. The expenditure on Ministers is increasing, their trunk call Bills and D.A. charges as we could see from the revised estimates has almost doubled and in the next year they are still increased. With all these salaries and higher emoluments, sophisticated bureacratic officers and all the expenditure on account of parapharnalia of Ministers and Deputy Ministers and their hirelings there has come into being in the political life a vested interest. That vested interest is vitiating the whole atmosphere, the political as well as social life of the State. The administration at district and taluk levels is perhaps the worst. There is a Deputy Commissioner at Belgaum whom my colleague Sri V. S. Patil described sometime back as a paper tiger. I want to call him—there is a word in Marathi *Kagad Kuskarya* *i.e.*, a paper scrambler. He is a sort of a man who moves paper up and down, who will play with papers. That is the sort of man we have at the helm of affairs in the district. He may be good at desk work but for a district work it requires an action minded man, a man with imagination, where quick decisions are required and quick disposals are required. A desk worker is not good. If he is good desk worker he must be brought here in secretariat and not kept at the district level.

The techno-economic survey has pointed out :

> " The council wants to emphasis that without good administrative system the whole development efforts come to naught. Therefore the poor achievements in the past decade is purely due to the lack of efficient administrative system geared to the requirements of development ".

According to the Techno Economic Survey also the whole administration is required to be hauled up. A new type of administration is required for planning and development efforts. I will finish with this

(Sri B. R. SUNTHANKAR)

point, with a quotation from the " Public Administration " by Messrs. Avasthi and Maheswari.

> " A new type of administrator is called for if our planning is to be a success. The new administrator has to be action-minded to the point of even becoming aggressive to push the schemes through : human relations oriented, *i.e.*, carring more for the people than for the regulations and procedures; dynamic, *i.e.*, not content with merely pushing the files ; public spirited, *i.e.*, yearning always for the public interest; and persuasive, *i.e.*, able to win public approval, consent and co-operation."

These are very good suggestions and I would appeal to the Chief Minister to concentrate on improving the public administration of the State taking into consideration all these wise suggestions.

I will come to my second point, *i.e.*, regarding the linguistic minorities. The fate of linguistic minorities in the State is woeful—it is tragic. The linguistic minorities are doomed in this State. To be a linguistic minority is a disqualification and a disability. The Hon'ble Chief Minister, when he was a member of the Lok Sabha and when discussion on the S.R.C. report was going on in 1953 was pleading the cause of united Karnataka, at that time he said that Kannadigas were in a minority everywhere—they were a minority in Bombay, they were a minority in Madras and they were a minority in Hyderabad. Further he said I am quoting his words—" so far as democracy is what is is, minorities stand to suffer. It is for that reason that our demand has been insistent." He has conveniently forgotten these very wise words when he came into power. They were his expressions when he was a member of the Lok Sabha. But, when he came in power, he has forgotten all these things. No doubt, minorities stand to suffer, but in this State particularly the stand to suffer the worst. Sir, we are told that the Chief Minister, the Chief Secretary and the Deputy Commissioners of Districts are the custodians of the linguistic minorities. We are told that they are meant to protect the interests of the minorities. But the arm of protection of these custodians has never reached the minorities. The linguistic minorities even do not know that these people are their custodians. As a matter of fact, all the lingustic minorities in the State stand to suffer. But, we the Marati speakers are only vocal; others cannot express themselves because of the tyrany of majority they are terrorised by the linguistic majority. We, Marati people give vent to our feelings ; we have got that boldnese to express our feelings. Sometime back, Sri Maqsood Ali Khan, cried for linguistic justice on the very same Floor of this House. Now, on account of his Deputy Ministership his mouth is gagged. It is a fact that once he cried for this linguistic. In this matter, I can quote the example of Andhra. In Andhra, there is a significant Marathi minority. But, that minority is very happy then.

I had been to Hyderabad and some other places very recently and found there the minority people are quite contented and happy. The decision of the Andhra Government is not to change the *status quo*. They have maintained the *status quo* and the matters are there as they stood on 1st November 1956. But, here the affairs are quite the reverse. There seems to be a conspiracy by the Government against the Marathi speakers in the border areas. The administration seems to be bent upon wiping out the Marathi minority. I will give instances. In Belgaum District, the Marati speakers are about 30 per cent; a considerable and compact area is Marati speaking. The important towns of Belgaum and Nippani are preponderantly Marathi. But in the district all officers and the heads of departments are old Mysoreans, not knowing a word of Marati. The Deputy Commissioner, the Divisional Commissioner, the Superintendent of Police and even the Educational Inspector, do not know a word of Marati. Where in the district nearly half the Primary schools are Marathi and where nearly half the Secondary schools are Marathi, the Educational Inspector is a man who does not know a word of Marathi. Sir, this is deliberately done in order to Kannadise this Marathi area and the Marathi towns. Our Municipalities at Belgaum and Nippani have been taken pver by the Government under some pretext finding some execuse without any sound reason or basis and Administrators haue been appointed. The administrator at Belgaum is an old Mysoreans not knowing Marati. Similarly, the Kannada population of Belgaum City is being augmented by rehabilitating the displaced persons from Hidkal Project and other places They are being rehabilitated in the Belgaum Town. This is deliberately done

As regards services, it is very easy to find service with the Maharashtra Government than in this State. At the Employment Exchange it has been our experience, both in Belgaum and Karwar District, that it is almost impossible for a Marati speaker to get employment through the Employment Exchange. Similarly, as regard promotion. There are cases where Marathi persons have lost promotions only because they have not passed the Kannada test. I know of a case of an employee who was transferr d to this State during Reorganisation of States. He belongs to Maharashtra; he was born in Ratnagiri District. Unfortunately, he was transferred here. He asked for reallotment to the Maharashtra State, but the Mysore Government did not allow him. That unfortunate person, at the same time, had to lose four promotions only because he could not pass the Kannada language test. This is the fate of the linguistic minorities here. Language has become a blockade to service and to promotion. I may quote another instance. The Government have prepared some Textbooks and they were published long back in 1961. There are some contributors of articles and poems to these books, to whom royalties have got to be paid. It is very unfortunate that the royalty of the linguistic minority writers has not been paid. I have been receiving some complaints in this respect. In 1964 when I enquired with the concerned officer he told me that royalties of the Kannadigas had been paid, but royalties of the linguistic minorities

(SRI B. R. SUNTHANKAR)

were not paid. I know it has not been paid uptill now only yesterday I have received a letter from one of the contributor. The textbooks were published in 1961, five years have lapsed, the contributor has not yet received his royalty. I have been representing this matter to the concerned authority, but nothing is being done.

Similarly, Sir, our constituencies are being snached away from us. At present, we have got seven constituencies, wherein we can send our representatives to this House. But according to the new delimitation, there will be only five constituencies for us and therefore, we have lost two constituencies. The constituency of my Hon'ble friend Sri N. O. Samaji, in the Belgaum Taluk, has been made purely a Kannada constituency, so that our representative should not be there. Similarly Hulsoor constituency in Bidar District has been made a reserved constituency.

AN HON'BLE MEMBER.—It is the work of the Delimitation Commission.

SRI B. R. SUNTHANKAR.—But the preliminary proposals are sent by the Government. There is nobody to protect our interests. The Government could have protected us.

MR. SPEAKER.—I must protest against it. The Hon'ble Member is referring to the Legislature and says that nobody is protecting their interest.

SRI B. R. SUNTHANKAR.—Sir, I am speaking about the matter of representation.

MR. SPEAKER.—He is pointing to Reporters. I have been asking him to get me a Marathi Reporter, but he could not help me.

2-30 P.M.

SRI B. R. SUNTHANKAR.—Excuse me, Sir, you are misunderstanding me. I do not mean the Legislature. I am speaking about the constituencies. Our representation is being cut down. That is my point; not about the Legislature or the Reporters. What can the poor Reporters do? I have got all sympathy for them.

In this way, our wings are clipped and our hands and feet are cut down. Similarly there is no provision for technical education. There is no Marathi medium for technical courses even for Apprenticeship and other short-term courses. I am not speaking about polytechnique. I am speaking about the artisans classes. So much of literature is published for the development of agriculture and other things. Several times, we have requested that these may be published in Marathi also. But they are published only in Kannada. Who can understand and know that literature in the Marathi areas? It is the people that should really understand this literature; it is they who are to improve and carry out developments. We really doubt whether Government is earnest. If

they were earnest, they would have supplied Marathi literature to the Marathi people. Similarly, my Hon'ble friend Sri Kadam has again and again been telling in this House about his grievance that Marathi Schools are not given to his Constituency. In Karwar area in North Kanara District, if any application is sent in Marathi, it is not taken note of; it is not heeded at all. It is kept aside or thrown into the waste paper basket. This is the fate of the Marathi people in the administration of the worthy Chief Minister Sri Nijalingappa!

Mr. SPEAKER.—The Whip is constantly appealing to me that the Member has taken more time. Therefore, he may please refer only to points and close his speech.

Sri B. R. SUNTHANKAR.—Yes, Sir. This is the fate of the linguistic minorities. I cannot quote the innumerable grievances, disabilities and disqualifications that are forced upon us; there is nobody to protect us. I do not know what the Chief Minister, the Chief Secretary and the Deputy Commissioner of the District are doing. I would request the Chief Minister to help us to go back as he cannot protect our interests to our satisfaction. He cannot promote our languge, our literature, our culture. Let him protect and develop Kannada literature, Kannada Stage, the Kannada film and culture. We will be glad; we would help him. But I would earnestly request and appeal to him this: let him allow us to go to our-own State; let us go back to Maharashtra; let him be generous and liberal-hearted and let him win the heart of all Maharashtrians. With these few words, I close.

†ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಸಭಾಪತಿಗಳೆ, ಈ ದಿನ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಿರತಕ್ಕಂಥ ಬೇಡಿಕೆಗಳೆಲ್ಲವನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. 45 ನೇ ಬೇಡಿಕೆ ಏನು ಇದೆ, ಆ ಬಗ್ಗೆ ಕೆಲವು ವಿಚಾರಗಳನ್ನು ಮಾತನಾಡ ಬೇಕೆಂದು ನಾನು ಪ್ರಯತ್ನ ಮಾಡುತ್ತೇನೆ. ಇದು ಭಾರಿ ನೀರಾವರಿ ಕಾಮಗಾರಿಗೆ ಸಂಬಂಧಪಟ್ಟ ಒಂದು ಡಿಮ್ಯಾಂಡ್ ಆಗಿರುವುದರಿಂದ ಈ ಸಾಲಿನ ಬಡ್ಜೆಟ್‌ಗಾಗಿ 95,37,900 ರೂಪಾಯಿಗಳ ಅವಶ್ಯಕತೆ ಇದೆ ಎಂದು ಹೇಳಿ ಈ ಸಭೆಯ ಮುಂದೆ ಇಟ್ಟಿದ್ದಾರೆ. ಈ ಭಾರಿ ನೀರಾವರಿ ಯೋಜನೆಗಳ ಬಗ್ಗೆ ಅನೇಕ ವೇಳೆ ಈ ಸಭೆಯ ಮುಂದೆ ಪ್ರಸ್ತಾಪವಾಗಿದೆ. ಅನೇಕ ಸದಸ್ಯರುಗಳು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಸಂಸ್ಥಾನದಲ್ಲಿ ಸುಮಾರು ಶೇಕಡ 8.5 ರಷ್ಟು ಮಾತ್ರ ನೀರಾವರಿಯನ್ನು ಸಾಧನೆ ಮಾಡಿದ್ದೇವೆಂದು ಹೇಳಿ ಈ ವರ್ಷದ ಹಣಕಾಸಿನ ಪತ್ರವನ್ನು ಈ ಸಭೆಯ ಮುಂದೆ ಇಟ್ಟು ಹಣಕಾಸಿನ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಬಹುಶಃ ನೀರಿನ ಸಂಪತ್ತನ್ನು ಇದಕ್ಕಿಂತ ಹೆಚ್ಚಿಗೆ ಉಪಯೋಗಿಸಿಕೊಳ್ಳುವುದಕ್ಕೆ ಆಗಲಿಲ್ಲವೆಂದು ಅವರು ಹೇಳುವುದಾದರೆ ಅವರಿಗೆ ನಾನು ಹೇಳುತ್ತೇನೆ, ನಮ್ಮಲ್ಲಿರತಕ್ಕ ಎಲ್ಲಾ ನೀರನ್ನೂ ಉಪಯೋಗಿಸಿಕೊಳ್ಳುವುದಾದರೆ ನಮ್ಮ ನೀರಾವರಿಯನ್ನು ಶೇಕಡ 24 ರಷ್ಟಕ್ಕೆ ಏರಿಸಬಹುದು ಎಂದು ಹೇಳುತ್ತೇನೆ. 2 ನೇ ಮತ್ತು 3 ನೇ ಪಂಚವಾರ್ಷಿಕಯೋಜನೆಗಳಲ್ಲಿ ಮಾಡಿರುವ ಸಾಧನೆ ಏನು ಎಂಬುದನ್ನು ನಾವು ಯೋಚನೆ ಮಾಡುವುದಾದರೆ 2ನೇ ಪಂಚವಾರ್ಷಿಕ ಯೋಜನೆಯಲ್ಲಿ 33 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಇಟ್ಟು ಅದರಲ್ಲಿ 28 ಕೋಟಿ ರೂಪಾಯಿಗಳನ್ನು ನಿಜವಾಗಿ ಖರ್ಚುಮಾಡಿದ್ದೇವೆ. ಅಂದರೆ, ಶೇಕಡ 85 ಭಾಗ ಖರ್ಚುಮಾಡಿದ್ದೇವೆ. 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕಾಗಿ 40 ಕೋಟಿರೂಪಾಯಿಗಳನು ಇಟ್ಟು ಅದರಲ್ಲಿ 30 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಅಂದರೆ ಶೇಕಡ 75ರಷ್ಟು ಮಾತ್ರ ನಾವು ಹಣ ಖರ್ಚುಮಾಡಿದ್ದೇವೆ. ಇದಕ್ಕಾಗಿ ಇಟ್ಟಿದ್ದ ಹಣವನ್ನು ಏತಕ್ಕೋಸ್ಕರ ನಾವು ಸಂಪೂರ್ಣವಾಗಿ ಖರ್ಚುಮಾಡಲಿಲ್ಲ ಎಂಬುದನ್ನು ಆಲೋಚನೆ ಮಾಡುವುದು ಅವಶ್ಯಕವೆಂದು ತೋರುತ್ತದೆ. ಈ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಲ್ಲಿ ಹರಿಯತಕ್ಕಂಥ 2 ಮುಖ್ಯ ನದಿಗಳು ಇವೆ. ಒಂದು ಕಾವೇರಿ, ಮತ್ತೊಂದು ಕೃಷ್ಣ ನದಿ. ಈ ನದಿಗಳ ನೀರನ್ನು ಎಷ್ಟರಮಟ್ಟಿಗೆ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯ ಎಂಬುದನ್ನು ನಾವು ನೋಡ

(ಶ್ರೀ ಎಂ. ಸಿ. ಬಸಪ್ಪ)

ಬೇಕಾಗಿದೆ. 1924ನೇ ಇಸವಿಯಲ್ಲಿ ಅಗ್ರಿಮೆಂಟ್ ಮದ್ರಾಸ್ ರಾಜ್ಯಕ್ಕೂ ಮೈಸೂರು ರಾಜ್ಯಕ್ಕೂ ಆಯಿತು. ಈ ವಿಚಾರದಲ್ಲಿ ಅನೇಕ ಸಂದರ್ಭಗಳಲ್ಲಿ ಈ ಸಭೆಯ ಮುಂದೆ ಚರ್ಚೆಮಾಡಿದ್ದೇವೆ ಮತ್ತು ಕೇಳಿದ್ದೇವೆ. ಇದರ ವಾಸ್ತವಾಂಶಗಳನ್ನು ಆಲೋಚನೆ ಮಾಡುವುದಾದರೆ ಈಗ 50 ವರ್ಷದಲ್ಲಿ ಬಾಕಿ ಇರುವುದು ಕೇವಲ 6-7 ವರ್ಷಗಳು ಮಾತ್ರ. ಆ ಅಗ್ರಿಮೆಂಟ್‌ನಲ್ಲಿ ನನಗೆ ಗೊತ್ತಿರುವ ಕೆಲವು ಅಂಶಗಳನ್ನು ಹೇಳುವುದಾದರೆ ಕೃಷ್ಣರಾಜಸಾಗರಕ್ಕೆ ಅಣೆಕಟ್ಟನ್ನು ಕಟ್ಟಿ ಸುಮಾರು 2.5 ಸಹಸ್ರ ಎಕರೆಗಳನ್ನು ನೀರಾವರಿಗಾಗಿ ಡೆವಲಪ್ ಮಾಡಬೇಕೆಂದು ಅಗ್ರಿಮೆಂಟ್‌ನಲ್ಲಿದೆ. ಇದರಲ್ಲಿ ಇವತ್ತು ಎಷ್ಟು ಸಾಧನೆ ಮಾಡಿದ್ದೇವೆ ಎಂದರೆ, ಒಂದು ಲಕ್ಷದ 10 ಸಾವಿರ ಎಕರೆಯಷ್ಟನ್ನು ನೀರಾವರಿ ಈ ಜಲಾಶಯದ ಕೆಳಗೆ ಮಾಡಿದ್ದೇವೆ ಎಂದು ಹೇಳಬೇಕಾಗುತ್ತದೆ. ಅದೂ ಅಲ್ಲದೆ 45 ಟಿ.ಎಂ.ಸಿ.ಎಫ್.ಟಿ. ನೀರನ್ನು ಉಪಯೋಗಿಸಿಕೊಂಡು ಒಂದು ಲಕ್ಷದ 10 ಸಾವಿರ ಎಕರೆಯಷ್ಟು ಸಾಗು ಮಾಡುವುದಕ್ಕೆ ಈ ಅಗ್ರಿಮೆಂಟ್‌ನಲ್ಲಿ ನಮ್ಮ ಮೈಸೂರು ಸಂಸ್ಥಾನಕ್ಕೆ ಅವಕಾಶವಿದೆ. ಈ ಬಗ್ಗೆ ನಮ್ಮ ಪ್ರಯತ್ನ ಸ್ವಲ್ಪವಾದರೂ ನಡೆದಿಲ್ಲವೆಂದರೆ ತಪ್ಪಾಗಲಾರದು. ಮೂರನೆಯ ಅಂಶವೆಂದರೆ, ಈಗಾಗಲೇ ಕೃಷ್ಣರಾಜಸಾಗರದಿಂದ ನೇರವಾಗಿ ನಾಲೆಗಳಿಗೆ ನೀರನ್ನು ತೆಗೆದುಕೊಂಡು ವ್ಯವಸಾಯ ಮಾಡತಕ್ಕಂಥ ಅಚ್ಚುಕಟ್ಟಿನ ಬಗ್ಗೆ ಅಗ್ರಿಮೆಂಟನ್ನು ನೋಡುವುದಾದರೆ 29 ಸಾವಿರ ಎಕರೆಯಲ್ಲಿ ನೇರವಾದ ಕಾಲುವೆಗಳನ್ನು ನಿರ್ಮಿಸಿ ನೀರನ್ನು ತೆಗೆದುಕೊಳ್ಳುವ ಒಂದು ಅವಕಾಶವಿದೆ. ಆದರೂ ಕೂಡ ಕಾಲುವೆಗಳಿಗೆ ನೀರನ್ನು ತೆಗೆದುಕೊಂಡಿರತಕ್ಕಂಥ ಅಂಶ ಕೇವಲ 18 ಸಾವಿರ ಎಕರೆಗಳಿಗೆ ಮಾತ್ರ. ಮದ್ರಾಸ್ ಸರ್ಕಾರಕ್ಕೂ ಮೈಸೂರು ಸರ್ಕಾರಕ್ಕೂ ಅಗ್ರಿಮೆಂಟ್ ಆದಾಗ ಕನ್ನಂಬಾಡಿ ಕಟ್ಟೆಯ ಸಂಪರ್ಕದಿಂದ ಮೆಟ್ಟೂರ್ ಡಾಮ್ ಕಟ್ಟಬೇಕು ಎಂದು ಒಂದು ಆಲೋಚನೆ ಮಾಡಿದ್ದರು. ಈಗಾಗಲೆ ಅಲ್ಲಿಯ ಲೋಯರ್ ಭವಾನಿ, ಅಮರಾವತಿ ಮತ್ತು ಕೋಯಿಲಾ ಮುಂತಾದ ನಾನಾ ಅಣೆಕಟ್ಟುಗಳನ್ನು ನಿರ್ಮಿಸಿ ನೀರಿನ ಬಳಕೆಯನ್ನು ಪಡೆದಿದ್ದಾರೆ. ಅದಕ್ಕಾಗಿ ಅವರು ಅಗ್ರಿಮೆಂಟಿನಲ್ಲಿ ಒಂದು ಸಮಾಧಾನವನ್ನು ಮೈಸೂರಿನವರಿಗೆ ಕೊಟ್ಟಿದ್ದಾರೆ. ಎಷ್ಟು ಅನುಕೂಲಗಳನ್ನು ಕೊಟ್ಟಿದ್ದರೋ ಅದರಲ್ಲಿ ಶೇಕಡ 60 ರಷ್ಟು ಭಾಗವನ್ನು ಮೈಸೂರಿನವರು ಡೆವಲಪ್ ಮಾಡಿದರೆ ನಮ್ಮದು ಅಡ್ಡಿಯಿಲ್ಲ ಎನ್ನುವ ಒಂದು ಸ್ವಾತಂತ್ರ್ಯವನ್ನು ಮೈಸೂರು ಸಂಸ್ಥಾನಕ್ಕೆ ಕೊಟ್ಟಿದ್ದರು. ಅದರ ವಾಸ್ತವಾಂಶವನ್ನು ನೋಡುವ ಪಕ್ಷದಲ್ಲಿ ಈಗಾಗಲೆ ಅಗ್ರಿಮೆಂಟಿನಲ್ಲಿ ಇರತಕ್ಕಂಥ ನೀರನ್ನು ಉಪಯೋಗಿಸುವುದಕ್ಕೆ ಆಗಿಲ್ಲ. ಕಾವೇರಿಯ ಬೇಸ್‌ನಲ್ಲಿ ಬಹುಶಃ ನಾವು ಈಗ ಯೋಜನೆ ಮಾಡಿರುವುದು ಲಕ್ಷ್ಮಣತೀರ್ಥ, ಹೇಮಾವತಿ, ಹಾರಂಗಿ. ಈ ಎಲ್ಲಾ ಯೋಜನೆಗಳು ಕಾರ್ಯಗತವಾದರೆ ನಾವು ಅವರ ಮಟ್ಟಕ್ಕೆ ಹೋಗದೆ ಇದ್ದರೂ ಸ್ವಲ್ಪವಾದರೂ ಅವರ ಮಟ್ಟಕ್ಕೆ ಹೋಗಬಹುದು. ಈ ಸಾಲಿನ ಬಡ್ಜೆಟ್‌ನಲ್ಲಿ ಹಾರಂಗೀ ಯೋಜನೆಗೆ ಒಂದು ಲಕ್ಷ ರೂಪಾಯಿ ಲಕ್ಷ್ಮಣತೀರ್ಥಕ್ಕೆ ಒಂದು ಲಕ್ಷರೂಪಾಯಿ, ಹೇಮಾವತಿ ಯೋಜನೆಗೆ 2 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಈ ಯೋಜನೆಗಳನ್ನು ಜಾಗ್ರತೆ ಕಟ್ಟುವುದಕ್ಕೆ ವಿಶೇಷ ಪ್ರಯತ್ನ ಮಾಡುವುದು ಬಹಳ ಅವಶ್ಯಕವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಎರಡನೆಯ ಅಂಶ ಕೃಷ್ಣ ದಂಡೆ. ಕೃಷ್ಣನದಿ ವಿಚಾರದಲ್ಲಿ ಮೈಸೂರಿಗೆ ಏನು ಕೊಟ್ಟಿದ್ದಾರೆ, 600 ಟಿ.ಎಂ.ಸಿ.ಎಫ್.ಟಿ. ಅದೂ ಸಾಲದು, ಇನ್ನೂ ಕೊಡಬೇಕು. ಆಂಧ್ರಕ್ಕೆ ಗೋದಾವರಿ ನೀರು ತೆಗೆದುಕೊಳ್ಳುವ ಅವಕಾಶ ಇದೆ, ಆದ್ದರಿಂದ ಅಡ್‌ಹಾಕ್ ಅಲಾಟ್‌ಮೆಂಟ್ ಏನು ಕೊಡುತ್ತೀರಿ ಅದನ್ನು 800 ಟಿ.ಎಂ.ಸಿ. ಆದರೂ ಕೊಡಬೇಕು ಎಂದು ಈ ಸಭೆಯಲ್ಲಿ 2-3 ದಿವಸ ಚರ್ಚೆ ನಡೆದು, ಕೇಂದ್ರ ಸರ್ಕಾರದವರ ಮುಂದೆ ಸರಿಯಾದ ರೀತಿಯಲ್ಲಿ ಅಂಕಿ ಅಂಶಗಳನ್ನು ಇಟ್ಟು, ಸ್ವಲ್ಪ ಸಾಧನೆ ಮಾಡಿದ್ದಾರೆ. ಈ ಬಗ್ಗೆ ನಾವು ಕೃಷ್ಣಾ, ಮಲಪ್ರಭಾ, ಘಟಪ್ರಭಾ ಸಂಬಂಧವಾಗಿ ನಾನಾ ಯೋಜನೆಗಳನ್ನು ಕಾರ್ಯಗತ ಮಾಡಲು ಪ್ರಯತ್ನ ಮಾಡಿದ್ದೇವೆ. ಬಹುಶಃ ನಾವಾದರೂ ಈ ಪ್ರಾಜೆಕ್ಟ್ ನಿರ್ಮಾಣದ ಬಗ್ಗೆ ಕಾಯದೆ ಇಲ್ಲಿಯವರೆಗೆ ಈ ಪ್ರಾಜೆಕ್ಟ್‌ನಲ್ಲಿ ಏನು ಕೆಲಸ ನಡೆದಿದೆ ಎಂದು ಕೂಲಂಕಷವಾಗಿ ಪರಿಶೀಲನೆ ಮಾಡಿದ ಪಕ್ಷದಲ್ಲಿ ಮಾನ್ಯ ಹಣಕಾಸಿನ ಮಂತ್ರಿಗಳು ಅವರ ಭಾಷಣದಲ್ಲಿ ಹೇಳಿದ್ದಾರೆ, 500 ಕೋಟಿ ರೂಪಾಯಿಗಳು, ಬೇಕಾಗುತ್ತದೆ. 15 ವರ್ಷ ಕಾರ್ಯಕ್ರಮ ಹಾಕಿಕೊಂಡು ಕೆಲಸ ಮಾಡಿದರೆ ಸಾಧನೆ ಮಾಡುವುದಕ್ಕೆ ಆದೀತು ಎಂದು ಆಶಾಭಾವನೆ ತೋರಿಸಿದ್ದಾರೆ. ಆದರೆ ನಾವು ಹೋಗತಕ್ಕ ವೇಗ ಏನು ಇದೆ, ಅದರ ಪ್ರಕಾರ 500 ವರ್ಷ ಆದರೂ ಕೂಡ ಈ ಗುರಿಯನ್ನು ಸಾಧನೆ ಮಾಡುವುದಕ್ಕೆ ಆಗುತ್ತದೋ ಇಲ್ಲವೋ ಎನ್ನುವ ಶಂಕೆ ಬರತಕ್ಕ ರೀತಿಯಲ್ಲಿ ಘಟಪ್ರಭಾ ಮಲಪ್ರಭಾ ಹಾಗೂ ಅಪ್ಪರ್ ಕೃಷ್ಣ ನಡೆಯುತ್ತಾ ಇದೆ. ಬಡ್ಜೆಟ್ ಪ್ರಾವಿಷನ್ ನೋಡಿದರೆ, ಮಲಪ್ರಭಾ ಒಂದಕ್ಕೆ 70 ಲಕ್ಷರೂಪಾಯಿಗಳನ್ನು ಕೊಟ್ಟಿದ್ದಾರೆ. ಉಳಿದ ಎಲ್ಲಾ ಯೋಜನೆಗಳಿಗೂ ಬಹಳ ಕಡಿಮೆ ಕೊಟ್ಟಿದ್ದಾರೆ. ಆಲಮಟ್ಟಿ ಡ್ಯಾಮ್ ನೋಡಿದರೆ ಟ್ರೆಂಚನ್ನು ಮಾತ್ರ

ತೆಗೆದಿದ್ದಾರೆ. ಪ್ರವಾಹ ಬಂದಾಗ ಅದು ಸಿಲ್ಟಿನಿಂದ ತುಂಬಿ ಹೋಗುತ್ತದೆ, ಮುಂದಿನ ವರ್ಷ ಸಿಲ್ಟ್ ತೆಗೆಯುವುದು, ಹೀಗೆ ನಡೆದುಕೊಂಡು ಹೋಗುವುದಕ್ಕೆ ಅವಕಾಶ ಇದೆ. ಅಪ್ಪರ್ ಕೃಷ್ಣ ಯೋಜನೆಗಳ ಪೈಕಿ ಒಂದು ಜಿಜ್ಞಾಸೆ ಬಂದಿದೆ. ಮಾನ್ಯ ಮಂತ್ರಿಗಳು ಒಂದು ವಿವರಣೆ ಕೂಡ ಸೈಟ್ ಬದಲಾವಣೆ ಮಾಡತಕ್ಕ ಬಗ್ಗೆ ಕೊಡಬೇಕಾದುದು ಅಗತ್ಯ. ನನಗೆ ಬಂದ ಅನುಮಾನ ಸಭೆಯ ಮುಂದೆ ಇಡುತ್ತೇನೆ. ಮೊದಲು ಆಲಮಟ್ಟಿ ಸ್ಟೋರೇಜ್ 43.6 ಟಿ.ಎಂ.ಸಿ. ಮತ್ತು ನಾರಾಯಣಪುರದ 49 ಟಿ.ಎಂ.ಸಿ. ಎಂದು ಯೋಚನೆ ಮಾಡಿದ್ದರು. ನಾರಾಯಣಪುರದಲ್ಲಿ ಅನೇಕ ಕೆಲಸಕಾರ್ಯಗಳನ್ನು ಮಾಡಿದ್ದರೂ ಕೂಡ, ಸರ್ಕಾರ ಆ ನಿವೇಶವನ್ನು ಸಿದ್ದಾಪುರಕ್ಕೆ ಬದಲಾಯಿಸುವುದು ಅಗತ್ಯ ಎಂದು ತಜ್ಞರ ಅಭಿಪ್ರಾಯದ ಮೇಲೆ ಒಪ್ಪಿಕೊಂಡಿದ್ದಾರೆ. 47 ಟಿ.ಎಂ.ಸಿ. ಸಿದ್ದಾಪುರದಲ್ಲಿ ಇರುವುದರಿಂದ ಈ ಬದಲಾವಣೆಯಿಂದ ತೊಂದರೆಯಾಗುತ್ತದೆ ಎಂದು ಈ ಸಭೆಯಲ್ಲಿ ಶಂಕೆಯನ್ನು ವ್ಯಕ್ತಪಡಿಸಿದಾಗ ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟರು, ಸ್ಟೋರೇಜ್ ಕೆಪಾಸಿಟಿಯನ್ನು ಆಲಮಟ್ಟಿಯಲ್ಲಿ 120 ಅಡಿಗೆ ಏರಿಸುವುದರಿಂದ 120 ಟಿ.ಎಂ.ಸಿ. ವಾಟರ್ ಸ್ಟೋರ್ ಮಾಡುವುದಕ್ಕೆ ಆಗುತ್ತಿದೆ. ಆದುದರಿಂದ ಆಲಮಟ್ಟಿ ಮತ್ತು ಸಿದ್ದಾಪುರ ಎರಡೂ ಸೇರಿ 144 ಟಿ.ಎಂ.ಸಿ. ನೀರು ಉಪಯೋಗಿಸಬಹುದು. ಇದರಿಂದ ನಮ್ಮ ಸಂಸ್ಥಾನಕ್ಕೆ ಬೇಕಾದ ನೀರು ಕಡಿಮೆ ಆಗುವುದಿಲ್ಲ ಎಂದು ಹೇಳಿದರು. ಆಲಮಟ್ಟಿ ಕಟ್ಟೆ ಎತ್ತರಿಸುವುದರಿಂದ ನಮಗೆ ಅಪಾರ ನಷ್ಟವಾಗುತ್ತದೆ. ಬಾಗಲಕೋಟೆ ಊರಿನ ಕೆಲವು ಭಾಗ ಮುಳುಗುತ್ತದೆ ಎನ್ನುವ ಶಂಕೆ ಇದೆ. ಆದರೂ ಪರವಾ ಇಲ್ಲ. ನೀರು ಉಪಯೋಗಿಸಬೇಕು, ಮಾಡೋಣ ಎಂದರೂ ಅವರಲ್ಲಿ ನೀರನ್ನು ಶೇಖರಣೆ ಮಾಡಿದ ಮಾತ್ರಕ್ಕೆ, ನಾರಾಯಣಪುರದಿಂದ ಬದಲಾಯಿಸಿ 49.325 ಟಿ.ಎಂ.ಸಿ. ನೀರನ್ನು ಏತಕ್ಕೋಸ್ಕರ ಬಿಟ್ಟು ಕೊಡಬೇಕು ? ಸಿದ್ದಾಪುರ ಕಟ್ಟುವುದರಿಂದ, 20 ಟಿ.ಎಂ.ಸಿ. ನೀರು ಸಂಸ್ಥಾನಕ್ಕೆ ನಷ್ಟ ಆಗುವ ಪರಿಸ್ಥಿತಿ ಬರುತ್ತದೆ. 20 ಟಿ. ಎಂ. ಸಿ. ಉಪಯೋಗಿಸುವ ಅವಕಾಶವನ್ನು ನಮ್ಮ ಸಂಸ್ಥಾನ ಏತಕ್ಕೆ ಕಳೆದುಕೊಳ್ಳಬೇಕೆಂದು ಆಲೋಚನೆ ಮಾಡಬೇಕಾದುದು ಮುಖ್ಯ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಒಂದು ಅಂಶ ದೊಡ್ಡ ನೀರಾವರಿ ಕಾಮಗಾರಿಗಳ ಬಗ್ಗೆ ಹೇಳಬೇಕು ಎಂದರೆ ಸರ್ಕಾರದ ಧೋರಣೆಯಲ್ಲಿ

ವಿಶೇಷ ಮಹತ್ತರವಾದ ಬದಲಾವಣೆಗೆ ಅವಕಾಶ ಇದೆ. ಬಹುಶಃ ತಾವು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ 80 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಏನು ಸಂಕಲ್ಪ ಮಾಡಿದ್ದಿರೋ, ಆದನ್ನಾದರೂ ಕೂಡ ನಾಲ್ಕನೆಯ ಯೋಜನೆಯಲ್ಲಿ ನಡೆಸಿಕೊಳ್ಳುವುದು ಸಾಧ್ಯವೇ ? ಮೂರು ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇಟ್ಟಿದ್ದ ಹಣ ಖರ್ಚು ಮಾಡಿದೆ. ಪ್ರಗತಿ ಸಾಧಿಸದೆ ಮಾಡುವುದಕ್ಕೆ ಆಗಲಿಲ್ಲ. ಇದರಿಂದ ಸಂಸ್ಥಾನದಲ್ಲಿ ನೀರು ಬಳಕೆ ಮಾಡಿಕೊಳ್ಳದೆ ತೊಂದರೆಯಾಗಬಹುದು. ಒಂದೇ ಒಂದು ವಿಚಾರ ಹೇಳುತ್ತೇನೆ. ಕೇಂದ್ರದಲ್ಲಿ ಒಂದು ಪಾಲಿಸಿ ಇಟ್ಟುಕೊಂಡಿದ್ದಾರೆ. ರೀಜನಲ್ ಇಂಬ್ಯಾಲೆನ್ಸ್ ಇರಬಾರದು ; ಏರಿಯಾವೈಸ್ ಡೆವಲಪ್‌ಮೆಂಟ್ ಆಗಬೇಕು ಎಂದು ಕೇಂದ್ರದವರು ನಮಗೆ ಸಹಾಯ ಕೊಡುತ್ತಾ ಇದ್ದಾರೆ. ನಮ್ಮ ದಕ್ಷಿಣ ಭಾರತದಲ್ಲಿ ಇರತಕ್ಕ ಸಂಸ್ಥಾನಗಳನ್ನು ತೆಗೆದುಕೊಂಡರೆ ಮದ್ರಾಸಿನಲ್ಲಿ 35 ರಿಂದ 40 ಪರ್ಸೆಂಟು ನೀರಾವರಿ ಇದೆ. ಆಂಧ್ರದಲ್ಲಿ 26 ರಿಂದ 30 ಪರ್ಸೆಂಟು ನೀರಾವರಿ ಇದೆ. ಹೀಗಿದ್ದರೂ ಕೂಡ ನಾಗಾರ್ಜುನಸಾಗರ ಔಟ್‌ಸೈಡ್ ದಿ ಪ್ಲಾನ್ ತೆಗೆದುಕೊಂಡು ಸಹಾಯ ಕೊಟ್ಟು 6 ಲಕ್ಷ ಎಕರೆ ಇರಿಗೇಟ್ ಮಾಡುವ ಸೌಕರ್ಯ ಕೊಟ್ಟಿರುವಾಗ, ಮೈಸೂರು ಸಂಸ್ಥಾನಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾ ಹೇಳಿದರು ? ಒಬ್ಬಿಬ್ಬರು ಮಂತ್ರಿಗಳು ಒಪ್ಪಿಕೊಂಡರೂ ಕೂಡ ಎಲ್ಲರನ್ನೂ ಒಪ್ಪಿಸುವುದು ಕಷ್ಟವಾಗುತ್ತದೆ ಎಂದು ನಾನಾದರೂ ಸಲಹೆ ಮಾಡುತ್ತೇನೆ ಈ ಬಗ್ಗೆ ಹೋರಾಟ ನಡೆಸಿದರೂ ಪರವಾಯಿಲ್ಲ, ನಮ್ಮ ಸಂಸ್ಥಾನದಲ್ಲಿ 9 ಪರ್ಸೆಂಟ್ ನೀರಾವರಿ ಇರತಕ್ಕ ಬಿಜಾಪುರ, ಗುಲ್ಬರ್ಗ ಪ್ರದೇಶ ಬರಗಾಲಕ್ಕೆ ತುತ್ತಾಗುತ್ತಿದೆ. ಅಂಥ ಕಡೆ ನೀರಾವರಿ ಹೆಚ್ಚಿಸಿ ದೇಶದ ಸಂಪತ್ತನ್ನು ಹೆಚ್ಚಿಸುವ ಬಗ್ಗೆ ಕೇಂದ್ರದಲ್ಲಿ ಹೋರಾಟ ನಡೆಸಿದರೂ ಚಿಂತೆ ಇಲ್ಲ. ಹೇಗೆ ನಾಗಾರ್ಜುನ ಸಾಗರಕ್ಕೆ ಹಣ ಕೊಟ್ಟಿದ್ದಿರೋ ಹಾಗೆ ಮೈಸೂರು ಸಂಸ್ಥಾನಕ್ಕೂ ಹಣ ದೊರಕಿಸಿಕೊಡಿ ಎಂದು ಕೇಂದ್ರ ಸರ್ಕಾರವನ್ನು ಕೇಳಿ ಅಪ್ಪರ್ ಕೃಷ್ಣ ನಾಲ್ಕನೆ ಯೋಜನೆ ಮುಗಿಯುವುದರೊಳಗೆ ಕಾರ್ಯಗತ ಮಾಡಿ, ಅದರಿಂದ ಬರಗಾಲ ಬರತಕ್ಕ ಜಿಲ್ಲೆಗಳಿಗೆ ನೀರನ್ನು ಒದಗಿಸುವ ಪ್ರಯತ್ನ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. SPEAKER.—If the members do not co-operate with me by adhering to the time, the last names in the list may not be able to get time. Four hours were allotted for this Debate, without any tea break and also without providing for interjections and interruptions.

† **Sri S. M. KRISHNA** (Maddur).—I am sure the chair will appreciate the importance of this Demand. Two years ago, we had discussion on General Administration only because it is a very important demand. Today all these demands are clubbed. If the Chief Minister is agreeable we could again sit tomorrow and also in the afternoon. Today discussion may go on on these demands and tomorrow the Chief Minister may reply and in the afternoon, we can take up the Demand for Education.

Mr. SPEAKER.—Two days have been allotted for Demand on Education. Are two days required for Education ?

Sri S. R. KANTHI (Minister for Education).—Two days may not be required.

Mr. SPEAKER.—Suppose we allow the Debate for the rest of the day and have one hour for reply tomorrow ?

Sri S. NIJALINGAPPA.—I have no objection to our sitting an hour more tomorrow if it is going to help discussion.

Mr. SPEAKER.—We will see. Sri Deve Gowda will continue discussion.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ನಮ್ಮ ಮುಂದೆ ಮಂಡಿಸಿರತಕ್ಕ ಡಿಮಾಂಡ್‌ಗಳ ಪೈಕಿ, 30, 19, ಹಾಗೂ 29 ಮತ್ತು 45 ಈ ನಾಲ್ಕು ಡಿಮಾಂಡ್‌ಗಳ ಮೇಲೆ ಮಾತ್ರ ನಾನು ಪ್ರಸ್ತಾಪಮಾಡಲಿಚ್ಛಿಸುತ್ತೇನೆ. ಈ ದಿವಸ ನಮ್ಮ ಕಾಂಗ್ರೆಸ್ ಸದಸ್ಯರಾಗಿರತಕ್ಕ ಶ್ರೀಮಾನ್ ಬಸಪ್ಪನವರು ದೊಡ್ಡ ನೀರಾವರಿಗಳ ಬಗ್ಗೆ ತಮ್ಮ ಗಮನವನ್ನು ಎಳೆದಿದ್ದಾರೆ. ಇದರ ಬಗ್ಗೆ ಪುನಃ ಕೆಲವು ಅಂಶಗಳನ್ನು ಮಾನ್ಯ ಮುಖ್ಯ-ಮಂತ್ರಿಯವರ ಗಮನಕ್ಕೆ ತಂದು ಅದರಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಮಾಡುತ್ತೇನೆ. ಈ ಮಾನ್ಯ ಸಭೆಯಲ್ಲಿ ಖಾಸಗೀ ನಿರ್ಣಯದ ಮೇಲೆ ಮಾತನಾಡಿದಾಗ ಏನೋ ಆಶಾದಾಯಕವಾಗಿತ್ತು, ಆದರೆ ಈ ಬಜೆಟ್‌ನಲ್ಲಿ ಒದಗಿಸಿರತಕ್ಕ ಹಣವನ್ನು ನೋಡಿದರೆ ಬಹುಶಃ ನಮ್ಮ ಆಶೆಯೆಲ್ಲಾ ನಿರಾಶೆಯಾಗುವ ಸಂಭವವಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಕಾವೇರಿ ನೀರಿನ ಬಗ್ಗೆ 1924ರಲ್ಲಿ ಮಾಡಿದ ಅಗ್ರಿಮೆಂಟನ್ನು ತುಲನ ಮಾಡಿ ನೋಡುವುದಾದರೆ ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಬಹಳ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕಾಗುತ್ತದೆ ಎಂದು ಒತ್ತಾಯಪೂರ್ವಕವಾಗಿ ಹೇಳಬೇಕಾಗುತ್ತದೆ. ಇವತ್ತು ಮದ್ರಾಸ್ ಸರ್ಕಾರದವರು ಕಾವೇರಿ ಬೇಸಿನ್‌ನಲ್ಲಿ 18·75 ಲಕ್ಷ ನೀರಾವರಿಗೆ ತಂದಿದ್ದಾರೆ. ಇವತ್ತು ಡೆಲ್ಟಾ ಇರಿಗೇಶನಲ್ಲ 12 ಲಕ್ಷ ಮೆಟ್ಟೂರ್ ಇರಿಗೇಶನ್‌ನಲ್ಲಿ 3·10 ಅಭಿವೃದ್ಧಿ ಮಾಡಿದ್ದಾರೆ. ಭವಾನಿಯೊಳಗೆ ಎರಡು ಲಕ್ಷ 31 ಸಾವಿರ, ಅಮರಾವತಿಯಲ್ಲಿ 20 ಸಾವಿರ ಚಿಲ್ಲರೆ, ಮೆಟ್ಟೂರ್ ಹೈಲೆವೆಲ್ ಕೆನಾಲ್‌ನಲ್ಲಿ 25 ಸಾವಿರ ಹಾಗೂ ಇನ್ನೂಳಿದ ಪ್ರೊಜೆಕ್ಟ್‌ಗಳಿಂದ ಅಂದರೆ ಕಟ್ಟಳೆ ಯೋಜನೆಯಿಂದ 30 ಸಾವಿರ, ಪಲ್ಲಂಬಾಡಿ ಯೋಜನೆಯಿಂದ ನ್ಯೂಯೇಲ್ ಯೋಜನೆಯಿಂದ 20 ಸಾವಿರ ಎಕರೆ ಮತ್ತು ಡೆವಲಪ್ ಮೆಂಟ್ ಆಫ್ ಡೆಲ್ಟಾ ಇರಿಗೇಷನ್ ಒಟ್ಟಿನಲ್ಲಿ 18 ಲಕ್ಷ 75 ಸಾವಿರ ಎಕರೆಗಳನ್ನು ಇರಿಗೇಟ್ ಮಾಡಿದ್ದಾರೆ. ಆದರೂ ಮೈಸೂರು ಸರ್ಕಾರ ಯಾವ ದಿಕ್ಕಿನಲ್ಲಿ ಹೋಗುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಇದರ ಜೊತೆಗೆ ಹೊಗೆನಕಲ್ ಪ್ರೊಜೆಕ್ಟಿನ ಬಗ್ಗೆ ಅವರಿಗೆ ಒಂದು ಅಡ್ವಂಟೇಜ್ ತರುವಂತೆ joint venture ಮಾಡಬೇಕೆಂದು ಸೆಂಟ್ರಲ್ಲಿನಲ್ಲಿ ಒತ್ತಾಯ ಮಾಡುತ್ತಿರುವ ಬಗ್ಗೆ ನಾವು ಸ್ವಲ್ಪ ಯೋಚನೆಮಾಡಬೇಕಾಗುತ್ತದೆ. ಇದರಲ್ಲಿ ನಾವು ನಮ್ಮ ಮೈಸೂರನ್ನು ನೋಡುವುದಾದರೆ, ನಾವು ಸ್ವಾತಂತ್ರ್ಯ ಬಂದ ಮೇಲೆ ಮಾಡಿರತಕ್ಕ ಅಂಕಿ ಅಂಶಗಳನ್ನು ನೋಡುವುದಾದರೆ, ಅದು ಕೇವಲ ಎರಡು ಲಕ್ಷ 26 ಸಾವಿರ ಎಕರೆ ಮಾತ್ರ. ಅದು ಕೂಡ ಹಳೆಯ ಆಡಳಿತದ ಕಾಲದಲ್ಲಿ ಶ್ರೀ ವಿಶ್ವೇಶ್ವರಯ್ಯನವರ ಕಾಲದಲ್ಲಿ ಆಗಿದ್ದು. ಇನ್ನೂ ಸಣ್ಣ ಸಣ್ಣ ಅಣೆಕಟ್ಟುಗಳನ್ನು ಸೇರಿ ಒಟ್ಟು ಎರಡು ಲಕ್ಷ 26 ಸಾವಿರ ಎಕರೆಗಳನ್ನು ಇರಿಗೇಟ್ ಮಾಡಿ

ದ್ದಾರೆ. ಇದರಿಂದ ನನಗಾದರೂ ಒಂದು ಅನುಮಾನ ಏನೆಂದರೆ, ಆ 1924ರ ಒಪ್ಪಂದದ ಏನಿದೆ ಅದು ಪೂರೈಸಿದ ಮೇಲೆ ಮೈಸೂರು ಮತ್ತು ಮದ್ರಾಸ್‌ನವರು ಮಾಡಿಕೊಂಡ ಒಪ್ಪಂದದ ಫಲಿತಾಂಶ ಏನಾಗುತ್ತದೆ ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ಯೋಚನೆ ಮಾಡಬೇಕು. ಈ ವಿಚಾರದಲ್ಲಿ 1959ರಲ್ಲಿ ಶ್ರೀ ಮಾನ್ ಗಾಡ್ಗಿಲ್‌ರವರು ಕೊಟ್ಟಿರುವ ರಿಪೋರ್ಟ್‌ನ ಕೆಲವು ಅಂಶ ವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಇವತ್ತು ಅವರು ಒಂದು ಕಡೆ ಈ ರೀತಿ ಹೇಳಿದ್ದಾರೆ:

Extract from Gadgil Committee Report–Page 37–Appendix VI

"III. When the Mysore Government desire to construct any "New Irrigation Reservoir" or any "new anikat" requiring the previous consent of the Madras Government under the last preceding Rule, then, full informatian regarding the proposed work shall be forwarded to the Madras Government and the consent of that Government shall be obtained previous to the actual commencement of the work. The Madras Government shall be bound not to refuse such consent except for the protection of prescriptive right already acquired and actually existing, the existence, extent, and nature of such right and the mode of exercising it being in every case determined in accordance with the law on the subject of prescriptive right to use of water and in accordance with what is fair and reasonable under all circumstances of each individual case."

ಇವತ್ತು ಅವರು ಆ ಅಗ್ರಿಮೆಂಟಿನ ಮಿತಿಯನ್ನು ಮುರಿದಿದ್ದಾರೆ. ಯಾವ ಹೊಸ ಯೋಜನೆ ಯನ್ನು ಮದ್ರಾಸಿನವರು ತೆಗೆದುಕೊಳ್ಳಬೇಕಾದರೂ ಕೂಡ ನಮ್ಮ ಒಂದು ಅನುಮತಿಯನ್ನು ಪಡೆಯಬೇಕು. ಆದರೆ ಇವತ್ತು ಆ ಪ್ರೋಜೆಕ್ಟ್ ರಿಪೋರ್ಟ್‌ನಲ್ಲಿ ಮೈಸೂರನ್ನು ಗಣನೆಯೇ ಮಾಡದೆ ಅದನ್ನು ಮುರಿದಿದ್ದಾರೆ. ಇಂತಹ ಸನ್ನಿವೇಶಗಳಲ್ಲಿ ಈ ಅಗ್ರಿಮೆಂಟನ್ನು ಮುರಿದು ಇನ್ನೂ ಮುಂದಕ್ಕೆ ಉಪಯೋಗಿಸಿಕೊಳ್ಳತಕ್ಕಂತಹ ಪ್ರಿಸ್ಕ್ರಿಪ್ಟಿವ್ ರೈಟ್ ಅವರಿಗೆ ಬರುತ್ತದೆ ಎನ್ನ ತಕ್ಕಂತಹ ಅಭಿಪ್ರಾಯವನ್ನೂ ನಾವು ಯೋಚನೆ ಮಾಡಬೇಕಾಗಿದೆ. ನಮ್ಮಲ್ಲಿರತಕ್ಕ ರಿಸರ್‌ವೋಯರ್ ನಿಯಮಗಳ ಮೇಲೆ ಇರತಕ್ಕಂತಹ ಒಂದು ಹಕ್ಕನ್ನು ನಾಳೆ ದಿವಸ ಕಾಪಾಡತಕ್ಕ ಸನ್ನಿವೇಶ ಬರು ತ್ತದೆ. ಅದರಿಂದಾಗಿ ನಮ್ಮ ಈ ಹಕ್ಕನ್ನು ಕಾಪಾಡತಕ್ಕ ಕಾರ್ಯಕ್ರಮವನ್ನು ಮೈಸೂರು ಸರ್ಕಾರ ದವರು ಯೋಚನೆ ಮಾಡಬೇಕು. ಈ ಬಗ್ಗೆ ಮೈಸೂರು ಸರ್ಕಾರದವರೂ ಕೇಂದ್ರ ಸರ್ಕಾರ ದವರೂ ಸೇರಿ, ಇದಕ್ಕೆ ಬೇಕಾದಂತಹ ಆರ್ಬಿಟ್ರೇಟರ್ಸ್‌ನ್ನು ನೇಮಕ ಮಾಡಿ ಒಂದು ಒಪ್ಪಂದಕ್ಕೆ ಬರುವಂತೆ ಮಾಡಬೇಕು ಮತ್ತು ನಮ್ಮ ಹಕ್ಕನ್ನು ನಾವು ಸ್ಥಾಪಿಸಿಕೊಳ್ಳಬೇಕು. ನಾವು ನಮ್ಮ ಹಕ್ಕನ್ನು ಈಗಲೇ ಕಾಪಾಡದೆ ಹೋದರೆ 1974 ಕಳೆದ ಮೇಲೆ ನಮ್ಮ ಒಂದು ನಿಜವಾದ ಹಕ್ಕು ಏನಿದೆ ಅದರಲ್ಲಿ ಸ್ವಲ್ಪ ಅನುಮಾನವಾಗುತ್ತದೆ. ಏಕೆಂದರೆ ಇಂದಿನ ಸನ್ನಿವೇಶಗಳನ್ನು ನೋಡಿದರೆ ನಾವು ಬಹಳ ಹಿಂದಿದ್ದೇವೆ. ಇವತ್ತು ನಾವು ಎಷ್ಟು ಪ್ರೋಜೆಕ್ಟುಗಳನ್ನು ಮಾಡಿದರೂ, ನಾಲ್ಕಾರು ಸ್ಕೀಮುಗಳನ್ನು ತೆಗೆದುಕೊಂಡರೂ ಕೂಡ ನಮಗೆ 180 ಟಿ. ಎಂ. ಸಿ. ನೀರನ್ನು ಉಪಯೋಗಿಸಿ ಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಈ ವಿಷಯದಲ್ಲಿ ನಾವು ಸರಿಯಾದ ಟೆಕ್ನಿಕಲ್ ಎಕ್ಸ್‌ಪರ್ಟ್ಸ್‌ ಅಭಿಪ್ರಾಯಗಳನ್ನು ತೆಗೆದುಕೊಂಡು ನಮ್ಮ ಹಿತವನ್ನು ನಾವು ಕಾಪಾಡಿಕೊಳ್ಳ ಬೇಕು. ಇವತ್ತಿನ ದಿವಸ ಅವರು ಈ ಅಗ್ರಿಮೆಂಟನ್ನು ಮುರಿದು ಏನು ನೀರಾವರಿ ಮಾಡಿದ್ದಾರೆ, ಅದಕ್ಕೋಸ್ಕರ ನಾವು ನಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು; ಮತ್ತು ಅದನ್ನು ವಿಮರ್ಶೆ ಮಾಡ ಬೇಕು. ನಮ್ಮ ನೀರಿನ ಹಕ್ಕು ಇವತ್ತು ಏನಿದೆ, ಅದನ್ನು ನಾವು ಅವಶ್ಯವಾಗಿ ಕೈಬಿಡಬಾರದು, ಇದರಿಂದ ಮಹಾ ಅನ್ಯಾಯವಾಗುತ್ತದೆ ಎಂದು ನಾನು ಇಲ್ಲಿ ಬಹಳ ಮನನೊಂದು ಹೇಳ ಬೇಕಾಗಿದೆ.

ಇನ್ನು ಎರಡನೆಯದಾಗಿ ಕೆ. ಆರ್. ಅಣೆಕಟ್ಟಿಗೆ ಮದ್ರಾಸ್ ಸರ್ಕಾರದವರು ಒಬ್ಬ ಅಧಿಕಾರಿ ಯನ್ನು ನೇಮಕ ಮಾಡಿದ್ದಾರೆ. ಮದ್ರಾಸ್‌ನವರು ಗ್ರ್ಯಾಂಡ್ ಅಣೆಕಟ್ಟೆಯ ಮೇಲೆ ಏನ ಆತೂವಕೆ

(ಶ್ರೀ ಹೆಚ್. ಡಿ. ದೇವೇಗೌಡ)

ಅಡಿ ನೀರು ಹರಿಯಬೇಕು ಎಂದು ನಿಗದಿ ಮಾಡಿದ್ದಾರೆ, ಅದರಿಂದ ಇವತ್ತಿನ ದಿವಸ ಅವರಿಗೆ ಹೆಚ್ಚಿನ ತರದಲ್ಲಿ ನೀರು ಹೋಗುತ್ತಾ ಇದೆ. ನಾನ್ ಶೆಡೂಲಿನಲ್ಲಿರತಕ್ಕ ನದಿಗಳ ನೀರನ್ನು ಅವರು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ. ಇದರಿಂದ ಕೂಡ ಮೈಸೂರು ಸರ್ಕಾರಕ್ಕೆ ಬಹಳ ಅನ್ಯಾಯವಾಗಿದೆ ಎಂದು ನಾನು ಇಲ್ಲಿ ಹೇಳಬಯಸುತ್ತೇನೆ. ಈ ಎರಡು ದೃಷ್ಟಿಯಿಂದಲೂ ಪ್ರಿಸ್ಕ್ರಿಪ್ಟಿವ್‌ರೈಟ್, ಮತ್ತು ರೈಪೇರಿಯನ್‌ರೈಟ್ಸ್ ಈ ಎರಡರ ಬಗ್ಗೆ ತಾವು ತಜ್ಞರ ಹಾಗೂ ಲೀಗಲ್ ಒಪಿನಿಯನ್ ಪಡೆದು ಕೇಂದ್ರ ಸರ್ಕಾರದವರೊಡನೆ ಈ ವಿಚಾರವನ್ನು ಚರ್ಚೆ ಮಾಡಿ ನಮ್ಮ ಹಿತಾಶಕ್ತಿಯನ್ನು ಕಾಪಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಯವರೊಡನೆ ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಹೇಮಾವತಿಯ ಪ್ರೊಜೆಕ್ಟಿನ ಬಗ್ಗೆ ಈಗಾಗಲೆ ಮೈಸೂರು ಸರ್ಕಾರದವರು ಪ್ರೊಜೆಕ್ಟ್ ರಿಪೋರ್ಟು ಹೊರಟು ಹೋಗಿದೆ. ಆದರೆ ನನಗೆ ತಿಳಿದು ಬಂದಿರತಕ್ಕ ಅಂಕಿಅಂಶಗಳ ಮೂಲಕ ಹೇಳುವುದಾದರೆ, ಈ ಸೆಂಟ್ರಲ್ ವಾಟರ್ ಪವರ್ ಕಮಿಶನ್ನಿನವರು ಈ ಒಂದು ಪ್ರೋಜೆಕ್ಟ್ ರಿಪೋರ್ಟ್ ಏನಿದೆ, ಅದರ ಮೇಲೆ, ಮದ್ರಾಸಿನವರು ಒಪ್ಪಿಲ್ಲ, ಆದ ಕಾರಣ ಕ್ಲಿಯರೆನ್ಸ್ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಈ ರಿಪೋರ್ಟಿನಲ್ಲಿ ನಮೂದಾಗಿರುವ ಪ್ರಕಾರ, ಸೆಂಟ್ರಲ್ ವಾಟರ್ ಪವರ್ (ಕಮಿಶನ್ನಿನವರು ಸೆಕೆಂಡ್ ಪ್ಲಾನ್‌ನಲ್ಲಿ 169 ಪ್ರೊಜೆಕ್ಟ್ಸ್‌ಗಳ ಪೈಕಿ 147 ಕ್ಕೆ ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಮೂರನೆ ಪ್ಲಾನ್‌ನಲ್ಲಿ 83 ಪ್ರೊಜೆಕ್ಟ್‌ಗಳ ಪೈಕಿ 53 ಕ್ಕೆ ಸ್ಕಿಮುಗಳಿಗೆ ಈ ಕಮಿಷನ್ನಿನವರು ಕ್ಲಿಯರೆನ್ಸ್ ಕೊಟ್ಟಿದ್ದಾರೆ.

3-00 P.M.

ಇದರಲ್ಲಿ ಮೈಸೂರು ದೇಶಕ್ಕೆ ಎಷ್ಟು ಪ್ರಾಜೆಕ್ಟ್‌ಗಳಿಗೆ ಕ್ಲಿಯರೆನ್ಸ್ ಸಿಕ್ಕಿದೆ ಎಂದು ಯೋಚನೆ ಮಾಡಬೇಕು. ಕಾವೇರಿ ಪಾತ್ರದಲ್ಲಿ ಒಂದು ಯೋಜನೆಗೂ ಕೇಂದ್ರದಿಂದ ಕ್ಲಿಯರೆನ್ಸ್ ಕೊಟ್ಟಿದ್ದಾರೆಯೇ, ಸಿ. ಡಬ್ಲ್ಯು. ಪಿ. ಸಿ. ಅವರ ಕ್ಲಿಯರೆನ್ಸ್ ದೊರಕಿದೆಯೇ ಎಂದು ಯೋಚನೆ ಮಾಡಬೇಕು. ಹೇಮಾವತಿ ಪ್ರಾಜೆಕ್ಟನ್ನು ನಮ್ಮ ಇಂಜಿನಿಯರುಗಳು ತಯಾರು ಮಾಡುವಾಗ 'ಇಂಪೌಂಡಬಲ್ ಡೇಸ್' ಆಧಾರದ ಮೇಲೆ 19 ಟಿ. ಎಂ. ಸಿ. ನೀರನ್ನು ಉಪಯೋಗಿಸಿಕೊಳ್ಳಲು ಮಾಡಿದ್ದಾರೆ. ಇದಕ್ಕೆ ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್ನಿನವರು ಎತ್ತಿರತಕ್ಕ ಆಕ್ಷೇಪಣೆ ಟೆನಬಲ್ಲೇ ಎಂದು ಯೋಚನೆ ಮಾಡಬೇಕು. ಕಾವೇರಿ ಪಾತ್ರದಲ್ಲಿ 47 ಟಿ. ಎಂ. ಸಿ. ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದ್ದರೂ ಕೂಡ 19 ಟಿ. ಎಂ. ಸಿ. ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅಗ್ರಿಮೆಂಟ್‌ನಲ್ಲಿ ಅಡಚಣೆಯನ್ನು ಒಡ್ಡುವುದಾದರೆ ಇದು ನ್ಯಾಯವೇ, ಅದರಿಂದ ನಮಗೆ ಏನಾದರೂ ನ್ಯಾಯ ದೊರೆಯುತ್ತದೆಯೇ, ನಮಗೆ ಆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವೇ ಎಂದು ಯೋಚನೆ ಮಾಡಬೇಕು. ಈ ಅಗ್ರಿಮೆಂಟ್‌ನ ನಿಯಮಗಳಲ್ಲಿ ಆರನೆಯ ಕ್ಲಾಜ್ ಪ್ರಕಾರ 'ಇಂಪೌಂಡಬಲ್ ಡೇಸ್' ಆಧಾರದ ಮೇಲೆ ತಯಾರು ಮಾಡುವ ಯೋಜನೆಗಳಿಗೆ ಯಾವ ಸರ್ಕಾರವೂ ಸಹ ಮದ್ರಾಸ್ ರಾಜ್ಯದ ಒಪ್ಪಿಗೆಯನ್ನು ಪಡೆಯಬೇಕಾಗಿಲ್ಲ. ಹೀಗಿದ್ದರೂ ಸಹ ಅವರು ಎರಡನೆಯ ಕ್ಲಾಜ್‌ನಲ್ಲಿ ಇರುವ ಒಂದು ಪರಿಮಿತಿಯೊಳಗೆ ಆಕ್ಷೇಪಣೆಯನ್ನು ಎತ್ತಿದ್ದಾರೆ, ಮದ್ರಾಸ್ ಸರ್ಕಾರ ಒಪ್ಪಿಗೆಯನ್ನು ಕೊಟ್ಟ ಹೊರತು ಹೇಮಾವತಿ ಯೋಜನೆಯಿಂದ ನೀರನ್ನು ಉಪಯೋಗಿಸಲು ಕ್ಲಿಯರೆನ್ಸ್ ಕೊಡುವುದಕ್ಕಾಗುವುದಿಲ್ಲ ಎಂದು ಸೂಚಿಸಿದ್ದಾರೆ. ಇದನ್ನು ನೋಡಿದರೆ ಈ ದೇಶದ ಪ್ರಗತಿಯ ಬಗ್ಗೆ ಕೇಂದ್ರಕ್ಕೆ ಆಸಕ್ತಿ ಇದೆಯೇ ಎಂದು ಕೇಳಬೇಕಾಗುತ್ತದೆ. ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್, ಪ್ಲಾನಿಂಗ್ ಕಮಿಷನ್ ಮತ್ತು ಮಿನಿಸ್ಟ್ರಿ ಆಫ್ ಇರಿಗೇಷನ್ ಈ ಎಲ್ಲ ಹಂತದಲ್ಲಿಯೂ ಮದ್ರಾಸಿನವರು ಗುತ್ತಿಗೆಯಾಗಿದೆಯೇ ಎಂದು ಕೇಳಬೇಕಾಗುತ್ತದೆ. ನಮ್ಮ ಪ್ರಗತಿಯನ್ನು, ನಮ್ಮ ಹಿತಾಸಕ್ತಿಯನ್ನು ಕಾಪಾಡುವವರು ಪ್ಲಾನಿಂಗ್ ಕಮಿಷನ್‌ನಲ್ಲಿ, ಸಿ. ಡಬ್ಲ್ಯು. ಪಿ. ಸಿ. ಯಲ್ಲಿ ಯಾರೂ ಇಲ್ಲ. ಎಲ್ಲ ರಾಜ್ಯಗಳ ಹಿತವನ್ನೂ ಕಾಪಾಡತಕ್ಕ ಒಂದು ಸಂಸ್ಥೆಯಾಗಿದ್ದರೂ ಸಹ ಕೆಲವು ರಾಜ್ಯಗಳಿಗೆ ಮಾತ್ರ ತಮ್ಮ ಅಧಿಕಾರದ ಮಿತಿಯನ್ನು ಉಪಯೋಗಿಸತಕ್ಕದ್ದು ನಿಜವಾಗಿಯೂ ನ್ಯಾಯವಲ್ಲ. ಈ ರೀತಿ ಮಾಡುವುದಾದರೆ ಸಿ.ಡಬ್ಲ್ಯು.ಪಿ.ಸಿ. ಇರುವುದಕ್ಕಿಂತ ಅದನ್ನು ತೆಗೆದುಹಾಕಿದರೆ ಅಥವಾ ಸ್ಕ್ರಾಪ್ ಮಾಡಿದರೆ ಒಳ್ಳೆಯದು. ಇಂಥ ಕಮಿಷನ್ ಇರುವುದರಿಂದ ಕೆಲವು ಸಂಸ್ಥಾನಗಳಿಗೆ ಮಾತ್ರ ಗುತ್ತಿಗೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಕೇಂದ್ರಕ್ಕೆ ಹೋದ ಕಾಲದಲ್ಲಿ ಈ ಕಮಿಷನ್‌ನಲ್ಲಿ ನಮ್ಮ ರಾಜ್ಯಕ್ಕೂ ಪ್ರಾತಿನಿಧ್ಯ ಕೊಡುವ ವಿಚಾರವನ್ನು ಪ್ರಸ್ತಾಪ ಮಾಡಬೇಕು. ಈ ಸಂಸ್ಥೆಯಲ್ಲಿ ಕೆಲಸ ಮಾಡಬಲ್ಲ ದಕ್ಷರಾದ

ಅಧಿಕಾರಿಗಳು ಯಾರೂ ನಮ್ಮಲ್ಲಿ ಇಲ್ಲವೇ ಎನ್ನುವುದನ್ನು ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕು.

Mr. SPEAKER.—Appointments are not made by Statewise representation. Moreover that body is not here for the Hon'ble Member to say scrap it and all that.

ಶ್ರೀ ಎಚ್. ಡಿ. ದೇವೇಗೌಡ.—ಈ ಕಮಿಷನ್‌ನವರು ಏನೋ 9 ನೆಯ ಆಲ್ ಇಂಡಿಯಾ ಇರಿಗೇಷನ್ ಅಂಡ್ ಪವರ್ ಸಮ್ಮೇಳನದಲ್ಲಿ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ ಎನ್ನುವುದರ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಚ್ಛೆ ಪಡುತ್ತೇನೆ ಸ್ವಾಮಿ.

> "To achieve the target and remove the bottleneck, each State should have contact with the Ministry of Irrigation and Power......"

ಪ್ರತಿಯೊಂದು ಪ್ರಾಂತದ ಹಕ್ಕನ್ನೂ ಕಾಪಾಡುವ ಒಂದು ಅವಕಾಶವನ್ನು ಕೊಟ್ಟಿರುವಾಗ ನ್ಯಾಯವನ್ನು ದೊರಕಿಸಿಕೊಡಬೇಕು ಎಂದು ನಾವು ಅವರನ್ನು ಕೇಳಬೇಕು. 47 ಟಿ. ಎಂ. ಸಿ. ನೀರನ್ನು ಉಪಯೋಗಿಸಿಕೊಳ್ಳಲು ನಮಗೆ ಅವಕಾಶವಿದ್ದರೂ 19 ಟಿ. ಎಂ. ಸಿ. ಉಪಯೋಗಿಸಿಕೊಳ್ಳಲು ತಯಾರಾಗಿರುವ ಯೋಜನೆಗೆ ತಕರಾರನ್ನು ಎತ್ತಿ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡುವುದಕ್ಕೆ ಏಕೆ ಅಡ್ಡಿ ಬರಬೇಕು ? 1974 ನೆ ಇಸವಿಯೊಳಗೆ ಕಾವೇರಿ ನದಿ ಪಾತ್ರದ ನೀರನ್ನು ನಾವು ಉಪಯೋಗಿಸಿಕೊಳ್ಳದೆ ಹೋದರೆ ಈ ದೇಶಕ್ಕೆ ಅನ್ಯಾಯವಾಗುವುದಿಲ್ಲವೇ ಎನ್ನುವಂಥ ವಿಚಾರಕ್ಕೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ. ಮುಖ್ಯ ಮಂತ್ರಿಗಳ ಬಗ್ಗೆ ನಮಗೆ ಎಷ್ಟೇ ಗೌರವ ವಿದ್ದರೂ ಕೂಡ ಈ ದೇಶಕ್ಕೆ ಅಗತಕ್ಕ ಅನಾಹುತಕ್ಕೆ ಅವರೇ ಜವಾಬ್ದಾರರಾಗುತ್ತಾರೆಂದು ಹೇಳುತ್ತೇನೆ. ಅಗ್ರಿಮೆಂಟಿನ ಸಂಬಂಧದಲ್ಲಿ ನ್ಯಾಯವಾದಿಗಳ ಮತ್ತು ತಜ್ಞರ ಅಭಿಪ್ರಾಯವನ್ನು ಪಡೆದು ಪುನರ್ವಿಮರ್ಶೆ ಮಾಡಿ ದೇಶಕ್ಕೆ ಅಗತಕ್ಕ ಅನಾಹುತವನ್ನು 1974 ರೊಳಗೆ ಗಾರ್ಡ್ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ನೀರಾವರಿ ಯೋಜನೆಗಳಿಗೆ ಹಣವನ್ನು ಒದಗಿಸುವುದಕ್ಕೆ ಎಷ್ಟೇ ಕಷ್ಟವಿದ್ದರೂ ಕೂಡ ಕೆಲವು ಇಲಾಖೆಗಳಿಗೆ ಹಣವನ್ನು ಕಡಮೆ ಮಾಡಿ, ಹೊಸ ತೆರಿಗೆಗಳಿಂದ ಬರುವ ಆದಾಯವನ್ನು ಪಡೆದು ಈ ಯೋಜನೆಗಳನ್ನು ಕಾರ್ಯಗತ ಮಾಡಬೇಕು. ಹೇಮಾವತಿ ಯೋಜನೆಗೆ 1 26,000 ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದಷ್ಟೂ ಸಿಬ್ಬಂದಿಗೇ ಖರ್ಚಾಗುತ್ತದೆ. ವರ್ಕ್ ಸ್ಪೆಡ್‌ನಲ್ಲಿ ಒಂದು ರೂಪಾಯಿಯನ್ನು ಕೂಡ ಇಟ್ಟಿಲ್ಲವೆಂದರೆ ಈ ಪ್ರಾಜೆಕ್ಟ್ ಮುಂದುವರಿಯುವುದಾದರೂ ಹೇಗೆ ?

ಲಿಫ್ಟ್ ಇರಿಗೇಷನ್ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಹಾಸನ ಜಿಲ್ಲೆಗೆ ಬಂದಿದ್ದಾಗಲೂ ಕೂಡ ತಾವು ನೋಡಿದ್ದೀರಿ, ಶ್ರೀಮತಿ ಯಶೋಧರಮ್ಮನವರೂ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಇದರ ಮೇಲೆ ಮುಖ್ಯ ಮಂತ್ರಿಗಳು ಒಂದು ನಿಲುವನ್ನು ತೆಗೆದುಕೊಂಡಿದ್ದಾರೆ. ಅದು ಅಭಿನಂದನಾರ್ಹವಾದುದು. ಹಾಸನ ಜಿಲ್ಲೆಗೆ ಸಂಬಂಧಪಟ್ಟ ಹಾಗೆ 25-30 ಲಿಫ್ಟ್ ಇರಿಗೇಷನ್ ಯೋಜನೆಗಳಿವೆ. ಅದರಿಂದ ಆರೇಳು ಸಾವಿರ ಎಕರೆ ಪ್ರದೇಶಕ್ಕೆ ನೀರಾವರಿ ಯಾಗುತ್ತದೆ. ಇದಕ್ಕೆ ಸಾಕಷ್ಟು ಹಣವನ್ನು ಬಜೆಟ್ಟಿನಲ್ಲಿ ಇಟ್ಟಿಲ್ಲ. ಅದರ ಬಗ್ಗೆ ಯೋಚನೆ ಮಾಡಬೇಕು. ಹೇಮಾವತಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಇದೂ ಒಂದು ಮಾರ್ಗವಾಗಿದೆ. ಹೇಮಾವತಿ ಯೋಜನೆಯಲ್ಲಿ 19 ಟಿ.ಎಂ.ಸಿ. ನೀರನ್ನು ಉಪಯೋಗಿಸುವ ಅವಕಾಶವಿದ್ದರೂ ಕೂಡ ಲಿಫ್ಟ್ ಇರಿಗೇಷನ್ ಯೋಜನೆಯನ್ನು ಕಾರ್ಯಗತ ಮಾಡಿದರೆ 30 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಬಹುದು. ಎಲ್ಲ ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ಕಾರ್ಯಗತ ಮಾಡಿದರೂ ನೀರನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಲಿಫ್ಟ್ ಇರಿಗೇಷನ್ ಸ್ಕೀಮನ್ನು ಕಾರ್ಯಗತ ಮಾಡುವ ವಿಚಾರದಲ್ಲಿ ಸೂಕ್ತವಾದ ಕಾರ್ಯಕ್ರಮವನ್ನು ಶೀಘ್ರವಾಗಿ ತೆಗೆದುಕೊಳ್ಳಬೇಕು ಎಂದು ಹೇಳುತ್ತಿದ್ದೇನೆ.

ಕಮ್ಯೂನಿಟಿ ಇರಿಗೇಷನ್ ವೆಲ್ಸ್ ಹಾಕುವುದರ ಬಗ್ಗೆ ಸರ್ಕಾರ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆಂದು ಗೊತ್ತಾಗಿದೆ. ದೇಶದಲ್ಲಿ ಅಭಾವ ಪರಿಸ್ಥಿತಿ ಇರುವ ಜಾಗದಲ್ಲಿ ಎಲ್ಲ ಪ್ರದೇಶಗಳಿಗೂ ಮೀಡಿಯಂ ಇರಿಗೇಷನ್ ಮತ್ತು ಮೈನರ್ ಇರಿಗೇಷನ್ ಪ್ರಾಜೆಕ್ಟ್‌ಗಳಿಂದ ಪ್ರಯೋಜನ ಆಗುವುದಿಲ್ಲ. ಟ್ಯೂಬ್ ವೆಲ್ಸ್ ಹಾಕಿ ಸಣ್ಣ ಹಿಡುವಳಿದಾರರಿಗೆ ಅನುಕೂಲವಾಗುವ ಹಾಗೆ ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಂಡು ನೀರನ್ನು ಒದಗಿಸುವ ಬಗ್ಗೆ ಒಂದು ಸ್ಪಷ್ಟವಾದ ನಿಲುವನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

(ಶ್ರೀ ಎಚ್. ಡಿ. ದೇವೇಗೌಡ)

ಹಣಕಾಸಿನ ಸಚಿವರು ಮಾತನಾಡುತ್ತ ಮೈನರ್ ಇರಿಗೇಷನ್ನಿಗೆ 12 ಕೋಟಿ ರೂಪಾಯಿಗಳನ್ನು ಐದು ವರ್ಷದಲ್ಲಿ ಒದಗಿಸಲಾಗಿದೆ ಎಂದು ಹೇಳಿದರು. ಆದರೆ ಹಾಸನ ಜಿಲ್ಲೆಗೆ ಕೇವಲ 25 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಒಂದು ವರ್ಷಕ್ಕೆ ಐದು ಲಕ್ಷ ರೂಪಾಯಿ ಕೊಟ್ಟಿದ್ದಾರೆಂದರೆ ಇಷ್ಟು ಹಣ ಸಾಕೇ? ಇದು ಸರಿಯೇ ಎಂದು ಯೋಚನೆ ಮಾಡಬೇಕು. 6500 ಕೆರೆಗಳಿರುವ ಒಂದು ಜಿಲ್ಲೆಗೆ ಐದು ವರ್ಷಗಳಿಗೆ 25 ಲಕ್ಷ ರೂಪಾಯಿ ಕೊಟ್ಟಿರುವುದರಿಂದ ಆ ಜಿಲ್ಲೆಗೆ ನ್ಯಾಯ ದೊರಕಿಲ್ಲ, ನ್ಯಾಯವನ್ನು ದೊರಕಿಸಿಕೊಡಬೇಕು, ಆ ಜಿಲ್ಲೆಯ ಹಿತಾಶಕ್ತಿಯನ್ನು ಮುಖ್ಯ ಮಂತ್ರಿಗಳು ಕಾಪಾಡಬೇಕು ಎಂದು ಹೇಳಿ ಹಾಸನ ಜಿಲ್ಲೆ ಬಡತನದಲ್ಲಿರತಕ್ಕ ಜಿಲ್ಲೆ, ಆ ಜಿಲ್ಲೆಯಲ್ಲಿ ಹೇಮಾವತಿ ಯೋಜನೆ, ಸಣ್ಣ ನೀರಾವರಿ ಯೋಜನೆ, ಲಿಫ್ಟ್ ಇರಿಗೇಷನ್ ಇವೆಲ್ಲವನ್ನೂ ಮಾಡಿಕೊಡಬೇಕೆಂದು ಹೇಳಿ, ಆ ಯೋಜನೆಗಳಿಗೆ ಸಾಕಷ್ಟು ಹಣವನ್ನು ಒದಗಿಸಬೇಕೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ).—ಮಾನ್ಯ ಸಭಾಪತಿಗಳೇ, ಇಂದು ನಮ್ಮ ಮುಂದಿರುವ ಬೇಡಿಕೆಗಳಿಗೆ ನನ್ನ ಹೃತ್ಪೂರ್ವಕವಾದ ಬೆಂಬಲವನ್ನು ಕೊಡುತ್ತಿದ್ದೇನೆ. ಈಗಾಗಲೇ ರಾಜ್ಯದಲ್ಲಿ ಮತ್ತು ದೇಶದಲ್ಲಿ ಆಹಾರದ ಅಭಾವವಿರುವುದರಿಂದ ನೀರಾವರಿಯ ಯೋಜನೆಗಳಿಗೆ ಆದ್ಯತೆ ಎಷ್ಟಿದೆ ಎನ್ನುವುದನ್ನು ಮಾನ್ಯ ಸದಸ್ಯರನೇಕರು ಹೇಳಿದ್ದಾರೆ. ನಾನೂ ಅದನ್ನೇ ಪುನಃ ಒತ್ತಾಯಪೂರ್ವಕವಾಗಿ ಹೇಳಬೇಕಾಗಿದೆ. ಯಾವ ಪ್ರದೇಶ ನೀರಾವರಿಯಲ್ಲಿ ಹಿಂದುಳಿದಿದೆಯೋ ಆ ಪ್ರದೇಶಕ್ಕೆ ಆದ್ಯತೆಯನ್ನು ಕೊಡುವುದು ಸರ್ಕಾರದ ಮತ್ತು ಸಂಬಧಿಸಿದ ಮಂತ್ರಿಗಳ ಜವಾಬ್ದಾರಿ ಎಂದು ತಿಳಿದುಕೊಂಡಿದ್ದೇನೆ. ಆದರೆ ಇಂದು ನಮ್ಮ ರಾಜ್ಯವನ್ನು (ದೊಡ್ಡ ದೊಡ್ಡ ನೀರಾವರಿ ಯೋಜನೆಗಳ ಸಲುವಾಗಿ) ಉಳಿದ ರಾಜ್ಯಗಳೊಡನೆ ಹೋಲಿಸಿ ನೋಡಿದರೆ ನಮ್ಮಲ್ಲಿ ಬೇರೆ ರಾಜ್ಯಗಳಿಗಿಂತ ಬಹಳ ಕಡಮೆ ಪ್ರಮಾಣದಿಂದ ಕೆಲಸ ನಡೆದಿದೆ ಎಂದು ನೊಂದ ಮನಸ್ಸಿನಿಂದ ಹೇಳಬೇಕಾಗಿದೆ. ನಮ್ಮ ಅಕ್ಕಪಕ್ಕದ ಪ್ರದೇಶಗಳಾದ, ಆಂಧ್ರ ಅಥವಾ ಮದ್ರಾಸ್ ರಾಜ್ಯಗಳನ್ನು ತೆಗೆದುಕೊಂಡರೆ ಶೇಕಡ 27·4 ರಷ್ಟು ನೀರಾವರಿಯಾಗಿದೆ. ನಮ್ಮ ರಾಜ್ಯದಲ್ಲಿ ಕೇವಲ ಶೇಕಡ 8 ರಷ್ಟು ನೀರಾವರಿಯ ಪ್ರಮಾಣ ಇದೆ ಎಂದು ತಿಳಿಯುತ್ತಿದೆ. ಇದರಿಂದ ನಮ್ಮ ಒಕ್ಕಲುತನದ ಪ್ರಗತಿ ಮತ್ತು ಆಹಾರದ ಕೊರತೆ ಹೇಗೆ ಸುಧಾರಿಸೀತು ಎನ್ನುವುದನ್ನು ವಿಚಾರ ಮಾಡಬೇಕಾಗಿದೆ. ಈಗಾಗಲೇ ಮಾನ್ಯ ಸದಸ್ಯರಾದ ಬಸಪ್ಪನವರು ಮಾತನಾಡುತ್ತ ಕೃಷ್ಣ ಮೇಲ್ದಂಡೆ ಯೋಜನೆಯ ವಿಚಾರವನ್ನು ಹೇಳಿದ್ದಾರೆ. ಹಿಂದೆ ದಿವಂಗತ ಲಾಲ್‌ಬಹದ್ದೂರ ಶಾಸ್ತ್ರಿಯವರು ಕೃಷ್ಣ ಯೋಜನೆಯ ಅಡಿಗಲ್ಲನ್ನು ಹಾಕುವ ಸಂದರ್ಭದಲ್ಲಿ, ಮೈಸೂರು ರಾಜ್ಯದ ಇಂಜಿನಿಯರುಗಳು ತಜ್ಞರು ತಮ್ಮ ರಾಜ್ಯಕ್ಕೆ ಉತ್ತಮವಾದ ಯೋಜನೆಯನ್ನು ತಯಾರು ಮಾಡಿದ್ದಾರೆ ಮತ್ತು ಮನಸ್ಸೌಕರ್ಯ ಮಾಡುತ್ತಿದ್ದಾರೆ, ಅವರ ನೆರವಿನಿಂದ ಈ ಯೋಜನೆಯ ಕಾರ್ಯ ನಾಲ್ಕು ಐದು ವರ್ಷಗಳಲ್ಲಿ ಮುಗಿಯುತ್ತದೆ ಎನ್ನುವ ಮಾತನ್ನು ಹೇಳಿದ್ದರು ಮತ್ತು ನಮ್ಮ ನಾಯಕರು ಕೂಡ ಆ ಸಮಯದಲ್ಲಿ ಲಾಲ್‌ಬಹದ್ದೂರ್ ಶಾಸ್ತ್ರಿಗಳನ್ನು ಕೇಳಿಕೊಂಡಿದ್ದರು, ಈ ಯೋಜನೆಗೆ ಕೇಂದ್ರ ಸರ್ಕಾರ ಸಹಾಯ ಮಾಡಿದರೆ ನಾವು ಐದಾರು ವರ್ಷಗಳಲ್ಲಿ ಇದನ್ನು ಮುಗಿಸುತ್ತೇವೆ ಎಂದು ಹೇಳಿದ್ದರು. ಆದರೆ ಈವರೆಗೂ ಕೃಷ್ಣಾ ಮೇಲ್ದಂಡೆಯ ಕಾರ್ಯ ತ್ವರಿತವಾಗಿ ನಡೆಯದೆ ಇದ್ದದ್ದು ವಿಷಾದಕರ ಮತ್ತು ಕೇಂದ್ರ ಸರ್ಕಾರ ಈ ಯೋಜನೆಗೆ ಸಹಾಯ ಮಾಡದೆ ಇರುವುದು ಅವರ ಮಲತಾಯಿ ಧೋರಣೆಯನ್ನು ಎತ್ತಿ ತೋರಿಸುತ್ತದೆ. ಕೃಷ್ಣಾ ನದಿಯ ಮೇಲ್ದಂಡೆ ಯೋಜನೆಗೆ 130 ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಅಂದಾಜು ಮಾಡಿದ್ದಾಗಿ ತಿಳಿಯುತ್ತದೆ. ನಾನು ಹೇಳುವುದಾದರೆ ಅದಕ್ಕೆ 150 ಅಥವಾ 160 ಕೋಟಿ ರೂಪಾಯಿಗಳಾದರೂ ಬೇಕಾಗಬಹುದು. ದಿನ ಕಳೆದಂತೆ ದೊಡ್ಡ ದೊಡ್ಡ ಯೋಜನೆಗಳಿಗೆ ರಾಜ್ಯ ಸರ್ಕಾರವು ಹಣವನ್ನು ಒದಗಿಸುವ ಪ್ರಶ್ನೆ ಸಾಧ್ಯವಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದವರು ಇಂತಹ ಯೋಜನೆಗಳಿಗೆ ಸಹಾಯ ಮಾಡಬೇಕೆಂದು ಪ್ರತಿಯೊಬ್ಬ ಸದಸ್ಯರ ಅಭಿಪ್ರಾಯವಿದೆ. ಮಾನ್ಯ ನಾಯಕರಲ್ಲೂ ಇದೆ. ಆದರೆ ಇದು ಕಾರ್ಯರೂಪಕ್ಕೆ ಇನ್ನೂ ಬರಲಿಲ್ಲ. ನೀರಿನ ಪಾಲಿನ ಸಲುವಾಗಿ ಸಾಕಷ್ಟು ಎರಡನೇ ರಾಜ್ಯದವರ ಸಂಗಡ ಹೋರಾಡಿದ್ದೇವೆ. ಇನ್ನು ನಮ್ಮ ಕೃಷ್ಣಾ ಮತ್ತು ಗೋದಾವರಿ ನದಿಗಳ ನೀರಿನ ಸರಿಯಾದ ಪಾಲಿಗಾಗಿ ಇನ್ನೂ ಹೋರಾಟವನ್ನು ನಡೆಸುತ್ತಲಿದ್ದೇವೆ. ಸುಮಾರು 600 ಟಿ.ಎಂ.ಸಿ. ಯಷ್ಟು ನೀರನ್ನು ಈಗ ನಮ್ಮ ಪಾಲಿಗೆ ಕೊಟ್ಟಿದ್ದಾರೆ. ಇದನ್ನು ನಾವು ಉಪಯೋಗ ಮಾಡದೆ ಹೋದರೆ ನಾವು ಹೆಚ್ಚಿಗೆ ನೀರನ್ನು ಬೇಡುವುದು ಫಲಕಾರಿಯಾಗದು. ಆಂಧ್ರದವರು ನಾಗಾರ್ಜುನ ಸಾಗರವನ್ನು ತ್ವರಿತವಾಗಿ ಮುಗಿಸುತ್ತಿದ್ದಾರೆ. ಮಹಾರಾಷ್ಟ್ರದವರು ಮೊನ್ನೆ ಮೊನ್ನೆ ಭೀಮಾನದಿಗೆ ಸೋಲಾಪುರ ಸಮೀಪದಲ್ಲಿ ಅಣೆಕಟ್ಟೆಯನ್ನು ಕಟ್ಟಲು ಯೋಚಿಸಿ, ರಕ್ಷಣಾ ಮಂತ್ರಿಗಳಿಂದ ಅಡಿಗಲ್ಲನ್ನು

ಹಾಕಿಸಿದ್ದಾರೆ. ಮೇಲೆ ಮಹಾರಾಷ್ಟ್ರದವರು ಕೆಳಗೆ ಆಂಧ್ರದವರು ತಮ್ಮ ಪಾಲಿನ ನೀರನ್ನು ಉಪಯೋಗಿಸಿಕೊಂಡು ಎರಡನೆಯವರ ಪಾಲಿನ ನೀರನ್ನೂ ಉಪಯೋಗ ಮಾಡಿಕೊಳ್ಳುವ ಸ್ಥಿತಿಯಲ್ಲಿದ್ದಾರೆ. ಅಂತರರಾಜ್ಯ ನದಿಗಳಿಂದ ನೀರನ್ನು ಉಪಯೋಗಿಸಿಕೊಳ್ಳುವಾಗ ಸಂಬಂಧಿಸಿದ ರಾಜ್ಯಗಳ ಒಪ್ಪಿಗೆಯನ್ನು ತೆಗೆದುಕೊಂಡು ಉಪಯೋಗ ಮಾಡಿಕೊಳ್ಳಬೇಕಾದುದು ಧರ್ಮ, ಆದರೆ ಇಂದು ಮಹಾರಾಷ್ಟ್ರದವರಾಗಲೀ, ಆಂಧ್ರದವರಾಗಲೀ, ಯಾರನ್ನೂ ಕೇಳದೆ ಅಣೆಕಟ್ಟುಗಳನ್ನು ಕಟ್ಟುತ್ತಾ ನಡೆದಿದ್ದಾರೆ. ಅವರು ಡ್ಯಾಮ್ ಕಟ್ಟಿದಮೇಲೆ ಮೇಲಿನವರಿಗೆ ನೀರನ್ನು ಬಿಡಲು ಒತ್ತಾಯಬಹುದು, ಮತ್ತು ಅವರಿಗೆ ಅಧಿಕಾರವೂ ವ್ಯಾಪ್ತವಾಗಬಹುದು. ಕಾರಣ ನಮ್ಮ ಸರ್ಕಾರದವರು, ನಮ್ಮನ್ನು ಕೇಳದನೆಯೆ ಅಂತರರಾಜ್ಯ ನದಿಗಳಾದ ಕೃಷ್ಣಾ, ಗೋದಾವರಿ ನದಿಗಳಿಗೆ ಅಡ್ಡಲಾಗಿ ಅಣೆಕಟ್ಟುಗಳನ್ನು ಕಟ್ಟುವ ಯಾವುದೇ ರಾಜ್ಯವಿರಲಿ, ಅದಕ್ಕೆ ಪ್ರತಿಕಾರ ಮಾಡಬೇಕು; ಮತ್ತು ಕೇಂದ್ರ ಸರ್ಕಾರಕ್ಕೆ ತಿಳಿಸಿ, ಅವರಿಂದ ಹೆಚ್ಚಿನ ಸಹಾಯ ಪಡೆದು ನಮ್ಮ ಪಾಲಿನ ನೀರನ್ನು ತೀವ್ರವಾಗಿ ಉಪಯೋಸಿಕೊಳ್ಳಲೇಬೇಕು. ಇಲ್ಲವಾದರೆ ರಾಜ್ಯದ ಆರ್ಥಿಕ ಪರಿಸ್ಥಿತಿ, ಉದ್ಯೋಗದ ಪರಿಸ್ಥಿತಿ, ಅನ್ನದ ಪರಿಸ್ಥಿತಿ, ಸುಧಾರಿಸಲು ಸಾಧ್ಯವೇ ಇಲ್ಲ. ನಮ್ಮ ರಾಜ್ಯದಲ್ಲಿ ಹರಿಯುವ ಮಹಾ ನದಿಯಾದ ಕೃಷ್ಣಾ ನದಿಯ ಮೇಲಿನ ಯೋಜನೆಯ ಕಾರ್ಯವನ್ನು ತೀವ್ರ ಕೈಕೊಳ್ಳಬೇಕು. ಈ ಯೋಜನೆ ಬಹಳ ಮಹತ್ವವುಳ್ಳ ಯೋಜನೆ. ಮೇಲಿಂದ ಮೇಲೆ ಬರಗಾಲಕ್ಕೆ ತುತ್ತಾಗುತ್ತಿರುವ, ಬಿಜಾಪುರ, ಕಲಬುರ್ಗಿ, ರಾಯಚೂರ ಜಿಲ್ಲೆಗಳಿಗೆ ಶಾಶ್ವತ ಪರಿಹಾರ ದೊರೆಯುತ್ತದೆ. ಆದ್ದರಿಂದ ಈ ಯೋಜನೆಯನ್ನು ಕೇಂದ್ರ ಸರ್ಕಾರದವರೇ ವಹಿಸಿಕೊಳ್ಳುವಂತೆ ಈ ಸಭೆ ಒಂದು ನಿರ್ಣಯವನ್ನು ಪಾಸ್ ಮಾಡಿ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುವುದು ಈ ಮನೆಯ ಅದ್ಯ ಕರ್ತವ್ಯವಾಗಿದೆ. ಕೃಷ್ಣಾ ನದಿಯ ನೀರಿನಲ್ಲಿ ನಮ್ಮ ಪಾಲಿನ ನೀರನ್ನು ಪೂರ್ತಿಯಾಗಿ ತೆಗೆದುಕೊಳ್ಳುವುದಕ್ಕೆ ನಮ್ಮವರು ಪ್ರತಿಪಾದಿಸುತ್ತಿದ್ದಾರೆ. ಸಂತೋಷ. ಆದರೆ, ಪ್ರಗತಿ ಪ್ರತಿಫಲವೇನೂ ಇಲ್ಲ. ಇವರು ಧೀರತನದ ಹೋರಾಟ ಮಾಡಿ ರಾಜ್ಯಕ್ಕೆ ನ್ಯಾಯವಾಗಿ ಸಲ್ಲುವ ನೀರನ್ನು ಒದಗಿಸಿ ಕೊಂಡು ತೀವ್ರ ಉಪಯೋಗಿ ಸಲು ಹಣದ ಪ್ರಯತ್ನಮಾಡಬೇಕೆಂದು ಕೇಳುತ್ತೇನೆ.

ಇನ್ನು ಸಣ್ಣ ನೀರಾವರಿ ವಿಷಯ. ಮೇಜರ್ ಇರಿಗೇಷನ್ ವಿಷಯವಾಗಿ ಶ್ರೀಮಾನ್ ಬಸಪ್ಪನವರು ಸಾಕಷ್ಟು ಹೇಳಿದ್ದಾರೆ. ನಾನು ಸಣ್ಣ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಸಣ್ಣ ನೀರಾವರಿ ಕೆಲಸಗಳಲ್ಲಿ ಹೆಮ್ಮೆ ಪಡುವಂತಹ ಕೆಲಸಗಳನ್ನು ರಾಜ್ಯ ಸರ್ಕಾರದವರು ಮಾಡಿದ್ದಾರೆ. ಮೈನರ್ ಇರಿಗೇಷನ್‌ನಲ್ಲಿ ಸಾಧಿಸಿದ ಪ್ರಗತಿ ಇಡೀ ಹಿಂದುಸ್ಥಾನದಲ್ಲಿಯೇ ನಮ್ಮದು ಪ್ರಥಮ ರಾಜ್ಯವೆಂದೆನಿಸಿಕೊಂಡಿದೆ. ಆ ಒಂದು ಮನೋಧೈರ್ಯ ನಮ್ಮ ಸರ್ಕಾರದವರಿಗೆ ಬಂದಿದೆ. ಒಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಬಾಬಿಗೆ 254 ಲಕ್ಷ ರೂಪಾಯಿಗಳನ್ನು, ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 583 ಲಕ್ಷ ರೂಪಾಯಿಗಳನ್ನೂ ಖರ್ಚುಮಾಡಬೇಕೆಂದು ಬಡ್ಜೆಟಿನಲ್ಲಿ ಹಣ ಒದಗಿಸಿದ್ದರೆ ಕ್ರಮವಾಗಿ 415 ಮತ್ತು 673 ಲಕ್ಷ ರೂಪಾಯಿಗಳನ್ನು ಎರಡು ಪಂಚವಾರ್ಷಿಕ ಯೋಜನೆಗಳಲ್ಲಿ ಹೆಚ್ಚಿಗೆ ಖರ್ಚುಮಾಡಿದ್ದಾರೆ. ಹೀಗೆ 3ನೇ ಪಂಚವಾರ್ಷಿಕ ಯೋಜನೆಯಲ್ಲಿಯೂ ಕೂಡ ಈ ಬಾಬಿಗೆ ಹೆಚ್ಚು ಖರ್ಚುಮಾಡಿದ್ದಾರೆ. ಈ ಮೂರು ಪಂಚವಾರ್ಷಿಕ ಯೋಜನೆಗಳಲ್ಲಿಯೂ ಈ ಬಾಬಿಗೆ ತೆಗೆದಿಟ್ಟಿದ್ದ ಹಣಕ್ಕಿಂತಲೂ ಹೆಚ್ಚಿನ ಹಣವನ್ನು ಖರ್ಚುಮಾಡಿ ಪ್ರಗತಿಯನ್ನು ಚಿಕ್ಕ ನೀರಾವರಿಯಲ್ಲಿ ತೋರಿಸಿದ್ದಾಗಿದೆ. 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಬಾವಿಗೆ 830 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಇಟ್ಟುಕೊಂಡಿದ್ದರೂ ಈಗಾಗಲೇ 16 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಇದು ಅವರ ಪ್ರಗತಿ ಸಾಧನೆಯನ್ನು ತೋರಿಸುತ್ತದೆ. ಆದರೆ ಮೈನರ್ ಇರ್ರಿಗೇಷನ್ ಒಂದರಿಂದಲೇ ನಮ್ಮ ರಾಜ್ಯ ಉದ್ಧಾರವಾಗುವುದಿಲ್ಲ. ಇದು ಕೆಲವು ಸಂದರ್ಭಗಳಲ್ಲಿ ಬಹಳ ಎಕ್ಸ್‌ಪೆನ್ಸಿವ್ ಆಗುತ್ತದೆ. ಮೇಜರ್ ಇರ್ರಿಗೇಷನ್ ಅದರೆ ನಮಗೆ ವಾಟರ್ ಲೆವೆಲ್ ಹೆಚ್ಚಾಗುತ್ತದೆ. ಇದರಿಂದ ಬಡರೈತರಿಗೆ ಹೆಚ್ಚಿಗೆ ಅನುಕೂಲವನ್ನು ಒದಗಿಸುವುದಕ್ಕೆ ಸಾಧ್ಯವಿದೆ. ಒಟ್ಟಿನಲ್ಲಿ ಮೈನರ್ ಇರ್ರಿಗೇಷನ್ನಿನಲ್ಲಿ ಪ್ರಗತಿಯನ್ನು ಸಾಧಿಸಿದ ಹಾಗೆಯೇ ಮೇಜರ್ ಇರ್ರಿಗೇಷನ್ನಿನಲ್ಲಿಯೂ ಪ್ರಗತಿಯನ್ನು ಸಾಧಿಸಬೇಕೆಂದು ನಾನು ಸರ್ಕಾರದವರನ್ನು ಒತ್ತಾಯಮಾಡುತ್ತೇನೆ.

ಇನ್ನು ಸಾಮಾನ್ಯ ಆಡಳಿತದ ಬಗ್ಗೆ ನಾನು ಹೇಳುವುದಾದರೆ ಆಡಳಿತದಲ್ಲಿ ಅಷ್ಟಾಗಿ ಬಿಗಿಯಿಲ್ಲ, ಆಡಳಿತ ಅಷ್ಟು ಸುಧಾರಣೆಯಾಗಿಲ್ಲವೆಂದು ಕೆಲವರು ಹೇಳಿದ್ದನ್ನು ನಾನು ಸ್ವಲ್ಪಮಟ್ಟಿಗೆ ಒಪ್ಪಬಹುದಾಗಿದೆ. ಆದರೆ ಸ್ವಾತಂತ್ರ ಪೂರ್ವದಲ್ಲಿ ಯಾವರೀತಿಯ ಆಡಳಿತವಿತ್ತೋ ಅದನ್ನು ಈಗ ತುಲನ ಮಾಡಿನೋಡಿದರೆ ಸ್ವಲ್ಪ ಹೆಚ್ಚೂ ಕಡಿಮೆ ಹಾಗೆಯೇ ಇದೆ. ಇದು ಸ್ವತಂತ್ರ ದೇಶದಲ್ಲಿ ಇರುವಂಥ ಪದ್ಧತಿ ಅಲ್ಲ ಸಾಮಾನ್ಯ ಆಡಳಿತ ಬಹು ಮುಖ್ಯ ಪಾತ್ರವನ್ನು ವಹಿಸಬೇಕು ಜನಸಾಮಾನ್ಯರಿಗೆ ಆಡಳಿತದ ಸಲುವಾಗಿ ಉತ್ತಮ ಭಾವನೆ ಇರಬೇಕು. ಆದರೆ ಸಾಮಾನ್ಯ ಆಡಳಿತ ಅಷ್ಟು ಸರಿಯಾಗಿ ಕೆಲಸಮಾಡುತ್ತಾ ಇಲ್ಲವೆಂಬ ಕೂಗು ಈಗ ಎಲ್ಲ ಕಡೆಗೂ ಕೇಳಬರಲಿಕೆ ಹತ್ತಿದೆ ಮತ್ತು ಈ ಮನೆಯ

(ಶ್ರೀ ಎಸ್. ಎಂ. ಗುರೆಡ್ಡಿ)

ಪ್ರತಿಯೊಬ್ಬ ಸದಸ್ಯರೂ ಹೇಳುತ್ತಿದ್ದಾರೆ. ಆದರೆ ಹಿಂದೆ ಮುಖ್ಯಮಂತ್ರಿಗಳು ಹೇಳಿದ್ದರು ಒಮ್ಮೆಯೇ ಸರಿಪಡಿಸುವುದಕ್ಕಾಗುವುದಿಲ್ಲ. ಒಂದೆರಡು ವರ್ಷಗಳಲ್ಲಿ ಸ್ವಲ್ಪ ಸ್ವಲ್ಪ ಸುಧಾರಿಸಬಹುದು ಎಂದು ಹೇಳಿದ್ದರು. ಆದರೆ ಇಲ್ಲಿಯವರೆಗೂ ಸಾಮಾನ್ಯ ಆಡಳಿತದಲ್ಲಿ ಯಾವ ಪ್ರಗತಿಯೂ ಕಂಡುಬಂದಿಲ್ಲ. ಆದಕಾರಣ ಸರ್ಕಾರದವರು ಇನ್ನು ಮುಂದೆ ಹೆಚ್ಚಿಗೆ ಸಾಮಾನ್ಯ ಆಡಳಿತದ ಕಡೆಗೆ ಲಕ್ಷ್ಯವಹಿಸಿ ಜನಸಾಮಾನ್ಯರಿಗೆ ನ್ಯಾಯ ಒದಗಿಸಿಕೊಡುವುದಕ್ಕೆ ಏರ್ಪಾಡು ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†Sri GANJI VEERAPPA (Harihar).—Mr. Speaker, Sir, I am only confining myself to the two demands on General Administration and Administration of Justice. When I heard Mr. Sunthankar the Maharashtra Ekikaran Samithi representative here, I felt as though in Mysore whether there is anything like discrimination against linguistic minorities. If there is any State most liberal in outlook and most tolerant in its views, I can say with pride that it is Mysore and Mysore alone. In Mysore we have tolerated rules who did not know Kannada, whose mother tongue was not Kannada at all. Even now in the administrative services there are officers of high ranking position who do not know Kannada and they have been tolerated and nobody has expressed his displeasure. There are schools even for linguistic minorities. I am sure in the area from which Sri Sunthankar comes, there are more Marathi Schools than it deserves. The very fact that our M.E.S. friends here speak in Marathi even though they know English and Kannada shows the spirit of tolerance that we have. All kinds of concessions are shown to linguistic minorities. In spite of that, if allegation is made that discrimination is made against Linguistic minorities and there is no fairplay towards them, then it is very far from the truth. In fact, if we look into the budget, provisions have been made for developmental works in all the constituencies from which our M.E.S. friends have been elected. So I do not know whether our friends here are making these allegations just for the sake of propaganda or justifying to their constituencies their presence here. Sir, this is not the occasion when we should say whether some of the border areas should remain here or not. There is no justification at any rate for claiming that there must be Marathi medium in the schools. If that is conceded, in Mysore there are as many as 12 languages in border areas. If the Government work has to be carried on in all these languages, I do not think any administration can be carried on efficiently. They must also try to adjust themselves to the conditions here. This is a fait accompli. I can tell our friends that in spite of all their agitations the fact remains that except for minor adjustments here and there in the border areas to which the Government of Mysore has agreed, no major change is possible. It is better that they reconcile themselves to the existing state of affairs and stop all this sort of propagandna instead of making these agitational speeches in season and out of season which does not pay anybody. They must know that in Maharashtra also as in any other State the language of administration is the regional language. In Mysore Kannada is the official language and they cannot complain if our officers do not under-

stand Marathi. It is enough if they know the official language of the State, namely Kannada, and English which is the language in vogue. I do not know why they criticise our officers on the ground that they do not know Marathi. It is too much to expect them all to know Marathi. We cannot compel that all our officers should know Marathi. I do not know whether any of the grievances that our friends may have, are legitimate. That is enough so far as discontentment expressed by Sri B. R. Sunthankar perhaps shared by other friends, is concerned.

Coming to the Administration of justice, I would make a few remarks. The present position is that in all the courts in the State the pendency is very heavy and the High Court is no exception. We see from the High Court list that cases are pending for the last four or five years. No doubt now-a-days the litigation is on the increase ; there are more and more cases specially on the writ side. The one thing that we are noticing is that in all service matters most of the orders specially in the matter of inter-State seniority and inter se seniority, matters of promotion and even matters of transfer, persons are going to the High Court and the High Court in turn passes strictures against the administration. I feel the mistake must be somewhere. May be with the high court the tendency to entertain petitions in service matters and pass remarks or if it so pleases our opposition, may be with the Government.

Sri G. V. GOWDA (Palya).—We cannot say that mistake lies in the high court when it passes judgment.

Sri GANJI VEERAPPA.—My friend Sri G. Venkatai Gowda has not understood me at all. Let me repeat. We have to face facts. We see today a number of writ petitions in service matters, strictures being passed by the high court. There must be some mistake somewhere. It may be either the tendency in the high court or amongst the officers that they can get better redress in the high court or there may be some mistakes in the orders passed by the Government.

Sri K. S. SURYANARAYANA RAO (Mysore City).—Is it the suggestion of the hon'ble member that high court is.........

Sri GANJI VEERAPPA.—The Hon'ble Member will please know that there is not enough time.

Sri G. V. GOWDA.—Sir, he is making a serious allegation on the high court.

Mr. SPEAKER.—The Hon'ble Member may make note of it and rebut it when he gets a chance.

Sri K. S. SURYANARAYANA RAO.—He seems to suggest that High Court judges have become arrogant.

Mr. SPEAKER.—I do not think he suggested it. Let not members unnecessarily impute things and develop where none exists.

Sri GANJI VEERAPPA.—The Hon'ble Member Sri K. S. Suryanarayana Rao is trying to put things that did not come out of my mouth. I am only explaining the state of affairs so that the administration as

(SRI GANJI VEERAPPA)

well as the House may bestow their thought on the existing state of affairs.

A feeling has been there especially among officers and in the services that they owe greater loyalty elsewhere than to Vidhana Soudha. That seems to be the tendency. I do not want this tendency to develop. If there are any grievances legitimately, I am not one of those who say that they cannot have legal reliefs. But in a way this sort of tendency to rush to the higher courts on all matters, whether small or big, is there and the administration comes to standstill at certain stages. We all know that in the matter of appointment in the Agriculture Department, for several months the posts remained vacant on account of a stay order issued by the high court. What I suggest is there must be expeditious disposal at all levels. When people rush to high courts, there should be speedy disposal of cases. If the Government feels that there must be additional courts or a few more judges in the high court to see that the pendency is reduced...... .....

Sri S. NIJALINGAPPA.—I may say that the High Court has more judges than it requires.

Sri GANJI VEERAPPA.—Any way the interests of litigant public demand that there must be speedy disposals. Sometime ago we had a rule, not of course applicable to high court, that one year was the maximum time allowed to subordinate courts to dispose of cases. Now we see cases pending for two or three years and afterwards when they go to high court it takes 10 or 12 years. That is not a happy state of affairs. It is necessary for the Government to take adequate measures to see that the pendency is reduced at all levels. So some more additional courts may be established at lower levels or a few more judges be appointed in the high court. Further, a number of courts are in rented buildings and as far as possible buildings may be provided for these courts instead of continuing them in rented buildings which are not worthy of location of courts. In several places the courts are located in filthy places.

With these few remarks I close my speech.

ಶ್ರೀ ಅಂದಾನಯ್ಯ (ಕುಣಿಗಲ್).—ಸ್ವಾಮಿ, ಸಭಾಪತಿಯವರೇ, ಈ ಸಾಮಾನ್ಯ ಆಡಳಿತದ ಬಗ್ಗೆ ಮಾತನಾಡುತ್ತಾ ಸಾಮಾನ್ಯ ಆಡಳಿತದ ಮೇಲೆ ಏನಾದರೂ ಒಂದು ಹಿಡಿತ ಇದೆಯೇ, ಎಂದು ನೋಡುವುದಾದರೆ ಅದರಮೇಲೆ ಯಾವ ಒಂದು ಹಿಡಿತವೂ ಕಾಣುವುದಿಲ್ಲ. ಲಂಗು ಲಗಾಮು ಇಲ್ಲದ ಕುದುರೆಯೋಪಾದಿಯಲ್ಲಿ ನಮ್ಮದೇಶದ ಆಡಳಿತ ನಡೆಯುತ್ತಿದೆ. ಈ ದಿವಸ ನಾವು ನೋಡುತ್ತಾ ಇರುವುದು ಏನಪ್ಪಾ ಎಂದರೆ ಇವೊತ್ತು ಸರ್ಕಾರದಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ಒಂದು ಪ್ರಮೋಷನ್ ಕೊಡುವುದಾಗಲೀ, ಹೊಸದಾಗಿ ಕೆಲಸವನ್ನು ಕೊಡುವುದಾಗಲೀ ಇದು ಕೇವಲ ಒಂದು ಜಾತಿಯ ಆಧಾರದ ಮೇಲೆ ನಡೆಯುತ್ತಿದೆ. ಅಧಿಕಾರಿಗಳ ಒಂದು ಕ್ಯಾರೆಕ್ಟರ್, ಇಂಟಿಗ್ರಿಟಿ ಯಾವುದೊಂದನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳದೆ, ಜಾತಿಯ ಆಧಾರದ ಮೇಲೆ ಪ್ರಮೋಷನ್ ಮತ್ತು ಅಪಾಯಿಂಟ್‌ಮೆಂಟ್‌ಗಳನ್ನು ಮಾಡುತ್ತಿದ್ದಾರೆ ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಈಗ ಪಬ್ಲಿಕ್ ವರ್ಕ್ಸ್ ಇಲಾಖೆಯನ್ನು ತೆಗೆದುಕೊಂಡರೆ ಮೇಲಿನಿಂದ ಕೆಳಗಿನವರೆಗೂ ಒಂದೇ ಭಾಗದವರಿದ್ದಾರೆ. ಮುಖ್ಯ ಮಂತ್ರಿಗಳಿಂದ ಹಿಡಿದು ಚೀಫ್ ಇಂಜಿನಿಯರ

ವರೆಗೂ ಮೈಸೂರಿನ ಒಂದೇ ಭಾಗದವರು ಆಡಳಿತವನ್ನು ನಡೆಸುತ್ತಿದ್ದಾರೆ. ಈ ರೀತಿ ಅಧಿಕಾರ ವನ್ನು ನಡೆಸುವುದಾದರೆ ಮೈಸೂರಿನ ಇತರ ಭಾಗದ ಜನರಿಗೆ ಅದರಿಂದ ತೊಂದರೆಯಾಗುತ್ತದೆ ಎಂದು ನಾನು ಹೇಳುತ್ತೇನೆ. ಇವೊತ್ತು ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ 9 ಜನ ಚೀಫ್ ಇಂಜಿನಿಯರು ಇದ್ದಾರೆ. ಈಗ ದೇಶದಲ್ಲಿ ಹಣದ ಕೊರತೆ ಇದೆ. ನಮ್ಮಲ್ಲಿ ಹಣ ಇಲ್ಲದೆ ಇರುವುದರಿಂದ ನಾವು ಯಾವ ಕೆಲಸಗಳನ್ನೂ ತೆಗೆದುಕೊಳ್ಳುವುದಿಲ್ಲ ಎಂದು ಪದೇ ಪದೇ ಮಂತ್ರಿಗಳು ಹೇಳುತ್ತಿದ್ದಾರೆ. 9 ಜನ ಚೀಫ್ ಇಂಜನಿಯರಿಗೆ ಸಾವಿರಾರು ರೂಪಾಯಿಗಳ ಸಂಬಳವನ್ನು ಕೊಡುತ್ತಿದ್ದಾರೆ. ಅವರು ಏನೂ ಕೆಲಸ ಇಲ್ಲದೆ ಸುಮ್ಮನೆ ಕುಳಿತುಕೊಂಡಿರುವುದನ್ನು ನೋಡಿದರೆ ಮೈಸೂರು ದೇಶದಲ್ಲಿ ಆಡಳಿತ ಇದೆಯೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ನಾನು ಈಗ ಒಂದೆರಡು ಉದಾಹರಣೆಗಳನ್ನು ಇಲ್ಲಿ ಹೇಳಬಯಸುತ್ತೇನೆ. ಒಬ್ಬ ಅಸಿಸ್ಟೆಂಟ್ ಇಂಜಿನಿಯರು ಮೈಸೂರು ರಾಜ್ಯದ ಖಾದಿ ಬೋರ್ಡಿನ ಚೇರ್ಮನ್ ಅವರ ಕ್ಷೇತ್ರದಲ್ಲಿ 150 ರೂಪಾಯಿಗಳನ್ನು ಲಾಸ್ ಮಾಡಿದ್ದಾರೆಂದು ಒಂದು ಇನ್‌ವೆಸ್ಟಿಗೇಷನ್ ಮಾಡಿದ್ದಾರೆ. ಯಾವುದೋ ಒಂದು ಕೆಲಸಕ್ಕೆ ಕ್ವಾರಿ ಯಲ್ಲಿ ಜೆಲ್ಲಿಯನ್ನು ಕೊಡಲು ಅಸಿಸ್ಟೆಂಟ್ ಇಂಜಿನಿಯರು ಲೀಡ್ ಜಾಸ್ತಿ ಕೊಟ್ಟಿದ್ದಾರೆ. ಅದರಿಂದ 150 ರೂಪಾಯಿಗಳು ಲುಕ್ಸಾನು ಆಗಿದೆಯೆಂದು ಇನ್‌ವೆಸ್ಟಿಗೇಷನ್ ನಡೆಸಿ ಅದು ಪೂರ್ತಿಯಾಗು ವುದಕ್ಕೆ 10 ಸಾವಿರ ರೂಪಾಯಿಗಳು ಖರ್ಚಾಗಿದೆ. 150 ರೂಪಾಯಿಗಳ ಲುಕ್ಸಾನು ಆಗಿರತಕ್ಕ ಸರ್ಕಾರಕ್ಕೆ ಅದನ್ನು ಇನ್‌ವೆಸ್ಟಿಗೇಷನ್ ಮಾಡಬೇಕಾದರೆ 10 ಸಾವಿರ ರೂಪಾಯಿಗಳು ಖರ್ಚಾಗಿದೆ. ಆ ಇನ್‌ವೆಸ್ಟಿಗೇಷನ್ ಆಫೀಸರು ವಿಧಾನಸೌಧದಲ್ಲಿ ಪಬ್ಲಿಕ್ ವರ್ಕ್ಸ್ ಶಾಖೆಯಲ್ಲಿ ಕೆಲಸ ಮಾಡು ತ್ತಿದ್ದಾರೆ. ಸೂಪರಿಂಟೆಂಡೆಂಗ್ ಇಂಜಿನಿಯರು ಇನ್‌ವೆಸ್ಟಿಗೇಷನ್ ರಿಪೋರ್ಟನ್ನು ಕಂಪ್ಲೀಟ್ ಮಾಡಿ ರಿಪೋರ್ಟನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಈಗ ಸರ್ಕಾರಕ್ಕೆ ಯಾವುದೇ ಲುಕ್ಸಾನು ಮಾಡಿಲ್ಲ, ಅವರಿಗೆ ಯಾವ ಶಿಕ್ಷೆಯನ್ನು ಕೊಡಬೇಕಾದ್ದು ಇಲ್ಲ ಎಂದು ಸೂಪರಿಂಟೆಂಡಿಂಗ್ ಇಂಜಿನಿ ಯರು ರಿಪೋರ್ಟ್ ಕೊಟ್ಟಿದ್ದಾರೆ. ಅದೇರೀತಿ ಅಂಡರ್ ಸೆಕ್ರೆಟರಿ ಮತ್ತು ಡೆಪ್ಯುಟಿ ಸೆಕ್ರೆಟರಿಗಳು ಎಂಡಾರ್ಸ್ ಮಾಡಿರುತ್ತಾರೆ.

3-30 P.M.

ಸೆಕ್ರೆಟರಿ ಲೆವಲ್‌ಗೆ ಬಂದಾಗ ಅದರಲ್ಲಿ ತಪ್ಪು ಮಾಡಿದ್ದಾರೆ ಎಂದು, ಕೊನೆಯದಾಗಿ ಆ ಅಧಿಕಾರಿಗಳ ಒಂದು ಇನ್‌ಕ್ರಿಮೆಂಟನ್ನು ಸ್ಟಾಪ್ ಮಾಡಬೇಕೆಂದು ಆರ್ಡರು ಮಾಡಿದ್ದಾರೆ. ಇದರ ಜೊತೆಗೆ ಇನ್ನೊಂದು ನಿದರ್ಶನ ಕೊಡುತ್ತೇನೆ. ಚಿಕ್ಕಮಗಳೂರಿನಲ್ಲಿ ಕೆಲಸ ಮಾಡತಕ್ಕ ಒಬ್ಬರು ಅಸಿಸ್ಟೆಂಟು ಇಂಜನೀಯರ ಮೇಲೆ ಹತ್ತು, ಹನ್ನೆರಡು ಆಲಿಗೇಷನ್ನುಗಳು ಅವರ ಮೇಲೆ ಬಂದು ಅದನ್ನು ಇನ್ ವೆಸ್ಟಿಗೇಟು ಮಾಡಬೇಕೆಂದು ಅವರ ಮೇಲೆ ತನಿಖೆ ಮಾಡಿ ರಿಪೋರ್ಟು ಸರ್ಕಾರಕ್ಕೆ ಬಂದಾಗ ಅವ ರೇನೂ ತಪ್ಪು ಮಾಡಿಲ್ಲ ಎಂದು ಮತ್ತು ಅವರು ಶಿಕ್ಷೆಗೆ ಅರ್ಹರಲ್ಲ ಎಂದು ಸರ್ಕಾರಕ್ಕೆ ರಿಪೋರ್ಟು ಕೊಟ್ಟಿದ್ದಾರೆ. ಇದನ್ನೆಲ್ಲಾ ನೋಡಿ ಹೇಳುವುದಾದರೆ ಇಲ್ಲಿ ಬರೀ ಜಾತೀಯತೆಯ ಆಧಾರದ ಮೇಲೆಯೇ ಶಿಕ್ಷೆಯನ್ನು ಕೊಡುವ ಅಧಿಕಾರಿಗಳಾಗಿದ್ದಾರೆ. ವಿಚಾರಣೆಗೊಳಗಾದವನು ರೇವಣ ಸಿದ್ದಪ್ಪನಾದರೆ ಮಾಫೀ, ರೇವಣ ಗೌಡನಾದರೆ ಶಿಕ್ಷೆ ಎಂಬ ನೀತಿಯಂತೆ. ಎಲ್ಲ ಒಂದು ಜಾತೀ ಯತೆಯ ಆಧಾರದ ಮೇಲೆಯೇ ನಡೆಯುತ್ತಿದೆ. ಇದರ ಇನ್‌ವೆಸ್ಟಿಗೇಷನ್ನು ರಿಪೋರ್ಟು ಸರ್ಕಾ ರಕ್ಕೆ ಬಂದಿದೆ. ಇಂತಹ ರಿಪೋರ್ಟುಗಳು ಬಂದಾಗ ಸರ್ಕಾರದವರು ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಇದರಲ್ಲಿ ಶಿಕ್ಷಾರ್ಹರು ಯಾರು ಎನ್ನುವುದನ್ನು ಕೊನೆಯದಾಗಿ ಮುಖ್ಯ ಮಂತ್ರಿಗಳೇ ಕೊಡಬೇಕೆಂದು ನಾನು ಇಲ್ಲಿ ಹೇಳುತ್ತೇನೆ.

ಇನ್ನೊಂದು ಇನ್‌ಸ್ಟೆನ್ಸ್ ಇಲ್ಲಿ ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಹೊಸದಾಗಿ ಒಂದು ಕೆರೆ ಯನ್ನು ಕಟ್ಟುವಾಗ ಒಂದು ಸೈಟಿನ ಸೆಲಕ್ಷನ್ನು ಬಂದಿತ್ತು. ಇದನ್ನು ಲೋಯರ್ ಸೈಟಿನಲ್ಲಿ ಕಟ್ಟ ಬೇಕೋ ಇಲ್ಲವೇ ಅಪ್ಪರು ಸೈಟಿನಲ್ಲಿ ಕಟ್ಟಬೇಕೋ ಇದರಲ್ಲಿ ಯೀಲ್ಡ್ ಹೇಗಿದೆ, ಅಚ್ಚು ಕಟ್ಟು ಹೇಗಿದೆ ಇದರಿಂದ ಎಷ್ಟು ಜನಕ್ಕೆ ಅನುಕೂಲವಾಗುತ್ತದೆ ಎನ್ನುವುದನ್ನೆಲ್ಲಾ ಪರಿಶೀಲನೆ ಮಾಡಿದ ಚೀಫ್ ಇಂಜನೀಯರ್ ಜನರಲ್ ಸಾಹೇಬರವರು ಲೋಯರು ಸೈಟು ಚನ್ನಾಗಿದ್ದರೂ ಅದನ್ನು ಬಿಟ್ಟು ಅಪ್ಪರ್ ಸೈಟೇ ಫೀಸಿಬಲ್ ಎಂದು ಸರ್ಕಾರಕ್ಕೆ ರಿಪೋರ್ಟು ಕೊಟ್ಟರು. ಇದನ್ನು ನೋಡಿದರೆ ಸರ್ಕಾರಿ ಅಧಿಕಾರಿಗಳ ದಕ್ಷತೆ ಹೇಗಿದೆ ಎನ್ನುವುದು ಗೊತ್ತಾಗುತ್ತದೆ. ಕೊನೆಗೆ ಇದು ಸರ್ಕಾರಕ್ಕೆ ಬಂದು ಇದರ ಗಮನ ಉಪಮಂತ್ರಿಗಳ ಕಡೆ ಹೋದಾಗ ಅವರು ಪುನಃ ಅದನ್ನು ವಾಪಸ್ಸು ಕಳು ಹಿಸಿ ಕೊನೆಗೆ ಅಲ್ಲಿರುವ ಲೋಯರು ಸೈಟೇ ಫೀಸಿಬಲ್ ಎಂದು ಆರ್ಡರಾಗಿ ಅಲ್ಲಿನ ಅಧಿಕಾರಿಗಳು ಕೆಲಸಮಾಡುವಂತೆ ಆಯಿತು. ಹೀಗೆ ಸರ್ಕಾರದಲ್ಲಿನ ಅಧಿಕಾರಿಗಳು ಭಯವೇ ಇಲ್ಲದೆ ಬೇಜವಾಬು ದಾರಿಯಿಂದ ಕೆಲಸ ಮಾಡುತ್ತಿದ್ದರೆ ಜನತೆಗೆ ಉಪಕಾರ ಮಾಡಿದಂತಾಗುತ್ತದೆಯೇ ಎಂದು ನಾನು

(ಶ್ರೀ ಅಂದಾನಯ್ಯ)

ಇಲ್ಲಿ ಕೇಳುತ್ತೇನೆ. ಹೀಗಾಗಿ ಸರ್ಕಾರಿ ಅಧಿಕಾರಿಗಳಲ್ಲಿ ಯಾವ ಲಂಗು ಲಗಾಮು ಇಲ್ಲದಂತೆ ಕೆಲಸಗಳು ನಡೆಯುತ್ತಿವೆ ಎಂದು ಇಲ್ಲಿ ಹೇಳಬೇಕಾಗಿದೆ.

ನಮ್ಮ ದೇಶದಲ್ಲಿ ನಮ್ಮ ಮುಖ್ಯ ಮಂತ್ರಿಗಳಿಗೆ ಒಂದು ಆಸೆ ಇದೆ. ಯಾವುದಾದರೂ ಮುಖ್ಯ ಹುದ್ದೆಗಳು ಖಾಲಿ ಬಿದ್ದರೆ, ವೈಸ್ ಚಾನ್ಸಲರು ಅಥವಾ ಹೈ ಕೋರ್ಟಿನ ಮುಖ್ಯ ನ್ಯಾಯಾಧೀಶರು ಇತ್ಯಾದಿ, ನಮ್ಮ ದೇಶದಲ್ಲಿ ಲಾಯಕ್ಕಾದವರು ಇಲ್ಲ, ಇರುವವರೆಲ್ಲ ಅಧ್ಯಕ್ಷರು, ಬುದ್ಧಿ ಕಮ್ಮಿ ಎಂದು ನೆರೆ ರಾಜ್ಯದವರನ್ನು ಇಲ್ಲಿಗೆ ಆಹ್ವಾನ ಮಾಡಿ ಇಲ್ಲಿಗೆ ಕರೆಸುತ್ತಾರೆ. ನಾನಾದರೂ ನಮ್ಮ ಮುಖ್ಯ ಮಂತ್ರಿಗಳಿಗೆ ಹೇಳುವುದು, ನಮ್ಮ ಮುಖ್ಯ ಮಂತ್ರಿಗಳಿಗೆ ವಯಸ್ಸಾಯಿತು, ನಿಮ್ಮ ಕೈಯ್ಯಲ್ಲಿ ಆಡಳಿತ ನಡೆಸಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ನೀವು ಮುಖ್ಯ ಮಂತ್ರಿಗಳಾಗಿರುವುದಕ್ಕೆ ನಾಲಾಯಕ್ಕು. ಇದರಿಂದ ನಮ್ಮ ದೇಶದ ಆಡಳಿತ ಚೆನ್ನಾಗಿ ಆಗಬೇಕಾದರೆ ನೆರೆ ರಾಜ್ಯದಿಂದ ಒಬ್ಬರನ್ನು ಇಲ್ಲಿಗೆ ತಂದು ಮುಖ್ಯ ಮಂತ್ರಿಗಳಾಗಿ ಕೆಲಸ ಮಾಡಲು ಆಹ್ವಾನಿಸುವುದು ಒಳ್ಳೆಯದು ಎಂದು ಇಲ್ಲಿ ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇವೆ.

ಇನ್ನು ಮೈನರ್ ಇರಿಗೇಷನ್ನು ಬಗ್ಗೆ ಮಾತನಾಡಬೇಕಾದರೆ, ನಮ್ಮ ಹಣಕಾಸಿನ ಮಂತ್ರಿಗಳು ಹಳೆಯ ಮೈಸೂರು ಮತ್ತು ಹೊಸ ಮೈಸೂರು ಎನ್ನುವ ಭೇಧವೇ ಇಲ್ಲ, ಎಲ್ಲ ಕಡೆಗಳಲ್ಲಿಯೂ ಒಂದೇ ಸಮನೆ ಖರ್ಚು ಮಾಡುತ್ತಿದ್ದೇವೆ ಎಂದು ಈಗಾಗಲೇ ಇಲ್ಲಿ ಉತ್ತರ ಕೊಟ್ಟರು. ಇದಕ್ಕೆ ಒಂದೇ ಒಂದು ನಿದರ್ಶನವನ್ನು ಇಲ್ಲಿ ಹೇಳುತ್ತೇನೆ. ಲಿಫ್ಟ್ ಇರಿಗೇಷನ್ ಸ್ಕೀಂಗಳ ಪಟ್ಟಿಯಲ್ಲಿ 31 ಯೋಜನೆಗಳಿವೆ. ಇದನ್ನು ತೆಗೆದು ನೋಡಿದರೆ ಹಳೆಯ ಮೈಸೂರಿನ ಭಾಗದಲ್ಲಿ ಒಂದು ಲಿಫ್ಟ್ ಇರಿಗೇಷನ್ ಯೋಜನೆಯ ಸ್ಕೀಂ ಕೂಡ ಸೇರಿಸಿಲ್ಲ. ಹಳೆಯ ಮೈಸೂರಿನ ಭಾಗದಲ್ಲಿರುವ ಅಧಿಕಾರಿಗಳಿಗೆ ಯಾವ ಎಸ್ಟಿಮೇಟುಗಳನ್ನೂ ತಯಾರು ಮಾಡುವುದಕ್ಕೆ ಬರಲಿಲ್ಲವೇ ? ಇಲ್ಲಿ ನಮಗೆ ಒದಗಿಸಿರುವ ಪ್ರಶ್ನೆಗೆ ಉತ್ತರ ಕೊಡ ತ್ತಾ ಹೇಳುವಾಗ ನೋಡಿದರೆ ಇದರಲ್ಲಿ ಎಲ್ಲ ಹೊಸ ಮೈಸೂರಿಗೆ ಸೇರಿದ ಭಾಗಗಳಲ್ಲೇ ಇರುವ ಕೆಲಸಗಳನ್ನು ಇದರಲ್ಲಿ ಸೇರಿಸಲಾಗಿದೆ. ಹಳೆಯ ಮೈಸೂರಿಗೆ ಸೇರಿದಂತಹ ಒಂದು ಸ್ಕೀಂ ಆದರೂ ಇದರಲ್ಲಿಲ್ಲ. ಇದರಿಂದ ಸರ್ಕಾರಕ್ಕೆ ಹಳೆಯ ಮೈಸೂರು ಹಾಗೂ ಹೊಸ ಮೈಸೂರು ಎಂದು ತಾರತಮ್ಯ ಮಾಡಿದಂತಾಗಲಿಲ್ಲವೇ ? ಇದರಿಂದ ಹಳೆಯ ಮೈಸೂರಿನ ಜನತೆಗೆ ತೊಂದರೆ ಮಾಡಿದಂತಾಗಲಿಲ್ಲವೇ ಎಂದು ನಾನು ಮತ್ತೊಮ್ಮೆ ಇಲ್ಲಿ ಕೇಳಬಯಸುತ್ತೇನೆ.

ಇನ್ನು ಕ್ಯಾಬಿನೆಟ್ಟು ರೆಪ್ರೆಸೆಂಟೀವ್‌ಗಳೆಂದು ಯಾರೂ ಕಳುಹಿಸದೇ ಇರುವ ಪಟ್ಟಿಯು ಮೊದಲಿಗೆ ಕ್ಯಾಬಿನೆಟ್ಟು ಮೀಟಿಂಗ್ ಆಗುವಾಗ ಸೇರಿಸಿರಲಿಲ್ಲ. ಇದಕ್ಕೆ ಯಾವ ರೆಸಲ್ಯೂಷನ್ನು ಕೂಡ ಆಗಿರಲಿಲ್ಲ. ಕ್ಯಾಬಿನೆಟ್ ಮೀಟಿಂಗ್ ಮುಗಿದ ಮೇಲೆ ಅಜೆಂಡದಲ್ಲಿ ಹೊಸದಾಗಿ ಈ ಸಬ್‌ಜೆಕ್ಟನ್ನು ಸೇರಿಸಿ ಇತರೆ ಮಂತ್ರಿಗಳ ರುಜು ಪಡೆದು, ದೇಶಾದ್ಯಂತ ಪ್ರವಾಸ ಮಾಡಲು ಹಣಕಾಸಿನ ಸಚಿವರನ್ನು ಮತ್ತು ಲೋಕೋಪಯೋಗಿ ಮಂತ್ರಿಗಳನ್ನು ಕಳುಹಿಸಿ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಇಂತಹ ಪ್ರವಾಸಗಳಿಗಾಗಿ ಅನ್ಯಾಯವಾಗಿ ದೇಶದ ದುಡ್ಡನ್ನು ಖರ್ಚು ಮಾಡುವುದು ಸರಿಯೇ ?

ಇನ್ನು ನಮ್ಮ ಕುಣಿಗಲ್ ತಾಲ್ಲೂಕಿನಲ್ಲಿ ಯಾವ ಹೊಸ ಕೆಲಸಗಳೂ ಆಗಿಲ್ಲ. ಇಲ್ಲಿ ಸಿಲ್ಟ್ ಓವರ್ ವರ್ಕುಗಳು ಹೆಚ್ಚಾಗಿವೆ, ಇದರಿಂದಾಗಿ ಇಲ್ಲಿ 10-12 ಕೆಲಸಗಳು ಪೈಪೋಟಿಯಿಂದಾಗಿ ಯಾವ ಕೆಲಸಗಳೂ ಪೂರ್ತಿಯಾಗಿಲ್ಲ. ಇದರ ಬಗ್ಗೆ ಪ್ರಶ್ನೆ ಕೇಳಿದಾಗ ಸಿಲ್ಟ್ ಓವರ್ ವರ್ಕುಗಳಿವೆ ಆದರಿಂದ ಯಾವ ಹೊಸ ಕೆಲಸಗಳನ್ನೂ ತೆಗೆದುಕೊಂಡಿಲ್ಲ ಎಂದು ಉತ್ತರ ಹೇಳುತ್ತಾರೆ. ಇಂತಹ ಸಿಲ್ಟ್ ಓವರು ವರ್ಕುಗಳು ಇನ್ನು ಹತ್ತು ಹನ್ನೆರಡು ವರ್ಷಗಳಾದರೂ ಮುಗಿಯುವುದೇ ಇಲ್ಲ. ಆದರಿಂದ ವಿವಾದ ಇರತಕ್ಕಂಥ ಕೆಲಸಗಳನ್ನು ನಿಲ್ಲಿಸಿ. ಈಗ ಹೊಸ ಕೆಲಸಗಳನ್ನು ಯಾವ ತಕರಾರುಗಳೂ ಇಲ್ಲದೇ ಇರುವಂತಹವುಗಳನ್ನು ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನ್ಯಾಯಾಂಗದ ಆಡಳಿತದ ಬಗ್ಗೆ ಹೇಳುವುದಾದರೆ ನಮ್ಮ ದೇಶದಲ್ಲಿ ಜನಗಳಲ್ಲಿ ಒಂದು ರೀತಿಯಾದ ನಂಬಿಕೆ ಇತ್ತು, ನ್ಯಾಯಾಲಯಗಳಿಗೆ ಹೋದರೆ ನಮಗೆ ಸರಿಯಾದ ನ್ಯಾಯ ದೊರಕುತ್ತದೆ ಮತ್ತು ನ್ಯಾಯವಾದ ತೀರ್ಮಾನ ದೊರಕಿ ರೈತರಿಗೆ ಅನುಕೂಲವಾಗುತ್ತದೆ ಎಂದು ಇತ್ತು. ಆದರೆ ಇವೊತ್ತು ಲೋಯರ್ ಕೋರ್ಟುಗಳಲ್ಲಿ ಲಂಚರುಷುವತ್ತುಗಳು ಜಾಸ್ತಿಯಾಗಿ ಅನೇಕ ಕಡೆ ನ್ಯಾಯಾಧೀಶರುಗಳೇ ಲಂಚ ತೆಗೆದುಕೊಂಡೇ ತೀರ್ಮಾನಗಳನ್ನು ಕೊಡುತ್ತಾರೆ. ಇಂತಹ ನ್ಯಾಯಾಲಯಗಳಿಗೆ ಬಂದರೆ ನ್ಯಾಯ ಜನಕ್ಕೆ ನಿಜವಾಗಿ ದೊರಕುತ್ತದೆಯೇ ? ಇದನ್ನು ತಪ್ಪಿಸಲು ಸರ್ಕಾರ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ಅಧ್ಯಕ್ಷರು ನನಗೆ ಇಷ್ಟು ಅವಕಾಶಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್ (ಗಾಂಧಿನಗರ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿಟ್ಟಿರುವ ಬೇಡಿಕೆಗಳನ್ನು ಅನುಮೋದಿಸುತ್ತಾ ಒಂದೆರಡು ವಿಷಯಗಳನ್ನು ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಈಗ ತಾನೇ ಮಾತನಾಡಿದಂತಹ ನಮ್ಮ ವಿರೋಧಪಕ್ಷದ ಮಾನ್ಯ ಸದಸ್ಯರು ಮಾತನಾಡುತ್ತಾ ನಮ್ಮ ಮುಖ್ಯ ಮಂತ್ರಿಗಳು ಮುದುಕರಾಗಿದ್ದಾರೆ. ಅವರಿಂದ ಅವರು ಬಿಟ್ಟು ಹುಡುಗರನ್ನು ಹೊಸಬರನ್ನು ಮುಖ್ಯ ಮಂತ್ರಿಗಳಾಗಿ ಮಾಡಬಹುದು ಎಂದು. ಹೇಳುವುದು ಹೇಗಿದೆ ಎಂದರೆ :

ಹಳೆಯದೆಲ್ಲವು ಹೊಲ್ಲ, ಹಾಕು ಬೆಂಕಿಗೆ ಎಲ್ಲ
ಹೊಸದೊಂದೇ ಒಳಿತೆನ್ನುವೀ ಕೂಗು ಏಕೆ
ಹಳಬರೆನಿಸಿದ ನಿಮ್ಮ ಹಡೆದ ತಂದೆ ತಾಯಿಗಳ
ಕೊರಳ ಕೊಯ್ಯದೆ ಸುಮ್ಮನಿರುವಿರೇಕೇ ?

ಇವೊತ್ತು ಮುದುಕರಾಗಿರುವವರು ಇರಬಹುದು, ನಾಳೆ ಹುಡುಗರು ರಾಜ್ಯಕ್ಕೆ ಬರಬಹುದು. ಇದ್ದ ಸಚಿವರು ಹೋಗಬಹುದು, ಬೇರೆ ಸಚಿವರು ಬರಬಹುದು. ಆದರೆ ಸರ್ಕಾರದ ಸಾರ್ವತ್ರಿಕ ಆಡಳಿತವಂತೂ ಸದಾ ಇರತಕ್ಕದ್ದೇ. ಇದು ಶುದ್ಧವಾಗಿದ್ದಷ್ಟೂ ದೇಶ ಭದ್ರತೆಯಿಂದಿರುತ್ತದೆ. ಮಹಿಳೆಯರಿಗೆ ಕುಂಕುಮ ಹೇಗೆ ಸೌಭಾಗ್ಯವೋ ಹಾಗೆ ಸಾರ್ವತ್ರಿಕ ಆಡಳಿತ ಸರ್ಕಾರಕ್ಕೆ ಕುಂಕುಮದಂತೆ ಸೌಭಾಗ್ಯದಾಯಕವಾದದ್ದು. ನಾನು ಈಗ ಕುಂಕುಮ ಇಡಲು ನಿಂತಿದ್ದೇನೆ. ಅರ್ಥಾತ್ ಸಾರ್ವತ್ರಿಕ ಆಡಳಿತದ ಆಯುವ್ಯಯಕ್ಕೆ ಶುಭ ಕೋರಿ ಅಸ್ತು ಎನ್ನಲು ನಿಂತಿದ್ದೇನೆ. ಇದಕ್ಕೆ ಸಂಬಂಧಿಸಿದ ಆಯುವ್ಯಯಕ್ಕೆ ಅಸ್ತು ಎನ್ನುವುದು ಇದೇ ಕೊನೆ. ಮುಂದಿನ ಚುನಾವಣೆಯ ನಂತರದ ವಿಚಾರ ಭವಿಷ್ಯತ್ತಿಗೆ ಸೇರಿದ್ದು. ಲೋಕದ ಆಗುಹೋಗುಗಳ ಅರಿವಿಲ್ಲದೆ ಕಾಲಚಕ್ರ ಉರುಳುತ್ತಿದೆ. ಸಾರ್ವತ್ರಿಕ ಆಡಳಿತವೂ ಸಹ ಈ ಕಾಲಚಕ್ರಕ್ಕೆ ಸಿಕ್ಕಿ ಉರುಳುತ್ತಿದೆ. ಕಳೆದ ನಾಲ್ಕು ವರ್ಷ ಮೂರು ತಿಂಗಳಲ್ಲಿ ಹಗಲು ರಾತ್ರಿಗಳಂತೆ ಸಾರ್ವತ್ರಿಕ ಆಡಳಿತದಲ್ಲಿ ಕಷ್ಟ ಸುಖ ಎರಡನ್ನೂ ನೋಡಿದ್ದಾಯ್ತು. ಇನ್ನುಳಿವ ಅವಧಿಯಲ್ಲಿ ಸಾರ್ವತ್ರಿಕ ಆಡಳಿತದಿಂದ ನಾಡಿಗೆ ಹೆಚ್ಚು ಹೆಚ್ಚು ಫಲ ದೊರೆಯಲಿ. ನಮ್ಮ ಸರ್ಕಾರಕ್ಕೆ ಕೀರ್ತಿ ಬರಲಿ ಎಂದು ಹಾರೈಸುತ್ತೇನೆ. ಸದ್ಯದ ಆಡಳಿತದ ಕೊನೆಯ ಅಂಕ ನೋಡುತ್ತಿರುವಾಗ ಹಾಗಿದ್ದರೆ ಚೆನ್ನಾಗಿತ್ತು, ಹೀಗಿದ್ದರೆ ಚೆನ್ನಾಗಿತ್ತು ಎಂದು ಹೇಳುವುದಕ್ಕಿಂತಲೂ ಆಗಿರುವುದು ಆಗಿ ಹೋಗಿದೆ ಇರುವಷ್ಟು ಅವಧಿಯಲ್ಲಿ ಶಕ್ತಿ ಮೀರಿ ಒಳ್ಳೆಯದು ಮಾಡಿ ಎಂದು ಹೇಳಬಯಸುತ್ತೇನೆ.

ಎರಡನೇಯದಾಗಿ 'ಆಗಬಾ, ಈಗ ಬಾ, ಹೋಗಿ ಬಾ ಎನ್ನದಲೆ, ಆಗಲೆ ಕರೆದು ಕೊಡುವವನ ಧರ್ಮ ಹೊನ್ನಾಗದೆ ಬಿಡದು ಸರ್ವಜ್ಞ' ಎಂಬಂತೆ ಸಂಬಂಧಪಟ್ಟ ಕೆಲಸ ಕಾರ್ಯಗಳು ವಿಳಂಬವಿಲ್ಲದೆ ನಡೆದರೆ ಆಡಳಿತಕ್ಕೆ ಕೀರ್ತಿ ಬರುತ್ತದೆ. ವಿಳಂಬ ನೀತಿ ಆಡಳಿತಕ್ಕೆ ಒಂದು ದೊಡ್ಡ ರೋಗ, ವಿಧಾನ ಸೌಧದಲ್ಲಿ ವಿಧಾನ ದ್ರೋಹದ ನಿವಾರಣೆಯಾಗಬೇಕು. ಆಗ ವಿಧಾನ ದ್ರೋಹದಿಂದಾಗುವ ಅಧರ್ಮ ತನಗೆ ತಾನೆ ನಿಲ್ಲುತ್ತದೆ. ವಿಳಂಬನೀತಿಯಿಂದ ಆಡಳಿತದಲ್ಲಿ ಅನೇಕ ಎಡರುತೊಡರುಗಳು ಕಷ್ಟನಷ್ಟಗಳುಂಟಾಗುತ್ತವೆ. ಒಂದು ವಿಷಯ ಇತ್ಯರ್ಥವಾಗಬೇಕಾದರೆ, ಕೊಂಕಣ ಸುತ್ತಿ ಮೈಲಾರಕ್ಕೆ ಬಂದಂತಾಗುತ್ತದೆ. ಆಡಳಿತ ನೇರಮಾರ್ಗ ತೋರಿಸಬೇಕು. ಸುತ್ತು ಮಾರ್ಗ ತೋರಿಸಬಾರದು. ಉದಾಹರಣೆಗೆ:—ನಮ್ಮ ಊರಿನಲ್ಲಿ ಬಿ. ವಿ. ಕೃಷ್ಣಯ್ಯಂಗಾರ್ ರಸ್ತೆ ಅಂತ ಇದೆ. ಈಗ 6 ವರ್ಷದಿಂದ ಅಲ್ಲಿಯ ಜನರಿಗೆ ಜಾಗ ಇಲ್ಲ. ಅವರಿಗೆ ಕೊಡುವ ಹಣ ಕೊಟ್ಟಿಲ್ಲ. ಮನೆಮಾರು ಕಳೆದುಕೊಂಡು 6 ವರ್ಷಗಳಿಂದ ಸಫರ್ ಮಾಡುತ್ತಿದ್ದಾರೆ. ನಾನು ಟ್ರಸ್ಟ್ ಬೋರ್ಡ್ ಬಗ್ಗೆ ಪ್ರಶ್ನೆಗಳನ್ನು ಕಳುಹಿಸಿದ್ದೆ. ನಾನು ಪ್ರಶ್ನೆ ಕಳುಹಿಸಿದ ಮೇಲೆ ಮೂರು ಅಧಿವೇಶನಗಳಾದವು. ಆ ಪ್ರಶ್ನೆಗಳಿಗೆ ಇನ್ನೂ ಉತ್ತರ ದೊರಕಿಲ್ಲ. ಹೇಗಾದರೆ ಗತಿಯೇನು ? ಸಾರ್ವತ್ರಿಕ ಆಡಳಿತದ ಬಗ್ಗೆ ಸಂದೇಹಕ್ಕೆ ಅವಕಾಶವಾಗುವುದಿಲ್ಲವೇ ? 'ಇದಿ ನ್ಯಾಯಮಾ ? ವೈಕುಂಠ ಪತಿ'. ಎಂದು ಸಭಾಪತಿಗಳ ಮೊರೆ ಹೋಗಬೇಕಾಗುತ್ತದೆ. ಈ ವಿಚಾರದಲ್ಲಿ ಮುಖ್ಯಮಂತ್ರಿಗಳು ಉತ್ತರಿಸುವುದಾಗಿ ಹೇಳಿದ್ದಾರೆ. ಈ ಅಧಿವೇಶನದಲ್ಲೇ ಉತ್ತರ ದೊರಕಿಸಿ ಕೊಡಬೇಕಾಗಿ ಮತ್ತೊಮ್ಮೆ ವಿನಂತಿಸುತ್ತೇನೆ.

ಸೀನಿಯಾರಿಟಿ ಪ್ರಶ್ನೆಯ ತೀರ್ಮಾನವಾಗದೆ ಇನ್ನೂ ಶೇಷ ಪ್ರಶ್ನೆಯಾಗಿಯೇ ಉಳಿದಿದೆ. ಅಧಿಕಾರ ವರ್ಗಕ್ಕೆ ಇದು ತಲೆ ನೋವು. ನನ್ನ ಅರ್ಹತೆ ಏನಾಯಿತೋ, ನ್ಯಾಯವಾಗಿದೆಯೋ, ಅನ್ಯಾಯವಾಗಿದೆಯೋ, ಅನ್ಯಾಯವಾದರೆ ಕೋರ್ಟಿನ ಮರೆಹೋಗಬೇಕು, ಇತ್ಯಾದಿ ಸ್ವಾಭಾವಿಕವಾಗಿ ಸಂಬಂಧಪಟ್ಟವರು- ಸಂಶಯ ಸಾಮ್ರಾಜ್ಯದಲ್ಲಿದ್ದುಕೊಂಡು, ಸಂಶಯಾತ್ಮಕವಾಗಿಯೇ ಕೆಲಸ ಮಾಡುತ್ತಾ ಹೋಗುತ್ತಾರೆ. ಪ್ರಮೋಷನ್ ವಿಚಾರವಾದರೂ ಅಷ್ಟೆ. ಅರ್ಹತೆಯಿದ್ದವರಿಗೆ ಪ್ರಮೋಷನ್ ಸಿಗದೆ, ನಿವೃತ್ತಿಯಾಗತಕ್ಕವರಿಗೆ ಪುನರ್ನೇಮಕ ಮಾಡುವುದರಿಂದ ಸಂಬಂಧಪಟ್ಟವರಿಗೆ ತನು, ಮನ, ಧನ ಮೂರರಲ್ಲಿಯೂ ಹಾನಿಯಾಗುವುದಿಲ್ಲವೇ ? ವಿಶೇಷ ಪರಿಸ್ಥಿತಿಯ ಹೊರತು, ಆತ

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ತಪ್ಪು ಅವನನ್ನು ಬಿಟ್ಟರೆ ಇನ್ನಿಲ್ಲ ಎನ್ನುವಂತಹ ಪ್ರಸಂಗದಲ್ಲಿ ಒಂದೆರಡು ಪುನರ್ನೇಮಕವಾದರೆ ತಪ್ಪೇನೂ ಅಲ್ಲ. ಆದರೆ ಅದು ಪದ್ಧತಿಯಾಗಬಾರದ . ಇನ್ನು ವರ್ಗಾವರ್ಗಿಗಳಲ್ಲೂ ಅಷ್ಟೆ. ಪ್ರಭಾವದಿಂದ ಅನೇಕ ವರ್ಗಾವರ್ಗಿಗಳು ನಡೆದಿವೆ. ನಡೆಯುತ್ತಿವೆ. ಇದಕ್ಕೆ ಕೆಲವರು ಸಚಿವರು, ಸದಸ್ಯರಾದ ನಾವೂ ಸಹ ಹೊಣೆಗಾರರಾಗಿರುತ್ತೇವೆ. ಸಂಬಂಧಪಟ್ಟ ಸಚಿವರಿಗೆ ಗೊತ್ತಿಲ್ಲದೆ ಕೆಲವು ನಡೆದು ಹೋಗಿರುತ್ತವೆ. ನಾನು ಈಗ ಹೇಳುತ್ತಿರುವ ಪ್ರತಿಯೊಂದಕ್ಕೂ ನಿದರ್ಶನಗಳನ್ನಿಟ್ಟು ಕೊಂಡೇ ಮಾತನಾಡುತ್ತಿದ್ದೇನೆಂಬುದನ್ನು ತಾವು ಗಮನಿಸುತ್ತೀರೆಂದು ನಂಬುತ್ತೇನೆ.

ಮಿತಿವ್ಯಯವನ್ನು ಸಾರ್ವತ್ರಿಕ ಆಡಳಿತದಲ್ಲಿ ಸಾಧಿಸುವುದರ ಬಗ್ಗೆ ಸರ್ಕಾರದವರು ಇನ್ನೂ ಸಿದ್ಧಿಯನ್ನು ಪಡೆದಿಲ್ಲ. ಆನೆಯೇ ಹೋಗುವಾಗ ಬಾಲಕ್ಕೆ ಬಡಿದಾಡಿದರೆಂಬಂತೆ, ಕಾಗದ, ಮಸಿ ಸೋಪು, ಟವಲ್ ಇವುಗಳಲ್ಲಿ ಉಳಿತಾಯ ಮಾಡುವುದು ಉಳಿತಾಯದ ಕಿರು ಮಂತ್ರವಾದರೂ, ಸಚಿವರ ನಿವಾಸಗಳನ್ನು ಸಹಸ್ರಗಟ್ಟಳೆ ಖರ್ಚಿನಿಂದ ಅಲಂಕರಿಸುವ ಹಿರಿಮಂತ್ರ ಘೋಷಣೆ ತನ್ನ ಕೆಲಸ ಮಾಡುತ್ತಲೇ ಇದೆ. ಜನತೆಯ ಧರ್ಮದರ್ಶಿಗಳಾದ ಸಚಿವರು ಧರ್ಮದರ್ಶಿತ್ವವನ್ನು ಜನತೆಗೆ ಹಿತವಾಗುವಂತೆ ಮಾಡಬೇಕೆಂಬುದು ಎಲ್ಲರೂ ಒಪ್ಪತಕ್ಕ ವಿಚಾರ. 'ಹನಿಕೂಡಿದರೆ ಹಳ್ಳ, ತೆನೆ ಕೂಡಿದರೆ ಭತ್ತ' ಎಂಬಂತೆ ಆಡು ತಿನ್ನುವವರನ್ನು ಮಾತ್ರ ನೋಡದೆ ಆನೆ ತಿನ್ನುವವರನ್ನೂ ನೋಡಿರಿ ಎಂದು ವಿನಂತಿಸುತ್ತೇನೆ.

ಸರ್ಕಾರ ಕೈಕೊಂಡ ಯೋಜನೆ, ಕೆಲಸ ಕಾರ್ಯಗಳು ಎಷ್ಟರ ಮಟ್ಟಿಗೆ ನಡೆದಿವೆ? ಹಾಕಿದ ಬಂಡವಾಳವೆಷ್ಟು? ಲಾಭ ಬಂದಿದೆಯೇ? ಅದರಿಂದ ಜನತೆಗೆ ಉಪಯೋಗವಾಗಿದೆಯೇ, ಇಲ್ಲವೇ? ಅಸಲಿಗೆ ಖೋತಾ ಬಂದಿದೆಯೇ? ಈ ಕೆಲಸಕಾರ್ಯಗಳಲ್ಲಿ ಪ್ರಭಾವಿಗಳ ಕೈವಾಡವೆಷ್ಟಿದೆ, ಸ್ವಜನಾಭಿಮಾನ ಸ್ವಪಕ್ಷಪಾತಗಳು ಪ್ರವೇಶಿಸಿವೆಯೇ ಹೇಗೆ ಎಂಬ ಸಮೀಕ್ಷಣೆಯನ್ನು ಸಂಬಂಧಪಟ್ಟವರು ಮಾಡುತ್ತಾ ಬಂದರೆ ಅಕ್ರಮ ಅನ್ಯಾಯ ದುಂದು ಖರ್ಚುಗಳು ಬಹಳ ಮಟ್ಟಿಗೆ ನಿಲ್ಲುತ್ತದೆ. ಪ್ರಜಾಪ್ರತಿನಿಧಿಗಳಾದ ಸದಸ್ಯರು ಸರ್ಕಾರದ ಮುಂದಿಟ್ಟ ನ್ಯಾಯವಾದ ಸಾರ್ವಜನಿಕ ಕಾರ್ಯಗಳನ್ನು ನೆರವೇರಿಸಿದ್ದೇವೆಯೇ ಇಲ್ಲವೇ ಎಂಬ ಸಮೀಕ್ಷೆಯನ್ನೂ, ಸಂಬಂಧಪಟ್ಟ ಸಚಿವರು ಮಾಡಬೇಕು. ಉದಾಹರಣೆಗೆ ಹೇಳುತ್ತೇನೆ:—ಮಾಗಡಿ ರೋಡಿನಲ್ಲಿ ಆಸ್ಪತ್ರೆ ಆಗಬೇಕೆಂದು ಕಳೆದ 9 ವರ್ಷಗಳಿಂದಲೂ ಕೇಳುತ್ತಿದ್ದೇನೆ. ಆಗಿಲ್ಲ ಹಿಂದಿನ ಸರ್ಕಾರ ಅಲ್ಲಿರುವ ಅಂಟುಜಾಡ್ಯಗಳ ಆಸ್ಪತ್ರೆ ಬೇರೆ ಕಡೆಗೆ ವರ್ಗಾಯಿಸುವುದಾಗಿ ಒಪ್ಪಿಕೊಂಡಿದ್ದರು. ಆ ಕೆಲಸ ಆಗಲಿಲ್ಲ. ಟ್ರಸ್ಟ್ ಬೋರ್ಡಿನಿಂದ ನ್ಯಾಯವಾದ ಕೆಲಸಕಾರ್ಯ ನಡೆಯುತ್ತಿದೆಯೇ ಇಲ್ಲವೇ? ಹೌಸಿಂಗ್ ಬೋರ್ಡಿನಿಂದ ಕಟ್ಟಿಸಿದ ಮನೆಗಳು ಸರಿಯಾಗಿ ಹಂಚಿಕೆಯಾಗುತ್ತಿವೆಯೇ? ಅರ್ಹತೆ ಪ್ರಕಾರ ದೊರೆಯುತ್ತಿವೆಯೇ? ನಿವೇಶನಗಳು, ನಿವೇಶನಗಳಿಲ್ಲದವರಿಗೆ ದೊರೆಯುತ್ತಿವೆಯೇ? ಒಂದೊಂದು ಕುಟುಂಬ 4–5 ನಿವೇಶನಗಳನ್ನು ಹೊಂದಿದ ಬಗೆ ಹೇಗೆ? ಇಲ್ಲಿ ವಾಸವಾಗಿರದೆ ಹೊರಗಿದ್ದವರಿಗೆ ನಿವೇಶನಗಳು ಸುಲಭವಾಗಿ ದೊರೆಯುತ್ತಿರುವ ಕಾರಣ ಏನು? ಟ್ರಸ್ಟ್ ಬೋರ್ಡ್ ನಿಯಮಗಳಂತೆ ನಿವೇಶನಗಳ ಹಂಚಿಕೆ ನಡೆದಿದೆಯೇ ಹೇಗೆ? ಬೆಲೆಬಾಳುವ ಕಾರ್ನರ್ ಸೈಟುಗಳು ಇತರೇ ಸೈಟುಗಳು ಕಾನೂನನ್ನತಿಕ್ರಮಿಸಿ ಹರಾಜಿಲ್ಲದೆ ಅಧಿಕಾರ ಸ್ಥಾನದಲ್ಲಿರುವವರೇ ಹೊಂದಿದ ಬಗೆ ಹೇಗೆ? ಇವೆಲ್ಲಕ್ಕೂ ಸಂಬಂಧಪಟ್ಟವರು ಉತ್ತರಿಸಬೇಕಾಗುತ್ತದೆ. ಹಾಲಿನಕೇಂದ್ರಕ್ಕೆ ಸರ್ಕಾರ ಹಾಕಿರುವ ಕೋಟಿಗಟ್ಟಳೆ ಬಂಡವಾಳದಿಂದ ಬೆಂಗಳೂರು ನಾಗರೀಕರಿಗೆ ಇದುವರೆಗೆ ಪ್ರಯೋಜನವಾಗಿವೆಯೇ ಇತ್ಯಾದಿ ವಿಚಾರಗಳನ್ನೆಲ್ಲಾ ಪ್ರತಿನಿಧಿಗಳ ಗಮನಕ್ಕೆ ತಂದರೆ ಸಾರ್ವಜನಿಕರು ಮತ್ತು ಸರ್ಕಾರ ಉಭಯತ್ರರಿಗೂ ಸಮಾಧಾನವಾಗುವುದು. ಹೀಗೆ ಆಗಿಂದಾಗ್ಯೆ ಸಾರ್ವತ್ರಿಕ ಆಡಳಿತದಲ್ಲಿ ಆಗುಹೋಗುಗಳ ಸಮೀಕ್ಷೆ ನಡೆಯಲೆಂದು ಅಪೇಕ್ಷಿಸುತ್ತೇನೆ.

ಜಾತಿ, ಪಂಥ, ಪಕ್ಷಗಳ ಕುಚೇಷ್ಟೆ ಆಡಳಿತದಲ್ಲಿ ಸಮಯ ಸನ್ನಿವೇಶಗಳು ಬಂದಾಗ ರೇವಣಗೌಡನಿಗೆ ಪ್ರಮೋಷನ್ ಕೊಟ್ಟು ಐ. ಎ. ಎಸ್. ರೇವಣ ಸಿದ್ಧಪ್ಪನಿಗೆ ಶಿಕ್ಷೆ ಮಾಡಿದ ಉಧಾಹರಣೆ ಬೇಕಾದಷ್ಟು ಇವೆ. ನಡೆಯುತ್ತಿವೆ. ಜಾತ್ಯಾತೀತ ಮನೋಭಾವದ ಮುಖ್ಯಮಂತ್ರಿಗಳ ಒಳ್ಳೆಯತನವನ್ನು ಕೆಲವರು ದುರುಪಯೋಗ ಮಾಡಿಕೊಂಡಿದ್ದಾರೆ. ಅಂತ ಕುಣಿಯೊಳಗೆ ಚಿಂತಾಕು ಇಟ್ಟರೆ ಚಿಟ್ಟಾಳೆಯೇ ಎಂಬಂತೆ ಸ್ವಾರ್ಥಿಗಳು, ಜಾತಿ ಪಕ್ಷಗಳ ಉಪಯೋಗ ಪಡೆಯುತ್ತಿರುವುದರಿಂದ, ಮುಖ್ಯ ಮಂತ್ರಿಗಳು ಸರ್ಪ ಶಾಂತಿ ಬಿಟ್ಟು, ಕಚ್ಚ ಬೇಕಾಗಿಲ್ಲ, ಬುಸ್ ಎಂದು ಹೆದರಿಕೆ ತೋರಿಸಬೇಕು. ಜಾತ್ಯಾಭಿಮಾನದ ವ್ಯವಹಾರದ ಚೇಷ್ಟೆ ನಿಲ್ಲಿಸಲು ಪ್ರಯತ್ನಿಸಬೇಕೆಂದು ಅಪೇಕ್ಷಿಸುತ್ತೇನೆ.

ಕನ್ನಡಿಗರ ಬಯಕೆ 'ಕರ್ನಾಟಕ'. ಎಂದು ನಾಡಿಗೆ ಹೆಸರಿಡುವುದನ್ನೂ ಜ್ಞಾಪಿಸುವುದನ್ನು ಮಾತ್ರ ಎಂದಿಗೂ ಮರೆಯಲಾರೆ. ಇದು ಕನ್ನಡಮ್ಮನ ಹರಕೆ ಕನ್ನಡಮ್ಮನ ಹರಕೆ ಮಯುರೆಧಿರು

ಚಿನ್ನಾ ! ಹೋರಾಡು ಕನ್ನಡಕೆ ಕಲಿಯಾಗಿರನ್ನಾ ! ಎಂದು ರಾಷ್ಟ್ರಕವಿ ಕೆ. ವಿ. ಪುಟ್ಟಪ್ಪನವರು ಹೇಳಿದ್ದಾರೆ. ಆಡಳಿತದಲ್ಲಿ ಕನ್ನಡ ಭಾಷೆ ಹೆಚ್ಚು ಬಳಕೆಗೆ ತರಬೇಕೆಂದು ಸೂಚಿಸುತ್ತೇನೆ.

ನಾಡಿನ ಜನ ಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರ ಸ್ಥಾನಮಾನಗಳ ಬಗ್ಗೆ ಪ್ರಗತಿಯಾಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. "Women have profound sense of truth and honesty which men lack" ಎಂದು ಎಂ. ವಿ. ರಮಣರಾಯರು 1962ನೇ ಆಗಷ್ಟು ತಿಂಗಳಲ್ಲಿ "Women on the March" ಎಂಬ ಪತ್ರಿಕೆಯಲ್ಲಿ ಬರೆದಿದ್ದಾರೆ. ಇಂತಹ ಹೆಗ್ಗಳಿಕೆ ಅವರಿಂದ ದೊರೆತಿರುವಾಗ ಮಹಿಳೆಯರಿಗೆ ಸ್ಥಾನ, ಮಾನ, ಕೊಡುವ ಬಗ್ಗೆ ನಿರ್ಲಕ್ಷ್ಯವೇಕೆ ? ಮೊನ್ನೆ ನ್ಯಾಯಾಧೀಶರ ನೇಮಕವಾದಾಗ್ಯೂ ಒಬ್ಬರನ್ನು ನೇಮಿಸಿಲ್ಲ. ಪ್ರಾಯೋಗಿಕವಾಗಿಯಾದರೂ ಒಬ್ಬ ಮಹಿಳೆಯನ್ನು ನ್ಯಾಯಾಧಿಕಾರಿಯಾಗಿ ನೇಮಿಸಿದ್ದರೆ, ಮಹಿಳಾವರ್ಗದ ವಂದನೆ ಸರ್ಕಾರಕ್ಕೆ ಸಲ್ಲುತ್ತಿತ್ತು. ಮುಂದಾದರೂ ಅವಕಾಶ ಸಿಕ್ಕಾಗ, ಅವಕಾಶವಿದ್ದಾಗ ಮರೆಯಬೇಡಿ ಎಂದು ವಿನಂತಿಸುತ್ತೇನೆ.

ಕೊನೆಯದಾಗಿ ಆಡಳಿತದಲ್ಲಿ ದರ್ಪ ಎನ್ನಲಾರೆ, ಬಿಗುಮಾನ ಇರಬೇಕು. ಇದನ್ನು ಸಮಯ ಸನ್ನಿವೇಶಗಳಲ್ಲಿ ಉಪಯೋಗಿಸಬೇಕು. ಇದಕ್ಕೆ ಒಂದು ಸಣ್ಣ ಕಥೆಯನ್ನು ಹೇಳುತ್ತೇನೆ. ಸುರೇಶ್ ಎಂಬುವನು ಶೋಭಾ ಎಂಬುವಳನ್ನು ಮದುವೆಯಾಗಿದ್ದ. ಮದುವೆಯಾದ ಹೊಸದರಲ್ಲಿ ಒಂದು ದಿನ ಶೋಭಾ ರೊಟ್ಟಿ ಮಾಡಿ ಗಂಡನಿಗೆ ಊಟಕ್ಕೆ ಬಡಿಸಿದಳು. ಅವನು ತಿನ್ನಲಾರದೆ ತಿನ್ನುತ್ತಾ ಶೋಭಾ ಈ ರೊಟ್ಟಿಗಳನ್ನು ನೀನೇ ಮಾಡಿದೆಯೇನು? ಎಂದು ನಗುಮುಖದಿಂದಲೇ ಕೇಳಿದ. 'ಎಸ್', ಡಿಯರ್, ನೀವು ಎರಡು ರೊಟ್ಟಿ ಹೆಚ್ಚು ತಿನ್ನಲೆಂದು ನಾನೇ ಸ್ವತಹ ಮಾಡಿದೆ. ಈ ರೊಟ್ಟಿ ತಿಂದ ಕೂಡಲೇ ಗತಿಸಿದ ನಿಮ್ಮ ತಾಯಿಯ ಜ್ಞಾಪಕ ಬರಬೇಕು ನೋಡಿ' ಎಂದು ಹೇಳಿದಳು. ಆಗ ಸುರೇಶ್ 'ನಿಜ ನಮ್ಮ ತಾಯಿಯ ಜ್ಞಾಪಕ ಬರಬಹುದು, ಆದರೆ ನಿನಗೆ ಒಂದು ವಿಚಾರ ಹೇಳುವುದನ್ನು ಮರೆತಿದ್ದೆ. ನಮ್ಮಮ್ಮ ಮಾಡಿದ ರೊಟ್ಟಿ ತಿನ್ನಲಾರದೆ ನಮ್ಮಪ್ಪ ಆಕೆಯನ್ನು ಬಿಟ್ಟು ಬೇರೆ ಮದುವೆಯಾದ ತಿಳಿಯಿತೇ' ಎಂದ. ಆಗ ಆಕೆಗೆ ತನ್ನ ತಪ್ಪಿನ ಅರಿವಾಯಿತು. ಇಂತಹ ಬಿಗುಮಾನುತನವನ್ನು ಸಾರ್ವತ್ರಿಕ ಆಡಳಿತದಲ್ಲಿ ಆಚರಣೆಗೆ ತರಲೆಂದು ಹಾರೈಸುತ್ತೇನೆ. ಧರ್ಮೋ ರಕ್ಷತಿ, 'ರಕ್ಷಿತಃ ಎಂಬಂತೆ, ಧರ್ಮವನ್ನು ಯಾರು ರಕ್ಷಿಸುತ್ತಾರೋ ಅವರನ್ನು ಧರ್ಮವೇ ರಕ್ಷಿಸುತ್ತದೆ ಎಂದು ಹೇಳಿ ಈ ಬೇಡಿಕೆಯನ್ನು ಅನುಮೋದಿಸಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Smt. VIJAYADEVI RAGHAVENDER RAO (Chitapur).—Mr. Speaker, Sir, I support the Demands that are before the House. While doing so, I would restrict my remarks to the Administration of Justice and to the social developmental organisations.

At the outset I would like to thank the Government for having sanctioned the outright grants to the Bar Associations. It has helped the Bar Association to equip itself with periodicals, journals, books and furniture. I think this is a unique thing in the whole of India. In the whole of India, no State Government has come forward to sanction such an outright grant to the Bar Association. So, I request the Government to continue this grant.

Secondly, as all the Hon'ble Members know, Gulbarga District is very hot during summer and the climate is so ennervating that it is quite impossible for the litigant public to wait outside in the open compound of our court. There is no shelter or a building constructed for the convenience of the public. So, I request the Government to construct at least a shelter there.

Here I would like to invite the attention of the Government to the residential quarters for the judiciary staff, *i.e.*, for the Distr ct Judge and other Subordinate Judges because we are not having any residential quarters in the whole of Gulbarga Division In the budget under the

(SMT. VIJAYADEVI RAGHAVENDER RAO)

head 'normal expenditure under the Capital Outlay' about Rs. 15 lakhs have been provided and I hope a portion of it should be reserved for the residential quarters of the District Judge and Subordinate Judges.

The inordinate delay in the disposal of the work, especially in the courts, is due to the inadequacy of the staff there. I would like to invite the attention of the Government to the dearth of process servers there. It has affected the expeditious disposal of the work. There are only 21 Process Servers there whereas, for example, in Mangalore there are 141. I therefore request the Government to consider this suggestion of mine and appoint more Process Servers.

In the Civil Courts in the mofussil areas of the Gulbarga Division there are very few Typewriters; they fall too short of the normal requirements and even the existing ones are so bad that they need immediate replacement. I request the Government to supply more Typewriters to the Civil Courts.

The Functions of the Public Prosecutor and of the Government Pleader are not bifurcated in my district; They are combined into one post. As it is done in other districts of the State, it is desirable to bifurcate this post and these functions should be vested in two different persons. This would also relieve the pressure of work and also toneup the quality of the work.

As regards the social developmental organisation, I would like to speak something about the State Home for Women in Gulbarga. It is situated in a commercial centre. As you know, Sir, there is every possibility of every inmate falling a prey to the social evils and I cannot explain the plight of those inmates fully and clearly on the floor of this House. It is quite undesirable to have the State Home housed in that area. So, I request the Government to have a building of their own just in the outskirts of Gulbarga and provision for this may be included in the budget for 1966-67.

The Rotary Club of Gulbarga is running an urban pilot project with the help of the Central Social Welfare Board and it has completed two terms of three years each. It is completing its second term on 31 March 1966. So, I request the Government to continue it for the third term also.

As regard social welfare, especially the women activities, on the floor of this House we have always heard healthy as well as unhealthy criticism and we the women on this side have always boldly faced any such unkind criticism. Here I would like to mention that for the work that we do in the centre at Gulbarga which is run by the Central Social Welfare Board we are not given any pay or anything of that sort, and the quality of the work that is turned out is also not very bad. Here I would like to mention one thing. In the course of the execution of our work there may be some defects. I do not mean to say that we are perfect in everything but these defects will be rectified if they are pointed out. I am sure that we the women of India are having a very

bright future and in all our enterprises I would like one and all to co-operate with us with strength and courage.

With these few words, I once again support the Demands that are before the House, and thank the Chair for having given me this opportunity.

ಶ್ರೀ ಟಿ. ಎನ್. ಮಾದಪ್ಪಗೌಡ.—ಸ್ವಾಮಿ, ನಮ್ಮ ಮುಂದಿರತಕ್ಕ ಸಾಮಾನ್ಯ ಆಡಳಿತ ಮತ್ತು ಇತರೆ ಡಿಮ್ಯಾಂಡುಗಳ ಬಗ್ಗೆ ನಾನು ಕೆಲವು ಮಾತುಗಳನ್ನು ಹೇಳಲಿಚ್ಛಪಡುತ್ತೇನೆ. ನ್ಯಾಯ ಇಲಾಖೆ ತೆಗೆದುಕೊಂಡರೆ ಹಳೆಯ ಮೈಸೂರಿನಲ್ಲಿ ಮೂರು ಡಿಸ್ಟ್ರಿಕ್ಟುಗಳಿಗೊಂದು ಕೋರ್ಟಿತ್ತು, ಕೆಲಸ ಯಾವ ಕುಂದೂ ಇಲ್ಲದೆ ಆಗುತ್ತಿತ್ತು. ಈಗ ಜಿಲ್ಲೆಗೊಂದು ಕೋರ್ಟನ್ನು ಕೊಟ್ಟಿದ್ದಾರೆ, ಅದಕ್ಕೆ ಕೆಲಸ ಸ್ವಲ್ಪವಿದೆ. ಜೊತೆಗೆ ತಾಲ್ಲೂಕಿಗೊಂದು ಮುನ್ಸೀಫ್ ಕೋರ್ಟನ್ನು ಕೊಡಬೇಕೆಂದು ಸರಕಾರ ಯೋಚನೆ ಮಾಡುತ್ತಿದೆಯೆಂದು ಕೇಳಿದ್ದೇವೆ. ಈ ರೀತಿ ಕೊಟ್ಟರೆ ನ್ಯಾಯ ಜನರಿಗೆ ದೊರೆಯುವುದಕ್ಕೆ ಬದಲಾಗಿ ಹೆಚ್ಚು ಕಿತಾಪತಿ ಹಳ್ಳಿಗಾಡಿನಲ್ಲಿ ಆಗಾಗ್ಗೆ ಆಗುವುದಕ್ಕೆ ಅವಕಾಶವಾಗುತ್ತದೆ ಎಂದು ನನಗಾದರೂ ಅನ್ನಿಸುತ್ತದೆ.

ಹಣಕಾಸನ್ನುಳಿಸುವ ಸಲಹೆಗಳನ್ನು ಕೊಡಲಿಲ್ಲವೆಂದು ನಮ್ಮ ಅರ್ಥ ಮಂತ್ರಿಗಳು ಹೇಳಿದರು. ಈಗ ನಮ್ಮಲ್ಲಿ ಅಪೆಲೇಟ್ ಟ್ರಿಬ್ಯುನಲ್ಲುಗಳಿವೆ, ರೆವೆನ್ಯೂ ಅಪೆಲೇಟ್ ಟ್ರಿಬ್ಯೂನಲ್, ಕೋಆಪರೇಟಿವ್ ಅಪೆಲೇಟ್ ಟ್ರಿಬ್ಯೂನಲ್, ಸೇಲ್ಸ್ ಟ್ಯಾಕ್ಸ್ ಅಪೆಲೇಟ್ ಟ್ರಿಬ್ಯೂನಲ್—ಹೀಗೆ ನಾನಾ ಟ್ರಿಬ್ಯೂನಲ್‌ಗಳಿವೆ. ಇವುಗಳಲ್ಲಿ ಹತ್ತಾರು ಮಂದಿ ಜಿಲ್ಲಾ ನ್ಯಾಯಾಧೀಶರ ದರ್ಜೆ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ.

4-00 P.M.

ಇದರಿಂದ ಹಳ್ಳಿಗಾಡಿನ ಜನರಿಗೆ ಏನು ತೊಂದರೆಯಾಗುತ್ತದೆ ಎಂದರೆ ಸಂಸ್ಥಾನದಲ್ಲಿ ಎಲ್ಲಾ ಕಡೆಯಿಂದ ಟ್ರಿಬ್ಯೂನಲ್ಲಿಗೆ ಬರಬೇಕಾದರೆ ಬೆಂಗಳೂರಿಗೆ ಬರಬೇಕಾಗುತ್ತದೆ. ಮತ್ತು ಇದಕ್ಕಾಗಿ ಅವರು ಬಹಳ ಹಣ ಖರ್ಚು ಮಾಡಬೇಕಾಗುತ್ತದೆ. ಹೊಸದಾಗಿ ಜಿಲ್ಲೆಗೆ ಒಂದು ನ್ಯಾಯಾಲಯ ಮಾಡಿರುವುದರಿಂದ ಅನುಕೂಲವಾಗುತ್ತದೆ. ಟ್ರಿಬ್ಯೂನಲ್ ಕೆಲಸಕ್ಕಾಗಿ ಜಿಲ್ಲೆಗೆ ಒಂದು ನ್ಯಾಯಾಲಯ ಕೊಡುವುದು ಸೂಕ್ತ. ಒಂದು ವೇಳೆ ಅಪೀಲು ಮಾಡುವುದಾದರೆ ಹೈಕೋರ್ಟು ಇದ್ದೇ ಇರುತ್ತದೆ. ಆದುದರಿಂದ ಆದಷ್ಟು ಬೇಗ ಟ್ರಿಬ್ಯೂನಲ್ ತೆಗೆದು ಹಾಕುವ ಏರ್ಪಾಡು ಮಾಡಬೇಕು ಎಂದು ಸರಕಾರಕ್ಕೆ ಕೇಳಿಕೊಳ್ಳುತ್ತೇನೆ.

ಇನ್ನು ರೆವೆನ್ಯೂ ಇಲಾಖೆಯಲ್ಲಿಯ ಅನೇಕ ಅಧಿಕಾರಿಗಳನ್ನು ತೆಗೆದುಕೊಂಡು ಅವರನ್ನು ಬ್ಲಾಕ್ ಡೆವಲಪ್‌ಮೆಂಟ್ ಅಧಿಕಾರಿಗಳಾಗಿ ಮಾಡಿದ್ದೀರಿ. ಈಗ ಅಲ್ಲಿ ಅನೇಕ ಅಧಿಕಾರಿಗಳಿಗೆ ಕೆಲಸವಿಲ್ಲದ ಹಾಗೆ ಆಗಿದೆ. ಮೊನ್ನೆ ತಾನೆ ಅಭಿವೃದ್ಧಿ ವಿಚಾರದಲ್ಲಿ ಬಂದಂಥ ಡಿಮ್ಯಾಂಡ್ ಮೇಲೆ ಮಾತನಾಡುತ್ತಾ ಈ ಎರಡನ್ನೂ ಒಂದು ಇಲಾಖೆಯಲ್ಲಿ ಇರುವುದು ಸೂಕ್ತ ಎಂದು ಅನೇಕ ಮಾನ್ಯ ಸದಸ್ಯರು ಇಲ್ಲಿ ಸಲಹೆ ಮಾಡಿದ್ದಾರೆ. ಅಸಿಸ್ಟೆಂಟ್ ಕಮಿಷನರ್ ಹುದ್ದೆ ಏತಕ್ಕೆ ಬೇಕು? ಇದು ಒಂದು ಪೋಸ್ಟ್ ಆಫೀಸ್ ಕೆಲಸವಾಗಿದೆ. ಆಗುವ ಕೆಲಸಕ್ಕೆ ಇಲ್ಲದ ತೊಡಕು ತಂದು ಸಿಗತಕ್ಕಂಥ ನ್ಯಾಯ ವರ್ಷಗಟ್ಟಲೆ ಮುಂದೆ ಹಾಕುವುದಕ್ಕೆ ಅಸಿಸ್ಟೆಂಟ್ ಕಮಿಷನರ್ ಆಫೀಸ್ ಕಾರಣವಾಗಿದೆ. ಈ ಅಸಿಸ್ಟೆಂಟ್ ಕಮಿಷನರ್ ಆಫೀಸು ಡಿವಿಜನಲ್ ಕಮಿಷನರ್ ಆಫೀಸು ಎಷ್ಟೋ ಕೆಲಸ ಕಾರ್ಯಗಳಿಗೆ ತೊಂದರೆ ಕೊಡತಕ್ಕ ಆಫೀಸು ಆಗಿದೆ. ಖರ್ಚು ಆಗುತ್ತದೆ ಆದರೆ ಜನರಿಗೆ ನ್ಯಾಯ ಬೇಗ ಸಿಕ್ಕುವುದಿಲ್ಲ. ಈ ಎರಡೂ ಆಫೀಸು ತೆಗೆದು ಹಾಕತಕ್ಕಂಥ ಏರ್ಪಾಡು ಮಾಡುವುದಕ್ಕೆ ಯೋಚನೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಈ ವರ್ಷ ಮಳೆ ಬೆಳೆ ಇಲ್ಲದೆ ಬಹಳ ತೊಂದರೆ ಬಂದಿದೆ. ಇದಕ್ಕಾಗಿ ಸಪ್ಲಿಮೆಂಟರಿ ಡಿಮಾಂಡ್ಸ್‌ನಲ್ಲಿ 26 ಲಕ್ಷ ರೂಪಾಯಿ ಒದಗಿಸಿದ್ದೀರಿ. ಒಂದು ಒಂದೂವರೆ ಲಕ್ಷ ರೂಪಾಯಿ ಸಿಬ್ಬಂದಿಗಾಗಿ ಖರ್ಚು ಮಾಡುತ್ತೀರಿ. ಶ್ರೀಮಾನ್ ವೆಂಕಟೇಗೌಡರವರು ಮಾತನಾಡುತ್ತಾ ಒಂದು ಮಾತು ಹೇಳಿದರು. ಇದನ್ನು ಒಂದು ಏಜೆನ್ಸಿ ಮೂಲಕ ಮಾಡಿ ಕೆಲಸ ಕಾರ್ಯಗಳು ತ್ವರಿತವಾಗಿ ಆಗುವ ರೀತಿಯಲ್ಲಿ ಏರ್ಪಾಡು ಮಾಡಬೇಕು. ದೊಡ್ಡ ಮನಸ್ಸು ಮಾಡಿ ಸರಕಾರ ಹಣ ಒದಗಿಸಿದ್ದರೂ ಕೂಡ ಸಮಯಕ್ಕೆ ಸರಿಯಾಗಿ ಕೆಲಸವಾಗದೇ ಇದ್ದರೆ ಜಿಗುಪ್ಸೆ ಬರುತ್ತದೆ. ಇಂದು ಜನರಿಗೆ ಕೂಲಿ ಕೂಡ ಹುಟ್ಟುವುದಿಲ್ಲ. ಇದಲ್ಲದೆ ಪಂಚಾಯತಿಗಳಿಗೆ ಗೋಮಾಳ ಗ್ರಾಮ ಠಾಣ ಕೊಡುವುದನ್ನು ಸೇರಿಸಿ ಬಿಟ್ಟಿದ್ದೀರಿ. ಕೆಲವು ಕಡೆ ರೆವೆನ್ಯೂ ಇಲಾಖೆಯವರು ರೆವೆನ್ಯೂ ಇನ್ಸ್‌ಪೆಕ್ಟರುಗಳು ಮಾಮೂಲು ಹಾಕುತ್ತಾರೆ ಎನ್ನತಕ್ಕಂಥ ವಿಚಾರ ಇರುವಾಗ್ಗೆ ರೆವೆನ್ಯೂ ದರಖಾಸ್ತು ಇಟ್ಟುಕೊಂಡು

(ಶ್ರೀ ಟಿ. ಎನ್. ಮಾದಪ್ಪ ಗೌಡ)

ಇರುವುದರಿಂದ ಲಂಚರುಷುವತ್ತಿಗೆ ಅವಕಾಶ ಇದೆ. ಆದುದರಿಂದ ಗ್ರಾಮ ಪಂಚಾಯತಿಗಳಿಗೆ ದರ ಖಾಸ್ತು ಗ್ರಾಮದ ಗೋಮಾಳ ಗ್ರಾಮ ಠಾಣಗಳನ್ನು ವಹಿಸಿಕೊಡುವುದು ಸರಿ.

ಉಪಾಧ್ಯಕ್ಷರು.—ಇದು ಈ ಡಿಮಾಂಡಿನಲ್ಲಿ ಬರುವುದಿಲ್ಲ.

ಶ್ರೀ ಟಿ. ಎನ್. ಮಾದಪ್ಪಗೌಡ.—ಇನ್ನೊಂದು ವಿಷಯ ಸ್ವಾಮಿ. ಸೋಷಿಯಲ್ ವೆಲ್ ಫೇರ್ ಡಿಪಾರ್ಟ್ಮೆಂಟ್ ಇವರು ಕೆಲವು ಹಾಸ್ಟೆಲ್ಲುಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಹಿಂದು ಳಿದ ಜನಾಂಗದ ಹಾಸ್ಟೆಲ್ ಸೂಪರ್ವಿಷನ್ ಸಿಬ್ಬಂದಿಯೆಲ್ಲಾ ಆ ಜನಾಂಗಕ್ಕೆ ಸೇರಿದ ಜನ ಅಧಿಕಾರಿಗಳಾಗಿರಬೇಕು ಎಂದು ಒಂದು ನಿಯಮ ಇದೆ. ಇದರಿಂದ ಬಹಳ ಅನಾಹುತ ವಾಗುತ್ತಿದೆ. ಅವರು ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ. ಮಕ್ಕಳಿಗೆ ಸರಿಯಾಗಿ ತಿಂಡಿ ತೀರ್ಥ ಕೊಡುವುದಿಲ್ಲ. ಆ ಜನಾಂಗದ ಅಧಿಕಾರಿಗಳಿಗೆ ಬೇರೆ ಕೆಲಸ ಕೊಡಿ. ದೊಡ್ಡ ದೊಡ್ಡ ಕೆಲಸ ಕೊಡಿ ಬೇಡವೆನ್ನುವುದಿಲ್ಲ. ರಿಜರ್ವೇಷನ್ 18 ಪರ್ಸೆಂಟ್ ಇದ್ದುದನ್ನು 36 ಪರ್ಸೆಂಟ್ ಮಾಡಿ ನಮಗೆ ಸಂಕಟವಾಗುವುದಿಲ್ಲ. ಆದರೆ ಮಕ್ಕಳನ್ನು ತಯಾರು ಮಾಡತಕ್ಕ ಸ್ಥಳ ವಾದ ಹಾಸ್ಟೆಲ್ಲುಗಳಲ್ಲಿ ಬೇರೆಯವರನ್ನು ಹಾಕಿದರೆ ಅವರನ್ನು ಕಟ್ಟುನಿಟ್ಟಾಗಿ ಕೇಳಬಹುದು ಅವ ರಿಂದ ಸರಿಯಾಗಿ ಕೆಲಸ ತೆಗೆದುಕೊಳ್ಳಬಹುದು ಎಂದು ನನಗೆ ಅನಿಸುತ್ತದೆ.

ಶ್ರೀ ಬಿ. ರಾಚಯ್ಯ.—(ಅರಣ್ಯ ಮತ್ತು ಮೀನುಗಾರಿಕೆ ಶಾಖೆಯ ಮಂತ್ರಿಗಳು) ಅದು ಯಾವ ಊರಿನಲ್ಲಿಯ ಹಾಸ್ಟೆಲ್ಲು ?

ಶ್ರೀ ಟಿ. ಎನ್. ಮಾದಪ್ಪಗೌಡ.—ನಾಗಮಂಗಲ ಹಾಸ್ಟೆಲ್ಲಿನಲ್ಲಿ ನಡೆಯುತ್ತಿದೆ. ಈ ಹಾಸ್ಟೆಲ್ಲಿನಲ್ಲಿ ಅಲ್ಲಿಯ ಸೂಪರಿಂಟೆಂಡೆಂಟರು ಮಕ್ಕಳನ್ನು ಒಳಗೆ ಹಾಕಿ ಬಾಗಿಲಿಗೆ ಬೀಗ ಹಾಕಿ ಹೋಗುತ್ತಾರೆ. ಅವರಿಗೆ ಯಾವ ಕ್ವಾಲಿಫಿಕೇಷನ್ನೂ ಇಲ್ಲ. ಮಕ್ಕಳನ್ನು ಸರಿಯಾಗಿ ನೋಡಿ ಕೊಳ್ಳುವುದಿಲ್ಲ. ಅವರು ಬೇರೆ ಜಾತಿಯವರು ಆಗಿದ್ದರೆ ಕಟ್ಟುನಿಟ್ಟಾಗಿ ಕೇಳಬಹುದಾಗಿತ್ತು. ಇವ ರನ್ನು ಕೇಳುವ ಹಾಗೆ ಇಲ್ಲ. ಈ ಸಮಾಚಾರ ಸರಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಶ್ರೀಮಾನ್ ಮುಕ್ಕಣ್ಣಪ್ಪನವರು ಮಾತನಾಡುತ್ತಾ ಒಂದು ಅತ್ಯುತ್ತಮ ಸಲಹೆ ಕೊಟ್ಟಿ ದ್ದಾರೆ. ಉತ್ತರದಿಂದ ಬಂದಿರತಕ್ಕ ನಿಮಗೂ ಹಳೇ ಮೈಸೂರಿನ ನಮಗೂ ಹೊಂದಾಣಿಕೆಯಾಗು ವುದು ಸಾಧ್ಯವಿಲ್ಲ. ನಮಗೂ ನಿಮಗೂ ಆಹಾರದಲ್ಲಾಗಲಿ, ವ್ಯವಹಾರದಲ್ಲಾಗಲಿ, ಮಾತುಕತೆಯ ಲ್ಲಾಗಲಿ ಹೊಂದಾಣಿಕೆಯಾಗುವುದು ಸಾಧ್ಯವಿಲ್ಲ. ನೀವು ಇಲ್ಲಿಗೆ ಬಂದ ಮೇಲೆ ಪ್ರತಿನಿತ್ಯ ನಿಮ್ಮ ಕೆಲಸ ನೋಡಿ ನೋಡಿ ನಮಗೆ ನಿಮ್ಮ ಮೇಲೆ ಎಳ್ಳಷ್ಟೂ ವಿಶ್ವಾಸವಿಲ್ಲ. ನಮ್ಮಲ್ಲಿ ಹಿಂದಕ್ಕೆ ಸರ್ ಎಂ. ವಿಶ್ವೇಶ್ವರಯ್ಯರವರ ಕಾಲದಲ್ಲಿ ನಮ್ಮದು ಮಾದರಿ ಮೈಸೂರು ಆಗಿತ್ತು, ಚಿನ್ನದ ನಾಡು ಆಗಿತ್ತು. ಇಂಥ ನಾಡಿಗೆ ಇಂದು ಬಂದಿರುವ ದುರವಸ್ಥೆ ಎಷ್ಟು ಎಂದು ಹೇಳುವುದಕ್ಕಾಗುವು ದಿಲ್ಲ. ಇದಕ್ಕೆ ಅನೇಕ ನಿದರ್ಶನ ಕೊಡಬಹುದು. ಎಲ್ಲ ಕೆಲಸ ಕಾರ್ಯಗಳು ಕೋಮುವಾರ ತತ್ವದ ಮೇಲೆ ನಡೆಯುತ್ತಿವೆ. ಶ್ರೀಮಾನ್ ನಿಜಲಿಂಗಪ್ಪನವರಿಗೆ ಒಂದು ಮಾತು ಹೇಳುತ್ತೇನೆ. ಗಾದೆಯ ಮಾತಿನಲ್ಲಿ ಹೇಳುವುದಾದರೆ ಅವರು ದೇಹ ಅಪರಂಜಿ ಆದರೆ ಕಿವಿ ಹಿತ್ತಾಳೆ ಹಾಗೆ ಆಗಿ ದ್ದಾರೆ ಕಣ್ಣಲ್ಲಿ ಕಣ್ಣು ಇಟ್ಟು ದಯವಿಟ್ಟು ನೋಡಬೇಕು. ಇಂದು ಪಿ.ಡಬ್ಲ್ಯೂಡಿನಲ್ಲಿ ಒಂಭತ್ತು ಜನ ಚೀಫ್ ಎಂಜಿನಿಯರುಗಳು ಇದ್ದಾರೆ. ಇಷ್ಟು ಕೆಲಸ 3 ಜನ ಮಾಡಬಹುದು. ಈ 9 ಜನ ಏತಕ್ಕೆ ಬೇಕು? ಆರು ಜನಕ್ಕೆ ಏನೂ ಕೆಲಸವಿಲ್ಲ. ಇದಲ್ಲದೆ ಇವರೆಲ್ಲರೂ ಒಂದೇ ಜಾತಿಗೆ ಸೇರಿದವರಾಗಿ ದ್ದಾರೆ. ಈ ರೀತಿ ಕೆಲಸ ಮಾಡಿದರೆ ಇವರಲ್ಲಿ ನಂಬಿಕೆ ಹೇಗೆ ಬರುತ್ತದೆ? ನಂಬಿಕೆ ಬರುವುದಕ್ಕೆ ಸಾಧ್ಯವಿಲ್ಲ. ಬಜೆಟ್ಟಿನಿಂದ ನಮಗೆ ಗೊತ್ತಾಗುವುದೇನೆಂದರೆ 22 ಕೋಟಿ ರೂಪಾಯಿ ಯೋಜನೆ ಗಳನ್ನು ಮಾಡಿ ಅದನ್ನು ತಮ್ಮ ಪ್ರದೇಶಕ್ಕೆ ಖರ್ಚು ಮಾಡುವ ಹಾಗೆ ಮಾಡಿದ್ದಾರೆ. ದಯವಿಟ್ಟು ಅರ್ಥಮಂತ್ರಿಗಳು ಅಲ್ಲಿ ಎಷ್ಟು ಇಲ್ಲಿ ಎಷ್ಟು ಎಂಬುದನ್ನು ಹೇಳಬೇಕೆಂದು ಕೇಳುತ್ತೇನೆ. ಜವಾ ಬ್ದಾರಿ ಉತ್ತರ ಕೊಡುವಾಗ್ಗೆ ಅಂಕಿ ಅಂಶಗಳನ್ನು ತಿರುಗು ಮುರುಗು ಮಾಡಿ ಹೇಳಿದರೂ ಕೂಡ ಹಳೇ ಮೈಸೂರಿನವರು ಬೆಪ್ಪರಲ್ಲ ಎಂಬುದನ್ನು ತಿಳಿದುಕೊಳ್ಳಬೇಕು. ನಿಮ್ಮ ಕಡೆ ಕೈ ಎತ್ತುವ ವರು ಬಹಳ ಜನ ಇದ್ದಾರೆಂದು ನೀವು ಬುಲ್ಲಡೋಜರ್ ಆಗಿದ್ದೀರಿ. ನಿಮ್ಮ ನೀತಿಯನ್ನು ಸರಿಯಾಗಿ ಸೂಕ್ಷ್ಮವಾಗಿ ನೋಡಿದರೆ ನೀವು ಹೇಳತಕ್ಕ ರಾಮರಾಜ್ಯ ಸ್ಥಾಪನೆ ಮಾಡದೆ ಮಹಾತ್ಮಾ ಗಾಂಧಿಯ ವರ ಮುಖಕ್ಕೆ ಮಸಿ ಬಳೆಯುತಕ್ಕಂತ ಸಂದರ್ಭ ಬಂದಿದೆ ಎಂದು ಹೇಳಬೇಕಾಗುತ್ತದೆ. ಈ ವ್ಯತ್ಯಾಸವನ್ನು ಬೇಗನೆ ಕಡಿಮೆ ಮಾಡದೇ ಹೋದರೆ ಇದನ್ನು ತಡೆಗಟ್ಟಲು ಸಾಧ್ಯವಿಲ್ಲ. ಪಂಜಾಬಿ ನಲ್ಲಿ ಆದ ಹಾಗೆ ಏನೇನೋ ಆಗಬಾರದ್ದು ಆಗುತ್ತಾ ಇದೆ ಈ ಕಾಂಗ್ರೆಸ್ ರಾಜ್ಯದಲ್ಲಿ ನಾವು ಕೇಳ

ತಕ್ಕಂಥಾದ್ದು ನ್ಯಾಯವಾಗಿದೆ, ಆದುದರಿಂದ ಸರಕಾರದವರು ತೀವ್ರವಾಗಿ ನಮ್ಮ ಪಾಡಿಗೆ ನಾವು ಇರತಕ್ಕಂಥ ಏರ್ಪಾಡು ಮಾಡಿ ಕೊಟ್ಟು ಕನ್ನಡ ಜನ ನೆಮ್ಮದಿಯಿಂದ ಬೆಳೆಯತಕ್ಕಂಥ ಅವಕಾಶ ಕಲ್ಪಿಸಿ ಕೊಡಬೇಕು ಎಂದು ಸರಕಾರಕ್ಕೆ ಹೇಳಲು ಇಷ್ಟ ಪಡುತ್ತೇನೆ.

ಬೆಂಗಳೂರು ಯೂನಿವರ್ಸಿಟಿ ವೈಸ್ ಛಾನ್ಸಲರ್ ನೇಮಕ ಮಾಡುವುದಕ್ಕೆ ನಮ್ಮಲ್ಲಿ ಎಂಥೆಂಥಾ ಮೇಧಾವಿಗಳಿದ್ದಾರೆ. ಅಂಥವರ ಹೆಸರುಗಳ ಒಂದು ಪಟ್ಟಿ ಮಾಡಿಕೊಡುತ್ತೇನೆ. ದೊಡ್ಡ ಹುದ್ದೆಗಳಲ್ಲಿದ್ದಂಥ ಕೆ. ಪಿ. ರಾಮನಾಥನ್, ಮಾಸ್ತಿ ವೆಂಕಟೇಶ ಐಯ್ಯಂಗಾರ ಅವರಂಥ ಮೇಧಾವಿಗಳಿರುವಾಗ್ಗೆ ಎಲ್ಲಿಂದಲೋ ಜನ ತರುತ್ತಿದ್ದಾರೆ ಒಂದೇ ಕೋಮಿನವರು ಲಾಗಳಲ್ಲಿ ಹೆಚ್ಚಾಗುತ್ತಿದ್ದಾರ. ಯಾರು ಬಂದರೂ ಲಿಂಗಾಯತರನ್ನು ಬಿಟ್ಟು ಬೇರೆ ಬರುವುದಿಲ್ಲ. ಈ ಕೋಮಿನವರು ಬಹಳ ಪ್ರಬಲರಾಗಿದ್ದಾರೆ. ಈ ರೀತಿ ಒಂದೇ ಕೋಮಿನವರನ್ನು ತರುವುದಕ್ಕೆ ಪ್ರಯತ್ನ ಮಾಡುವುದು ಸೂಕ್ತವಲ್ಲ. ನಿಮಗೆ ಯೋಗ್ಯರಾದವರು ಬೇಕಾಗಿದ್ದರೆ ಒಂದು ಲಿಸ್ಟ್ ಮಾಡಿ ಕೊಡುತ್ತೇನೆ. ಹಿಂದೆ ಅವರು ಆಡಳಿತ ಹೇಗೆ ಮಾಡಿದರು ನಮಗೆ ಗೊತ್ತಿದೆ. ಅಂಥಾ ಅಧಿಕಾರಿಗಳು ಇದ್ದರು. ಈಗ ಬರತಕ್ಕ ಅಧಿಕಾರಿಗಳು ಕಿತಾಪತಿ ಮಾಡತಕ್ಕಂಥವರು ಇದ್ದಾರೆ. ಇಂಥವರನ್ನು ನೇಮಕ ಮಾಡುವುದನ್ನು ಬಿಟ್ಟು ಕೊಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾವೇರಿ ನೀರನ್ನು 1974ನೇ ಇಸವಿಯೊಳಗೆ ಎಲ್ಲಾ ಉಪಯೋಗಿಸಿಕೊಳ್ಳಬೇಕು ಅನ್ನತಕ್ಕಂಥ ಮಾತು ಬಿಸಿಲುಕುದುರೆ ಇದ್ದ ಹಾಗೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕಾಗಿ ಹೆಚ್ಚು ಹಣ ಒದಗಿಸಿದ್ದೇವೆಂದು ಹೇಳಿದರು. ಇದನ್ನು ನೋಡಿದರೆ ಇನ್ನು 100 ವರ್ಷಗಳು ಆದರೂ ಈ ಕೆಲಸವನ್ನು ಮಾಡುವುದಕ್ಕೆ ಇವರಿಗೆ ಯೋಗ್ಯತೆ ಇಲ್ಲ ಎಂದು ಕಾಣುತ್ತದೆ. ಕೃಷ್ಣ ಗೋದಾವರಿ ಯೋಜನೆಗಳನ್ನು ಯಾವಾಗ ಮುಗಿಸುತ್ತಾರೋ ಗೊತ್ತಿಲ್ಲ. ಇವರು ಈ ವಿಚಾರದಲ್ಲಿ ಯೋಗ್ಯತೆಯನ್ನು ಕಳೆದುಕೊಂಡಿದ್ದಾರೆ. ಏಕೆಂದರೆ ಇವರು ಹೇಳುವ ಮಾತಿಗೆ ಎಳ್ಳಷ್ಟು ಬೆಲೆ ಕೇಂದ್ರ ಸರ್ಕಾರದಲ್ಲಿ ಇಲ್ಲ. ಇದು ಇವರು ಕೊಡುವ ಉತ್ತರಗಳಲ್ಲಿಯೇ ಮನವರಿಕೆಯಾಗುತ್ತದೆ. ಇವರು ಒಂದು ದಿಟ್ಟವಾದ ಹೋರಾಟದ ನೀತಿಯನ್ನು ಬೆಳೆಸಿಕೊಳ್ಳದಿದ್ದರೆ, ಮೈಸೂರಿಗೆ ಯಾವ ಒಂದು ಒಳ್ಳೆಯ ಹೆಸರು ಇತ್ತೋ ಅದು ಹೋಗುತ್ತದೆ. ಈ ಒಂದು ಕೆಟ್ಟ ಹೆಸರು ನಾವು ಜೀವ ಸಹಿತ ಇರುವಾಗಲೇ ಒದಗಬಾರದು. ಸರ್ಕಾರದವರು ಮೊದಲೇ ಎಚ್ಚೆತ್ತು ನಮ್ಮ ಮಾತನ್ನು ಕೇಳಿ ಸರಿಯಾದ ರೀತಿಯಲ್ಲಿ ಯೋಜನೆಗಳನ್ನು ಮುಂದುವರೆಸಬೇಕೆಂದು ಹೇಳಿ, ಈ ಎರಡು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಚಂಪಾಬಾಯಿ ಬೋಗಲೆ (ಸಂಕೇಶ್ವರ್).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರುವ ಬೇಡಿಕೆಗಳಾದ ಅಡ್ಮಿನಿಸ್ಟ್ರೇಷನ್ ಮತ್ತು ಸೋಷಿಯಲ್ ವೆಲ್‌ಫೇರ್ ಇವುಗಳನ್ನು ಅನುಮೋದಿಸುತ್ತಾ ನಾನು ಒಂದೆರಡು ಸಲಹೆಗಳನ್ನು ಸರ್ಕಾರಕ್ಕೆ ಹೇಳಲಿಕ್ಕೆ ಇಚ್ಛಿಸುತ್ತೇನೆ. ನಮ್ಮ ಸರ್ಕಾರದವರು ವೆಲ್‌ಫೇರ್ ಇಲಾಖೆಯಿಂದ ಸಾಕಷ್ಟು ಸೌಕರ್ಯವನ್ನು ಕೊಡುತ್ತಾ ಬಂದಿದ್ದಾರೆ. ಮತ್ತು ಕೆಲವು ಒಳ್ಳೆಯ ಕಾನೂನುಗಳನ್ನು ಮಾಡುತ್ತಾ ಬಂದಿದ್ದಾರೆ. ಆದರೆ ಈಗ ಬಂದಿರುವ ಕಷ್ಟವೆಂದರೆ, ಕೆಳಗಿನ ಅಧಿಕಾರಿಗಳು ಕಾನೂನುಗಳನ್ನು ಸರಿಯಾಗಿ ಕಾರ್ಯಗತ ಮಾಡುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಇವತ್ತು ಸರ್ಕಾರದ ಅಧಿಕಾರಿಗಳ ಮೇಲೆ ಏನು ಟೀಕೆ ಟಿಪ್ಪಣಿಗಳು ಬಂದಿವೆಯೋ ಅವುಗಳನ್ನು ಕಾರ್ಯರೂಪಕ್ಕೆ ತರದಿದ್ದರೆ, ಅವರ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳದಿದ್ದರೆ ಸರ್ಕಾರದ ಹಣ ಹಾಳಾಗುತ್ತದೆ ಎಂದು ವಿಷಾದದಿಂದ ಹೇಳಲಿಕ್ಕೆ ಹತ್ತಿದ್ದೇನೆ. ಈ ಸಮಯದಲ್ಲಿ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಷೆಡ್ಯೂಲ್ ಕ್ಯಾಸ್ಟ್ ಜನರಿಗೆ 100 ಕ್ಕೆ 18 ಪರ್‌ಸೆಂಟ್ ಜಾಗವನ್ನು ಸರ್ವಿಸ್‌ನಲ್ಲಿ ಕೊಡಬೇಕು ಎಂದು ಸರ್ಕಾರದ ಕಾಯಿದೆ ಇದೆ. ಆದರೆ ಸರ್ವಿಸ್‌ಗೆ ಜನರನ್ನು ತುಂಬುವ ಹೊತ್ತಿಗೆ ಈ ಷೆಡ್ಯೂಲ್ಡ್ ಕ್ಯಾಸ್ಟ್ ಜನರನ್ನು ಟೆಂಪರರಿ ವೇಕೆನ್ಸಿಗೆ ತುಂಬುತ್ತಾರೆ. ಒಂದು ವರ್ಷದ ನಂತರ ಈ ವೇಕೆನ್ಸಿಗಳು ಮುಗಿದುಹೋದರೆ ಇವರಿಗೆ ತೊಂದರೆಯಾಗುತ್ತದೆ, ಮತ್ತು ಇವರ ಸಂಖ್ಯೆ ಕಮ್ಮಿಯಾಗುತ್ತದೆ. ಈ ರೀತಿ ಮಲತಾಯಿ ಧೋರಣೆ ತಾಳುತ್ತಾ ಬಂದಿದ್ದಾರೆ. ಸರ್ಕಾರದವರು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಗೈರಾಣ್ ಭೂಮಿಯನ್ನು ಕೊಡಬೇಕೆಂದು ಕಾಯಿದೆ ಮಾಡಿದ್ದಾರೆ. ಈ ಕಾಯಿದೆ 1957ನೇ ಇಸವಿಯಿಂದಲೂ ಇದೆ. ಅಧಿಕಾರಿಗಳು ಈ ಕಾಯಿದೆಯನ್ನು ಸರಿಯಾಗಿ ಪಾಲಿಸಿಕೊಂಡು ಬಾರದೆ ಸರ್ಕಾರಕ್ಕೆ ಕೆಟ್ಟ ಹೆಸರನ್ನು ತರುತ್ತಾರೆ. ಇದರಿಂದ ಈ ಜನಗಳಿಗೆ ಕಲ್ಯಾಣ ಮಾಡುವುದಕ್ಕಾಗುವುದಿಲ್ಲ. ಅಧಿಕಾರಿಗಳು ಸರ್ಕಾರಿ ಕೆಲಸ ದೇವರ ಕೆಲಸ ಎಂದು ತಿಳಿದುಕೊಂಡು ಮಾಡುತ್ತಿಲ್ಲ. ಪೂಜಾರಿಗಳು ಮಾಡುವುದು ಅಪವ್ಯಯದ ಕೆಲಸವೆಂದು ಹೇಳಬೇಕಾಗಿದೆ. ಸರ್ಕಾರದವರು ಜನಗಳಿಗೆ ಒಳ್ಳೆಯದಾಗಲೀ ಎಂದು ಕಾನೂನುಗಳನ್ನು ಮಾಡುತ್ತಾರೆ, ಆದರೆ ಅಧಿಕಾರಿಗಳು ಈ ಕಾನೂನುಗಳ

(ಶ್ರೀಮತಿ ಚಂಪಾಬಾಯಿ ಬೋಗಲೆ)

ವಿಚಾರದಲ್ಲಿ ಮಲತಾಯಿ ಧೋರಣೆ ವಹಿಸುತ್ತಾರೆ. ಸ್ವಾತಂತ್ರ್ಯ ಬಂದು 18 ವರ್ಷಗಳಾದರೂ ಕೂಡ ನಮ್ಮ ಜನರಿಗೆ ಸರಿಯಾದ ಅನುಕೂಲಗಳು ಸಿಗುತ್ತಿಲ್ಲ. ಜಾತೀಯತೆ ಬಂದು ಬಿಡುತ್ತದೆ. ಅಸ್ಪೃಶ್ಯತೆ ಹೋಗಲಾಡಿಸಲು ಒಂದು ಕಾನೂನನ್ನು ಸರ್ಕಾರದವರು ಮಾಡಿದ್ದರೂ ಕೂಡ ಅದನ್ನು ಸರಿಯಾಗಿ ಪಾಲಿಸಿಕೊಂಡು ಬರಲು ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಒಬ್ಬರ ಮೇಲೂ ಕೂಡ ಸರಿಯಾದ ಕ್ರಮವನ್ನು ಸರ್ಕಾರದವರು ತೆಗೆದುಕೊಂಡಿಲ್ಲ. ಅವರಲ್ಲಿ ಒಬ್ಬರನ್ನೂ ಸಸ್‌ಪೆಂಡ್ ಮಾಡಿಲ್ಲ. ಈ ರೀತಿಯ ಒಂದು ಉಧಾಸೀನ ಭಾವನೆ ಅಧಿಕಾರಿಗಳಲ್ಲಿ ಇದ್ದರೆ ಮುಂದೆಯೂ ಕೂಡ ಜನರ ಕಲ್ಯಾಣವಾಗುವುದಿಲ್ಲ ಎಂದು ನನಗನ್ನಿಸುತ್ತದೆ. ನಮ್ಮ ಸರ್ಕಾರದವರು ಬಹಳ ಒಳ್ಳೆಯದನ್ನು ಮಾಡುತ್ತಾರೆ, ಒಳ್ಳೆಯ ಮಾತುಗಳನ್ನು ಹೇಳುತ್ತಾರೆ, ಆದರೆ ಅವು ಒಂದೂ ಕಾರ್ಯಗತವಾಗುವುದಿಲ್ಲ. ಆದ್ದರಿಂದ ಇನ್ನು ಮುಂದೆಯಾದರೂ ಸರ್ಕಾರ ಮಾಡಿರುವ ಯೋಜನೆಗಳು ಮತ್ತು ಕಾಯಿದೆಗಳು ಏನಿವೆ ಅವುಗಳ ಕಡೆ ಅಧಿಕಾರಿಗಳು ಲಕ್ಷ್ಯಕೊಟ್ಟು ನಮ್ಮ ಜನರ ಕಲ್ಯಾಣ ಮಾಡಲಿಕ್ಕೆ ಹತ್ತುತ್ತಾರೆ ಎಂದು ದೇವರಲ್ಲಿ ಅರಿಕೆ ಕೊಟ್ಟು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಸರ್ಕಾರದವರು ಆಡಳಿತ ವಿಷಯದಲ್ಲಿ ಹೆಚ್ಚು ನಿಗ ಕೊಡಬೇಕು. ಸರ್ಕಾರದವರು ಒಂದು ಕಾಯಿದೆ ಮಾಡಿ, ಅದಕ್ಕಾಗಿ ಕೋಟಿಗಟ್ಟಲೇ ಹಣವನ್ನು ಪ್ರತಿವರ್ಷವೂ ಖರ್ಚುಮಾಡಿದರೂ ಸಹ, ಒಂದು ಕಾಯಿದೆಯೂ ಸಹ ಸರಿಯಾಗಿ ಕಾರ್ಯಗತವಾಗುತ್ತಿಲ್ಲ. ಸರ್ಕಾರದವರು ಹಣವನ್ನು ಎಲ್ಲೆಲ್ಲಿ ಯಾವ ರೀತಿ ಖರ್ಚುಮಾಡಿದ್ದಾರೆ ಎಂಬ ವಿವರವನ್ನು ನನಗೆ ಹೇಳಬೇಕಾಗಿದೆ. ಹರಿಜನರು ಮುಂದುವರೆಯಲಿಕ್ಕೆ ಸಹಕಾರ ಸಂಘಗಳನ್ನು ಮಾಡಿ ಎಂದು ದಿವಂಗತ ಜವಹರ್‌ಲಾಲ್ ನೆಹರು ಅವರು ಹೇಳಿದರು. ಅದೇ ರೀತಿ ಅವರು ಸಂಘಗಳನ್ನು ಮಾಡಿಕೊಂಡರು. ಇನ್ನೂ ಕೆಲವು ಸಂಘಗಳು ರಿಜಿಸ್ಟರ್ ಆಗುತ್ತಿವೆ. ಆದರೆ ಈ ಸಂಘಗಳಿಂದ 'ಏನೂ ಉಪಯೋಗವಾಗುತ್ತಿಲ್ಲ. ಇವರಿಗೆ ನೀರಾವರಿಯ ಅನುಕೂಲಗಳು ಇಲ್ಲ. ಕುಡಿಯುವ ನೀರಿನ ಬಾವಿಗಳು ತಕ್ಕಷ್ಟು ಇಲ್ಲ. ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ಸಹ ಹರಿಜನರಿಗೆ ಸಾಕಷ್ಟು ಬಾವಿಗಳಾಗಿಲ್ಲ. ಒಂದೊಂದು ಕಡೆ 4೧ ಕುಟುಂಬಗಳು ಇದ್ದರೂ ಸಹ ಅಲ್ಲಿ ಕುಡಿಯುವ ನೀರಿನ ಬಾವಿ ಇಲ್ಲ. ಒಂದು ವೇಳೆ ಸರ್ಕಾರದವರು ಬಾವಿ ತೆಗೆಯಲು ಅನುಮತಿ ಕೊಟ್ಟರೂ ಸಹ ಅವು ಕಾರ್ಯಗತವಾಗಿಲ್ಲ. ತಾಲ್ಲೋಕ್ ಬೋರ್ಡಿನವರು ಸಾರ್ವಜನಿಕರಿಗಾಗಿ ಬಾವಿಗಳನ್ನು ತೆಗೆಯುತ್ತಾರೆಂದು ಹೇಳುತ್ತಾರೆ. ಅಲ್ಪಸಂಖ್ಯಾತರು ಮತ್ತು ಅಸ್ಪೃಶ್ಯರು ಇರುವ ಕಡೆ ಇವರು ಬಾವಿಗಳನ್ನು ತೆಗೆಯುವುದಿಲ್ಲ. ಹರಿಜನರು ಸಾರ್ವಜನಿಕ ಬಾವಿಗಳಿಗೆ ಹೋಗಿ ನೀರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡುವುದಿಲ್ಲ. ಈ ರೀತಿ ಹರಿಜನರ ಪರಿಸ್ಥಿತಿಯಾಗಿದೆ. ಆದ್ದರಿಂದ ಇವರಿಗೆ ಸರಿಯಾದ ವ್ಯವಸ್ಥೆ ಮಾಡಬೇಕು. ಹರಿಜನರ ಮಕ್ಕಳಿಗೆ ಸರಿಯಾಗಿ ವಿದ್ಯಾಭ್ಯಾಸ ಸಿಗಬೇಕು, ಅವರ ಉದ್ಧಾರವಾಗಬೇಕು ಎಂದು ಹೇಳುತ್ತೀರಿ, ಅದನ್ನು ಸರಿಯಾದ ರೀತಿಯಲ್ಲಿ ಯೋಗ್ಯ ರೀತಿಯಲ್ಲಿ ಮಾಡುತ್ತಿಲ್ಲ. ಹರಿಜನರ ಅಭಿವೃದ್ಧಿ ಸಲುವಾಗಿ ಒಂದು ಸ್ಪೆಷಲ್ ಇಲಾಖೆಯನ್ನು ಸೃಷ್ಟಿ ಮಾಡಿ ಅದಕ್ಕೆ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಿಸಬೇಕು. ಹರಿಜನರ ಉದ್ಧಾರಕ್ಕಾಗಿ ಈ ಇಲಾಖೆ ದುಡಿಯುವಂತೆ ಮಾಡಬೇಕು. ಈ ವಿಷಯವನ್ನು ನಾವು ಪದೇ ಪದೇ ಹೇಳುವುದು ಸರಿಯಲ್ಲ. ಮತ್ತೊಂದು ಸಾರಿ ಈ ವಿಷಯ ಬಾರದ ಹಾಗೆ ಸರ್ಕಾರದವರು ಈ ಕೆಲಸವನ್ನು ಮಾಡಬೇಕು. ಈ ರೀತಿ ಮಾಡಿದರೆ ಹರಿಜನರ ಉದ್ಧಾರವಾಗುತ್ತದೆಯೆಂದು ನಂಬಿದ್ದೇವೆ. ಅದಕ್ಕಾಗಿ ತಾವು ತಕ್ಕ ವ್ಯವಸ್ಥೆ ಮಾಡಬೇಕು. ಹರಿಜನರಿಗೆ ಸರ್ಕಾರದ ಹುದ್ದೆಗಳನ್ನು ತುಂಬುವ ಹೊತ್ತಿನಲ್ಲಿ ಅವರಿಗೆ ಸರಿಯಾದ ಸವಲತ್ತುಗಳನ್ನು ಕೊಡಬೇಕು. ಈ ಸರ್ಕಾರಿ ಅಧಿಕಾರಿಗಳು ಮಾಡುವ ಅನ್ಯಾಯದಿಂದ ಹರಿಜನರಿಗೆ ಬಹಳ ಕಷ್ಟವಾಗುತ್ತದೆ. ಅವರ ಕೊಲೆಯಾಗುತ್ತದೆ. ನಮ್ಮ ಸರ್ಕಾರದವರು ವಿದ್ಯಾಭ್ಯಾಸಕ್ಕೋಸ್ಕರ ಇಟ್ಟಿರುವ ಹಣ ಅವರಿಗೆ ಸರಿಯಾಗಿ ಕೊಟ್ಟಿಲ್ಲ. ನನ್ನ ಜಿಲ್ಲೆಯಲ್ಲಿ 3 ಲಕ್ಷ ಹರಿಜನರು ಇದ್ದಾರೆ. 25 ಜನ ವಿದ್ಯಾರ್ಥಿಗಳು ಇರುವ ಕಡೆ ಒಂದು ಹಾಸ್ಟಲ್ ತೆರೆದಿದ್ದಾರೆ. ಅದರಲ್ಲಿ ಕುಡಿಯುವ ನೀರಿನ ಬಾವಿ ಇಲ್ಲ ಅದಕ್ಕಾಗಿ ಸರ್ಕಾರದವರು ಬಾವಿ ತೆಗೆಸುವ ವಿಚಾರದಲ್ಲಿ ಗಮನ ಕೊಡಬೇಕು ಎಂದು ಹೇಳುತ್ತೇನೆ. ೮8 ಲಕ್ಷ ರೂಪಾಯಿಗಳನ್ನು ಹರಿಜನರಿಗೋಸ್ಕರ ಖರ್ಚು ಮಾಡಿ, ವಿದ್ಯಾರ್ಥಿಗಳಿಗೆ ಕುಡಿಯುವುದಕ್ಕೆ ನೀರಿನ ಬಾವಿ ಇಲ್ಲವೆಂದರೆ ಬಹಳ ಕೆಟ್ಟದು ಎನಿಸುತ್ತದೆ. ಅಲ್ಲಿಗುವ ಹುಡುಗರು ನೀರಿಗಾಗಿ ಆಸ್ಪತ್ರೆ ಹತ್ತಿರ, ಪೋಲೀಸ್ ಆಫೀಸಿನ ಹತ್ತಿರ ಹೋಗುತ್ತಾರೆ. ಈ ರೀತಿ ವಿದ್ಯಾರ್ಥಿಗಳು ನೀರಿಗಾಗಿ ಹೋಗುವುದನ್ನು ತಪ್ಪಿಸಬೇಕು. ಅವರ ಕುಂದುಕೊರತೆಗಳನ್ನು ನಿವಾರಿಸಬೇಕು, ಅವರಿಗೂ ಒಂದು ಸಹಾನುಭೂತಿ ಇರಬೇಕು. ಅವರ ಮರ್ಯಾದೆಗೆ ಒಂದು ಮಿತಿ ಇರಬೇಕು. ಮುಂಜಾನೆ ಎದ್ದು ನೀರಿಗಾಗಿ ಬೇರೆ ಕಡೆ ಹೋಗಿ ಭಿಕ್ಷೆ ಬೇಡುವ ಪರಿಸ್ಥಿತಿ ಬಂದಿದೆ, ಇದನ್ನು ತಪ್ಪಿಸಬೇಕು. ದಯವಿಟ್ಟು ನೀರಿನ ವ್ಯವಸ್ಥೆ ಮತ್ತು ಎಲೆಕ್ಟ್ರಿಕ್ ವ್ಯವಸ್ಥೆಯನ್ನು

ಮಾಡಿಸಿಕೊಡಿರಿ ಎಂದು ಕೇಳಿಕೊಳ್ಳುತ್ತೇನೆ. ಮತ್ತು ಈಗ ಕೋಆಪರೇಟೀವ್ ಪ್ರಾಜೆಕ್ಟ್ ಸ್ಕೀಂ ಮಾಡಿದ್ದಾರೆ. ಬೆಳಗಾಂ ಜಿಲ್ಲೆಯಲ್ಲಿ ನಾಲ್ಕು ಕಾಲೋನಿಗಳು ಇವೆ. ಈ ನಾಲ್ಕು ಕಾಲೋನಿಗಳನ್ನು ಹರಿಜನರಿಗೆ ಕೊಡಬೇಕೆಂದು ಇದೆ: ಈಗಾಗಲೇ ಒಂದು ಕಾಲೋನಿ ಯಶಸ್ವಿಯಾಗಿದೆ. ಎರಡು ಕಾಲೋನಿ ಸುರಾಪುರ ಮತ್ತು ತರಿಕಟ್ಟಿ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಪ್ರಪೋಸಲ್ ಮಾಡಿ ಕಳುಹಿಸಿದರೆ, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಿಂದ ಫೈಲು ಹಿಂದಕ್ಕೆ ಕಳುಹಿಸಿದ್ದಾರೆ. ಡೈರೆಕ್ಟರು ಹೆಚ್ಚು ನಿಗಾ ಕೊಡಲಿಲ್ಲ ಎಂದು ನನಗೆ ಅನಿಸುತ್ತದೆ. ಇವರಿಗಾಗಿ ಹೂಗರಿ ತಾಲ್ಲೂಕಿನಲ್ಲಿ ಬಿಲ್ಡಿಂಗ್ಸ್ ಮಾಡಿದ್ದಾರೆ. 10-20 ಸಾವಿರ ರೂಪಾಯಿ ಖರ್ಚು ಮಾಡಿದ್ದಾರೆ. ಸಬ್‌ಸಿಡಿ ಇಲ್ಲ. ಈ ಜನರ ಕಲ್ಯಾಣ ಸಲುವಾಗಿ ನೋಡಬೇಕಾಗುತ್ತದೆ. ಅಲ್ಲಿ ಕುಡಿಯುವ ನೀರಿನ ಸೌಕರ್ಯ ಇಲ್ಲ. ಅದರ ಸಲುವಾಗಿ ಪ್ರಾಜೆಕ್ಟ್ ಸ್ಕೀಮ್ ಒಳಗೆ ಈ ಸ್ಕೀಮನ್ನು ಸೇರಿಸಿ ಯಶಸ್ವಿ ಮಾಡಬೇಕು ಎಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ನಮ್ಮ ಸರ್ಕಾರದವರು ಪ್ರತಿಯೊಂದು ಜಿಲ್ಲೆಗಳಲ್ಲಿಯೂ ಔದ್ಯೋಗಿಕ ಕೇಂದ್ರ ತೆಗೆಯಬೇಕು. ಹರಿಜನರ ಉದ್ಧಾರ ಮಾಡಿರಿ. ಹರಿಜನರ ಎಜುಕೇಷನ್‌ಗೆ ಮಹತ್ವ ಕೊಡಿರಿ. ನನಗೆ ಕಾಲೇಜು ಮಕ್ಕಳು ವೈರ್ ಕೊಟ್ಟಿದ್ದಾರೆ. ಪತ್ರ ಬರೆದಿದ್ದಾರೆ, ಇನ್ನೂ ಸ್ಕಾಲರ್‌ಷಿಪ್ ಬಂದಿಲ್ಲ ಎಂದು. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಿಂದ ಹಣ ಇನ್ನೂ ಹೋಗಿಲ್ಲ. ಅದು ಕೆಡಕೆನಿಸುತ್ತದೆ. ಡೈರೆಕ್ಟರ್ ಆಫೀಸಿಗೆ ಹೋಗಬೇಕಾದರೆ 5 ಅಂತಸ್ತು ಹತ್ತಿ ಹೋಗಬೇಕು ಎರಡು ಸಲ ಪ್ರಯತ್ನ ಮಾಡಿದರೆ ನನಗೆ ಹೋಗಲಿಕ್ಕೆ ಸಾಧ್ಯ ಆಗಲಿಲ್ಲ. ಸ್ಕಾಲರ್‌ಷಿಪ್ ಅವರಿಗೆ ಹೋಗಲಿಲ್ಲ, ನಮ್ಮ ಜಿಲ್ಲೆಯೊಳಗೆ 100 ಮಕ್ಕಳು ಕಾಲೇಜಿನಲ್ಲಿ ಕಲಿಯುತ್ತಾ ಇರಬಹುದು. 100 ಮಕ್ಕಳಿಗೆ ಸ್ಕಾಲರ್‌ಷಿಪ್ ಕೊಡುವುದಕ್ಕೆ ಅಷ್ಟು ತಡವಾದರೆ ಹೇಗೆ? ಕಾಗದ ಪತ್ರ ಬರೆದರೂ ಅರ್ಜಿಗಳು ಬಂದರೂ ಮಾರ್ಚಿ ಆಖೈರು ತನಕ ಪರೀಕ್ಷೆಗೆ ಕೂಡುವ ತನಕ ಸ್ಕಾಲರ್‌ಷಿಪ್ ಕೊಡದೇ ಇದ್ದರೆ ಅವರಿಗೆ ಫೀ ಕೊಟ್ಟು ಪರೀಕ್ಷೆಗೆ ಕೂಡುವ ಯೋಗ್ಯತೆ ಇದೆಯೇ? ಅದನ್ನು ವಿಚಾರಿಸಿ ಸರಿಪಡಿಸಬೇಕು ಎಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಮತ್ತೊಂದು ವಿಷಯ ಏನೆಂದರೆ ಹೌಸಿಂಗ್ ಸ್ಕೀಂ ಸಲುವಾಗಿ ಮೂರುವರೆ ಕೋಟಿ ರೂಪಾಯಿ ಕೊಟ್ಟಿದ್ದೀರಿ ಸಂತೋಷ. ಆದರೆ ಬಹಳ ಎಂದರೆ ಒಂದು ಕೋಟಿ ರೂಪಾಯಿ ಖರ್ಚು ಆಗಬಹುದು ಉಳಿದ ಎರಡೂವರೆ ಕೋಟಿ ರೂಪಾಯಿ ಲ್ಯಾಪ್ಸ್ ಆಗುತ್ತದೆ ಎಂದು ನನಗೆ ಗೊತ್ತಿದೆ. ಆದ್ದರಿಂದ ದಯವಿಟ್ಟು ಈಗ ಕೊಟ್ಟಿರುವ ಹಣವನ್ನು 19 ಡಿಸ್ಟ್ರಿಕ್ಟ್‌ಗಳಿಗೆ ಸರಿಯಾಗಿ ಹಂಚಿ ನಿಮ್ಮ ಯೋಜನೆಯನ್ನು ಕಾರ್ಯಗತ ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಈಗಾಗಲೇ ನಮ್ಮ ಹಾಸ್ಟೆಲ್ ಕಟ್ಟಡ ಮುಗಿದಿದೆ, ಎಲೆಕ್ಟ್ರಿಕ್ ಲೈಟು, ನೀರಿನ ಟ್ಯಾಂಕನ್ನು ಮತ್ತು ಕಾಂಪೌಂಡ್ ಕಟ್ಟುವ ಸಲುವಾಗಿ ಈಗಾಗಲೇ ಸರ್ಕಾರಕ್ಕೆ ಅರ್ಜಿ ಹಾಕಿಕೊಂಡಿದ್ದೇವೆ. ಇದಕ್ಕೆ ಬೇಕಾದ ಪೂರ್ತಿ ಸಹಾಯ ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಔದ್ಯೋಗಿಕ ಕೇಂದ್ರಕ್ಕೆ ಹೆಚ್ಚಿನ ಮಹತ್ವ ಕೊಡಬೇಕು. ಕೋ-ಆಪರೇಟೀವ್ ಸಂಸ್ಥೆಗಳಲ್ಲಿ ಹೆಚ್ಚು ಕಡಿಮೆ ಆಗಿದೆ ಎಂದು ಕೇಳಿದ್ದೇನೆ. ಅಂಥ ಸಂಸ್ಥೆಗಳನ್ನು ಆಡಿಟ್ ಮಾಡಿಸಿ ಹರಿಜನರಾಗಲಿ ಬೇರೆ ಯಾರಾದರೂ ಆಗಲಿ ಹಣ ಹೆಚ್ಚು ಕಡಿಮೆಯಾಗಿದ್ದರೆ, ಅದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಈಗಾಗಲೇ ನಾನು ಈ ವಿಚಾರ ಆಂಟಿಕರಪ್‌ಷನ್‌ಗೆ ಬರೆದಿದ್ದೇನೆ. ಆಂಟಿಕರಪ್‌ಷನ್ ರಿಪೋರ್ಟು ಹೋಂ ಮಿನಿಸ್ಟರ್‌ಗೆ ಬಂದಿದೆ. ಕೋ-ಆಪರೇಟೀವ್ ಡಿಪಾರ್ಟ್‌ಮೆಂಟ್‌ನವರು ಅಂತಹವರ ಮೇಲೆ ಆಕ್ಷನ್ ತೆಗೆದುಕೊಂಡು, 14 ಸಾವಿರ ಲುಕ್ಸಾನು ಆದುದನ್ನು ಸರಿಪಡಿಸಬೇಕೆಂದು ಹೇಳಿ ನನಗೆ ಭಾಷಣ ಮಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಡಿ. ಮುನಿಚಿನ್ನಪ್ಪ (ಬೆಂಗಳೂರು ಸೌತ್).—ಸ್ವಾಮಿ, ಅಧ್ಯಕ್ಷರೇ, ಷೆಡ್ಯೂಲ್ಡ್ ಕ್ಯಾಸ್ಟ್ ಜನದ ವಿಚಾರವಾಗಿ ಮಾನ್ಯ ಸಭೆಯಲ್ಲಿ ನಮ್ಮ ಸ್ನೇಹಿತರು ಕೆಲವು ಅಭಿಪ್ರಾಯ ಕೊಟ್ಟಿದ್ದಾರೆ. ಅದರ ವಿಚಾರದಲ್ಲಿ ನನ್ನ ಅಭಿಪ್ರಾಯ ಮುಖ್ಯವಾಗಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮೈಸೂರು ದೇಶದಲ್ಲ ಷೆಡ್ಯೂಲ್ಡ್ ಕ್ಯಾಸ್ಟ್‌ನಲ್ಲಿ ಮೈನಾರಿಟಿ ಕಮ್ಯೂನಿಟೀಸ್ ಇದ್ದಾರೆ. ಕೊರಮ, ಕೊರಚ, ಬೋವಿ ಈ ದೇಶದಲ್ಲಿ ಕಷ್ಟಪಡತಕ್ಕ ಜನ. ಕಷ್ಟಪಡತಕ್ಕ ಜನರಿಗೆ ಈ ಸಲ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಮೂರುವರೆ ಕೋಟಿ ರೂಪಾಯಿಗಳನ್ನು ಷೆಡ್ಯೂಲ್ಡ್ ಕ್ಯಾಸ್ಟ್ ಕೋ-ಆಪರೇಟೀವ್ ಹೌಸಿಂಗ್ ಸೊಸೈಟಿಗೆ ಕೊಟ್ಟಿದ್ದಾರೆ. ಇದು ಒಳ್ಳೆಯ ಸಂತೋಷದ ವಿಚಾರ. ಆದರೆ ಇದುವರೆಗೂ ಈ ಜನರಿಗೆ ಒಂದು ಮನೆಯೂ ಸಹ ದೊರೆತಿಲ್ಲ. ಇವರು ನಮ್ಮ ದೇಶದಲ್ಲಿ ಮುಖ್ಯವಾಗಿ ದೊಡ್ಡ ಅಣೆಕಟ್ಟುಗಳು ಕಟ್ಟುವ ಜಾಗದಲ್ಲಿ ಕೆಲಸ ಮಾಡತಕ್ಕ ಜನ. ಅರ್ಧ ಮೈಲು, ಒಂದು ಮೈಲು ಸುರಂಗ ಹೊಡೆಯುತ್ತಾರೆ. ಅಂತಹ ಕಡೆ ಪ್ರಾಣದ ಮೇಲೆ ಹಂಗು ತೊರೆದು ಕಷ್ಟಪಡತಕ್ಕ ಜನ ಇವರು. ಇಂತಹ ಜನಕ್ಕೆ ಯಾವೊಂದು ತರಹ ಸೌಲಭ್ಯ ದೊರೆಯುತ್ತಾ ಇಲ್ಲ ಎಂದು ನನ್ನ ಅಭಿಪ್ರಾಯ. ಇನ್ನು ಮುಂದಾದರೂ ದಯವಿಟ್ಟು ಸದಸ್ಯರು ಈ ಬಡ ಜನತೆಯ ಮೇಲೆ ಕರುಣೆ

(ಶ್ರೀ ಡಿ. ಮುನಿಚಿನ್ನಪ್ಪ)

ಇಟ್ಟು ಈ ಜನಾಂಗಕ್ಕೆ ಸಹಾಯ ಮಾಡಬೇಕು ಎಂದು ನಾನು ವಿನಂತಿಸುತ್ತೇನೆ ಮತ್ತು ಅವರ ಜನಸಂಖ್ಯೆಗನುಗುಣವಾಗಿ ಇವರಿಗೆ ಸಹಾಯ ಮಾಡಬೇಕು ಎಂದು ಬಹಳ ವಿನಯದಿಂದ ಪ್ರಾರ್ಥಿಸುತ್ತೇನೆ. ಮೊನ್ನೆ ಮಾನ್ಯ ಸಭೆಯಲ್ಲಿ ಕೆಲವು ಜನ ಸ್ನೇಹಿತರು ಮಾತನಾಡಿದರು. ಶ್ರೀ ದುಗ್ಗಪ್ಪನವರು ಮಾತನಾಡಿದಾಗ ನಾನು ಇದ್ದೆ. ಷೆಡ್ಯೂಲ್ಡ್ ಕ್ಯಾಸ್ಟ್ನಿಂದ ಬೋವಿಗಳನ್ನೂ ಕೊರಮರನ್ನೂ ಕೊರಚರನ್ನೂ ಲಂಬಾಣಿಗಳನ್ನೂ ತೆಗೆದುಹಾಕಬೇಕು, ಆದಿದ್ರಾವಿಡ, ಆದಿಕರ್ಣಾಟಕ, ಆದಿಜಾಂಬುವ ಈ ಮೂರು ಜನ ಮಾತ್ರ ಷೆಡ್ಯೂಲ್ಡ್ ಕ್ಯಾಸ್ಟ್‌ನಲ್ಲಿ ಇರಬೇಕೆಂದು ವಾದ ಮಾಡಿದರು. ಮೈಸೂರು ದೇಶದಲ್ಲಿ ಡಿಪ್ರೆಸ್ಡ್ ಕ್ಲಾಸ್‌ನಲ್ಲಿ ಯಾರು ಯಾರು ಇದ್ದಾರೆ ಎಂದು ಇತ್ಯರ್ಥ ಮಾಡಲು ಸುಪ್ರೀಂಕೋರ್ಟಿನವರೆಗೆ ನಾನು ಹೋಗಿದ್ದೇನೆ. ಆ ಸಮಾಚಾರ ನಾನು ತಿಳಿದುಕೊಂಡಿದ್ದೇನೆ. ಆಗ 1921ರಲ್ಲಿ ಮೈಸೂರಿನ ಮಹಾರಾಜರ ಗೌರ್ನಮೆಂಟ್ ಇದ್ದಾಗ ಮೈಸೂರು ಸ್ಟೇಟ್‌ನಲ್ಲಿ ಡಿಪ್ರೆಸ್ಡ್ ಕ್ಲಾಸ್‌ನಲ್ಲಿ ಆದಿದ್ರಾವಿಡ, ಆದಿಕರ್ನಾಟಕ, ಆದಿಜಾಂಬುವ, ಕೊರಮ, ಕೊರಚ, ಒಡ್ಡ, ಬೋವಿ ಇವರು ಇರಬೇಕೆಂದು ಮಾಡಿದ್ದಾರೆ.

4-30 P.M.

ಸ್ವಾಮಿ, ಅಧ್ಯಕ್ಷರೇ, ನಾನು ಹಿಂದುಳಿದ ಪಂಗಡಗಳಿಗೆ ಸೇರಿದ ಕೆಲವು ವಿಷಯಗಳ ಬಗ್ಗೆ ನಾಲ್ಕು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಇವತ್ತು ದೇಶದಲ್ಲಿ ಈ ಕೊರಚ, ಕೊರಮ ಮುಂತಾದ ಹಿಂದುಳಿದ ಜನಾಂಗಗಳವರು ಬಹಳ ಕಷ್ಟ ಸ್ಥಿತಿಯಲ್ಲಿದ್ದಾರೆ. ಅವರು ಬಹಳ ಬಡ ಜನರು. ಬಹಳ ಕಷ್ಟದಿಂದ ಜೀವನ ಮಾಡತಕ್ಕವರು. ಇಂದು ನಮ್ಮ ದೇಶದಲ್ಲಿ ಆಗುವಂತಹ ದೊಡ್ಡ ದೊಡ್ಡ ಕಾಮಗಾರಿಗಳಿಗೆ ಅವರ ಸಹಾಯ, ಅವರ ಸಹಕಾರ ಬೇಕು. ಅದಲ್ಲದೆ ನಮ್ಮ ಈ ವಿಧಾನಸೌಧವನ್ನು ಕಟ್ಟುವುದಕ್ಕೂ ಅವರ ಸೇವೆ ಇತ್ತು. ಇವತ್ತು ಈ ಅನ್‌ಟಚೇಬಿಲಿಟಿ (untouchability) ಹೋಗುವುದಕ್ಕೆ ಸರ್ಕಾರದವರು ಏನು ಮಾಡಿದ್ದಾರೆ ? ಬೊಂಬಾಯಿ, ಆಂಧ್ರ ಪ್ರದೇಶ, ಮದ್ರಾಸ್, ಮಧ್ಯ ಪ್ರದೇಶ ಅಥವಾ ಡೆಲ್ಲಿ ಮೊದಲಾದ ಕಡೆಗಳಲ್ಲಿ ಈ ಹಿಂದುಳಿದ ಜನಾಂಗದವರು ಬಹಳ ಸಂಖ್ಯೆಯಲ್ಲಿ ಇದ್ದಾರೆ. ಅಂತಹ ಜನಗಳಿಗೆ ಸರ್ಕಾರ ಅನುಕೂಲಗಳನ್ನು ಕಲ್ಪಿಸುವುದು ಸರ್ಕಾರದ ಆದ್ಯ ಕರ್ತವ್ಯವೆಂದು ನಾನು ಹೇಳಲಿಚ್ಛಿಸುತ್ತೇನೆ. ಬೇರೆ ಕಡೆಗಳಲ್ಲಿ ಈ ಷೆಡ್ಯೂಲ್ಡ್ ಕಾಸ್ಟಿನಲ್ಲಿ ಇಲ್ಲದ ಪಂಗಡಗಳಾದ ಮಡಿವಾಳ ಹಾಗೂ ಇನ್ನಿತರ ಜಾತಿಗಳು ಸೇರಿಕೊಂಡಿವೆ. ಆದರೆ ಮಾನ್ಯ ಮಿತ್ರರಾದಂತಹ ಶ್ರೀ ದುಗ್ಗಪ್ಪನವರು ಹೇಳುತ್ತಾರೆ, ಈ ಅನ್‌ಟಚೇಬಿಲಿಟಿ ಮಾತ್ರ ಇರಬೇಕು, ಉಳಿದವರನ್ನು ಲಿಸ್ಟಿನಿಂದ ತೆಗೆದುಹಾಕಬೇಕೆಂದು. ಆದರೆ ಹಿಂದೆ ಮಹಾರಾಜರ ಸರ್ಕಾರ ಇದ್ದಾಗ ಲಂಬಾಣಿ, ಕೊರಮ, ಕೊರಚ, ಆದಿದ್ರಾವಿಡ, ಒಡ್ಡ, ಹೀಗೆ ಎಲ್ಲಾ ಜಾತಿಗಳೂ ಸೇರಿದ್ದುವು. ಈಗ ಅದನ್ನು ತೆಗೆದುಹಾಕಿ ಎಂದು ಹೇಳಿದರೆ ಏನು ನ್ಯಾಯ ಸ್ವಾಮಿ ? ಇಂಥ ಜನಗಳಿಗೆ ಸರ್ಕಾರ ಅನುಕೂಲ ಮಾಡಿಕೊಡಬೇಕು.

[MR. SPEAKER in the Chair]

ಈಗ ನಮ್ಮ ಮೈಸೂರು ದೇಶದಲ್ಲಿರುವ ಅಂಕಿಅಂಶಗಳನ್ನು ತಮ್ಮ ಮುಂದೆ ಇಡಲು ಬಯಸುತ್ತೇನೆ. ನಮ್ಮ ಬೋವಿಗಳು 8 ಲಕ್ಷ, ಬಣಜರು 6 ಲಕ್ಷ ಕೊರಚ ಕೊರಮರು 8 ಲಕ್ಷ, ಹರಿಜನ ಮಿನಿಸ್ಟರ್ಸ್ 3 ಜನ ಇದ್ದಾರೆ. ಎಂ.ಪಿ.ಗಳು 4, ಎಂ.ಎಲ್.ಎ. 24, ಎಂ.ಎಲ್.ಸಿ. 3, ಸ್ಟೇಟ್ಯುಟರಿ ಬೋರ್ಡಿನಲ್ಲಿ 4 ಜನ ಇದ್ದಾರೆ. ಪಬ್ಲಿಕ್ ಸರ್ವಿಸ್ ಕಮಿಷನಿನಲ್ಲಿ ಒಬ್ಬರಿದ್ದಾರೆ. ಹೈಕೋರ್ಟು ಜಡ್ಜ್ ಒಬ್ಬರು. ಮತ್ತು ಬಣಜರಲ್ಲಿ ಮಿನಿಸ್ಟರ್ಸ್ ಇಲ್ಲ. ಕೊರಮ ಕೊರಚರಲ್ಲಿ ಒಬ್ಬರು ಎಂ.ಎಲ್.ಎ. ಮಾತ್ರ ಇದ್ದಾರೆ.

ಇನ್ನು ಅಧಿಕಾರಿಗಳ ಪೈಕಿ ಅಂಕಿ ಅಂಶಗಳನ್ನು ಕೊಡುತ್ತೇನೆ ಸ್ವಾಮಿ. ಕ್ಲಾಸ್ ಒಂದು ಆಫೀಸರ್ಸ್—31, ಕ್ಲಾಸ್ ಎರಡು —200, ಕ್ಲಾಸ್ ಮೂರು—10,000 ಹರಿಜನ ಹಾಸ್ಟೆಲ್ಸ್-119, ಎಯಿಡೆಡ್ ಹಾಸ್ಟೆಲ್ಸ್ 63, ಹಾಸ್ಟೆಲ್ ಬಿಲ್ಡಿಂಗ್ಸ್—89, ಅಗ್ರಿಕಲ್‌ಚರಲ್ ಕಾಲೋನಿ—110. ನಮ್ಮ ಬೋವಿಗಳ ಏಡೆಡ್ ಹಾಸ್ಟೆಲ್ಸ್—8 ಹಾಸ್ಟೆಲ್ ಬಿಲ್ಡಿಂಗ್ಸ್ ಒಂದೂ ಇಲ್ಲ. ಮತ್ತು ಅಗ್ರಿಕಲ್ಚರಲ್ ಕಾಲೋನಿಗಳು—2. ಬಣಜಾರ ಹಾಸ್ಟೆಲ್ಸ್—8, ಅಗ್ರಿಕಲ್ಚರಲ್ ಕಾಲೋನಿ—3. ಕೊರಮ ಕೊರಚ ಹಾಗೂ ಇನ್ನಿತರ ಜಾತಿಗಳದ್ದು—4.

ಇಷ್ಟು ಕಷ್ಟಪಡುವಂತಹ ಜನಗಳಿಗೆ ನಾವು ಸಹಾಯ ಕೊಡದೆ, ಅವರನ್ನು ಆ ಲಿಸ್ಟಿನಿಂದ ತೆಗೆದುಹಾಕಬೇಕೆಂದು ಹೇಳಿದರೆ ಏನು ನ್ಯಾಯ ಸ್ವಾಮಿ ? ಮೊನ್ನೆಯ ದಿವಸ ನಡೆದಂತಹ ಒಂದು

ಕಾನ್‌ಫೆರೆನ್ಸ್‌ನಲ್ಲಿ ನಮ್ಮ ಮಂತ್ರಿಗಳಾದ ರಾಚಯ್ಯನವರು ಇರದಿದ್ದರೆ ನನ್ನ ಮೇಲೆ ದೊಡ್ಡ ಗಲಾಟೆಯನ್ನೇ ಮಾಡುತ್ತಿದ್ದರು. ನಮ್ಮ ಜಾತಿಯ ಬಗ್ಗೆ ನಾನು ಸುಪ್ರೀಂ ಕೋರ್ಟ್ ತೀರ್ಮಾನ ಕೂಡ ಮಾಡಿಕೊಂಡು ಬಂದಿದ್ದೇನೆ. ಇದರ ವಿಷಯದಲ್ಲಿ ನಮ್ಮ ಜನ ಒಂದು ಚಳವಳಿಯನ್ನೂ ಮಾಡುವುದಕ್ಕೆ ಸಿದ್ಧವಾಗಿದ್ದಾರೆ. ದಯವಿಟ್ಟು ಇನ್ನು ಮುಂದಾದರೂ ಇಂತಹ ಅನ್ಯಾಯಗಳು ನಮ್ಮ ಜನಕ್ಕೆ ಆಗದಂತೆ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ವಿನಯದಿಂದ ಪ್ರಾರ್ಥಿಸುತ್ತೇನೆ. ಉದಾಹರಣೆಗೆ ಈಗ ಪಿ. ಎಸ್. ಪಿ.ನಲ್ಲಿ ನಮ್ಮ ಕ್ಯಾಂಡಿಡೇಟನ್ನು ಸೆಲೆಕ್ಟ್ ಮಾಡಿಲ್ಲ. ಸಾವಿರಾರು ಜನರಲ್ಲಿ ಯಾರಿಗಾದರೂ ಒಬ್ಬರಿಗೆ ಕೂಡ ಸಿಕ್ಕುವುದಿಲ್ಲ. ಇದರಿಂದಾಗಿ ನಮ್ಮ ಜನರಿಗೆ ಬಹಳ ಅನ್ಯಾಯವಾಗುತ್ತಿದೆ, - ಅದಕ್ಕೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಂಡು ಇದಕ್ಕೆಲ್ಲಾ ಸಹಾಯ ಮಾಡಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—Before I call upon anybody else, there is a small maladjustment that has taken place. The notice indicating the list of business for tomorrow has already been issued indicating the time of the Assembly as one O'clock as usual. A little earlier the idea was expressed that we may meet in the morning and later again revised to say that one hour may be given for reply by Chief Minister, and the Debate on the Demands will be over today. When we meet tomorrow, we may meet tomorrow one hour earlier, that is, instead of one, we may meet at 12 NOON and for one hour we may have Questions and next one hour for the reply by the Chief Minister and the rest of the work to be resumed normally as already indicated. But the notice having been already issued, some members are likely to be embarrassed and may have a legitimate grievance. I would therefore say, that our sittings may be one hour later tomorrow in the evening instead of sitting one hour earlier, *i.e.* we begin at the usual time namely one O'clock, and sit till 7 p. m. I suppose the House agrees to that. If there is any Hon'ble Member who is under the impression that we meet at 12 noon tomorrow, it is not correct. We will assemble at 1. p. m. and we continue till 7 P.M.

Sri G. V. GOWDA.—We wanted one hour more for discussion, Sir.

Mr. SPEAKER.—This is not the place for these adjustments. It is the duty of the Whips to arrange this. What is the use of suggesting unilaterally ?

Sri G. V. GOWDA.—It was agreed to sit in the morning and have discussion for one hour.

Mr. SPEAKER.—I said one hour for reply by the Chief Minister. But I have no objection if the House want to sit in the Morning and finish this demand independently. Any way, the matter will have to be settled by the Whips and possibly in consultation with Government. I will now call upon Sri Anna Rao Ganamukhi to speak. Meantime, the matter may be settled and communicated to me.

† **Sri ANNA RAO GANAMUKHI** (Afzalpur).—Mr. Speaker Sir, I should like to offer a few observations regarding the irrigation problems of our State. Previously we have had discussion about the sharing of Krishna waters and stressed on the Government the desirability of obtaining our due share from the Government of India. Not

(SRI ANNA RAO GANAMUKHI)

only that, in 1962 we had applied to the Central Government under the Water Disputes Act, to refer the Krishna and Godavari Water Dispute to a tribunal for adjudication. In the meanwhile, as you are aware, the Krishna Godavari Commission was appointed and Mr. N. D. Gulhatti submitted his report in 1963. By virtue of this report, he has made certain recommendatians, and the Minister in the Ministry of Irrigation and Power in the Centre made a statement in Parliament. After that, we have now to study and see whether the position has changed as regards the sharing of waters.

We know, as a result of the statement made by the Hon'ble Minister that we got only 600 TMC Ft. of water from the Krishna waters while Andhra got 800 TMC Ft. and Maharashtra got 400 TMC Ft. According to the Minister's statement in Parliament, after allotment of 1800 TMC Ft. of water, 300 TMC Ft. of water was left for future distribution to the States concerned, *i.e.*, for Andhra, Mysore and Maharashtra. Now the Chief Minister of our Government is under the impression that even after the distribution of these 1800 TMC Ft. about seven to eight hundred TMC Ft. of water is left in the Krishna river. We do not take even this statement as correct because the Gulhatti Commission was positive and they have said that only 300 TMC Ft. of water will be left after distribution of 1800 TMC Ft. of water. Sir, in the Gulhatti Commission report, it was stated that in order to compensate, if any loss is caused to the participating States in the Krishna River water, two link canals should be dug from the Godavari river and two canals should be joined to Krishna River. Those two canals are Godavari-Polaram-Vijayavada canal at a cost of Rs. 40 crores, which will transfer 211 TMC Ft. of water from Godavari to Krishna and another link canal near Singareddi to Pulachimpalli, costing another 40 crores of rupees, transferring 96 TMC Ft. of water from Godavari to Krishna. So, about 300 TMC Ft. of water had to be transferred from Godavari to Kirshna basin so that the scope of Nagarjunasagar Dam and the storage of the whole project may be reviewed in the light of the two deviations. The Gulhatti Commission suggested one very important matter. They said that immediate steps should be taken to prepare an integrated plan after a preliminary survey and also prepare a preliminary project report in about six months. Now we are in 1966. The Gulhatti Commission Report was submitted to the Government of India in 1963. About 2½ years have elapsed since then. No report has been submitted so far, as far as the public of this State are aware of. We do not know whether the Government have submitted any such report to the Central Government by any Commission or Committee appointed by the Central Government. The other day also I suggested that after obtaining the preliminary project report, a final decision should be taken in regard to the scope of the Nagarjunasagar project.

Now, Sir, in the light of the deviations from the Godavari, the scope of Nagarjunasagar project should be reviewed. They have also stated—not only Nagarjunasagar project, but also the scope of Srisailam Project and also Nagarjunsagar Hydro-electric project—all these three projects and their scope should be reviewed after a preliminary project report within six months. We see that even after $2\frac{1}{2}$ years no such action seems to have been taken by the Centre. Our State Government which often shed crocodile tears for the irrigational interests of our State do not seem to have taken any real interest in pressing on the Centre to get their due share. Therefore, we are driven to the conclusion that the State Government have become complacent and they are not pursuing the matter to obtain our due share from the Krishna waters. We know that out of 2100 TMC Ft. water only 300 TMCFt. is left. Even out of the 600 TMCFt. which our Government got only 100 TMCft is left for future use and the other water is either committed or earmarked for works on hand. Therefore we see that the irrigational interests of our State have not got supreme importance at the hands of this Government. We know that the Nagarjunasagar Dam is 404 feet high and it has got a reservoir which is the biggest in the world having no other reservoir comparable to it. The command area of it is 32 lakh acres. We have no grudge whatsoever against Andhra. They are concentrating upon this project so that the water that falls to the share of Mysore may be utilised at Nagarjunasagar and at the same time they are not diverting a single drop of water from Godavari for which no decision seems to have been taken. On the other hand from the Press statements it has become evident that the M.P. Government and the Andhra Government are taking objection to this and they say that it is not feasible to take water from Godavari. The Andhra Government are sending about Rs. 10 crores every year. This is the statement made on the floor of the House by the Chief Minister of Andhra. They are spending this amount irrespective of whether their treasury is empty or not because they are borrowing money from the Centre. They are doing everything to spend money on the Nagarjunasagar project and the Srisailam project even though technical sanction has not been given to it. If the second stage of Nagarjunasagar project is taken, then the water which falls to our share will be committed and they will contest our share in future. When mattershave come to such a stage, it is not our duty to press the Central Government at least to constitute a Board and expedite the enquiry as to whether any water is available and to stop the linking of the canals and also to see that water is diverted from Godavari to Krishna. If there is any delay in the setting up of this Board I am afraid our irrigational interests will be affected for ever and our State will stand to lose for ever. That is why I say that our State Government have done much in this direction. On the other hand, they are spending money on many non-plan projects. The Finance Minister has said that 370 crores are needed for exploiting the irrigational potential of our State. He has also stated that the Government have spent Rs. 96 crores and about

(SRI ANNA RAO GANAMUKHI)

Rs. 274 crores have to be spent. It is also stated that in the 4th plan they want to spend Rs. 86 crores. When they say that Rs. 86 crores will be spent in the 4th plan, they have provided only Rs. 567 lakhs in the budget. At this rate Rs. 86 crores will be spent in about 17 years. They say one thing and do another. I do not know how Rs. 86 crores will be made available in the course of the 4th plan period. If our finances face crisis after crisis like this and if our non-plan expenditure goes up like this and if our spending spree continues like this, I do not think we can complete the existing schemes, let alone taking up future schemes. I do not know whether the Government are earnest and whether they are living in a fool's paradise or trying to keep the people in a fool's paradise. At any rate I think that the interests of our State are let down and they are not pursuing anything whatsoever. The Gulhati Commission recommended the setting up of Water Board for co-ordination in the projects of the concerned States. We do not know what has happened to this recommendation. We do not hear anything about the River Boards. This report was published in 1963. Even now not a word has been said about it. On the other hand, they say that it is not feasible to have such a Board. I think that the Irrigation Ministry at the Centre is opposed to the interests of our State or our State Government are not pursuing the matter with the Centre and they have become very weak so far as this water dispute is concerned. So it is very necessary that we should here and now press the demands of our state on the Centre. Let them appoint an arbitrator and let this water dispute be settled between the States or let the Central Government at least give their final verdict upon all the outstanding disputes. Instead of doing that, they are simply spending time and allowing the Andhra State to execute Nagarajunasagar project and the Srisailam project to the fullest extent possible and then commit the water so that in future even if we want to take any legal action against them and assert our right in any court of law we may be helpless in the matter. That is the position to which we would be reduced in future and in this way we would lose all our rights.

Even as far as the Upper Krishna Project is concerned, we are not earnest about it because even if our share is only 110 TMC Ft. excluding all the other projects and if that is made available to the State, then this project ought to have been taken in right earnest.

5-00 P.M.

Every year Rs. 10 crores are spent on the Nagarjunasagar Project by the Andhra Government whereas our Government is providing only Rs. 20 lakhs for the Upper Krishna Project. At this rate we cannot construct it till eternity. If we and the Government think that there is still 700 to 800 T.M.C.Ft. of water available in the river, we will be living in a fool's paradise. If we go by the Gulhatti Commission's Report, there is no water left at all except 300 T. M. C. Ft. and if we want to utilise

this water, the provision which has been made is very meagre and it is no use making such provisions at all. I do not know whether it is made just to put dust in the eyes of the people.

There are many outstanding problems between Andhra and Mysore. Even before deciding any dispute, our Government is supplying electricity and even water from the Tungabhadra. They leave these problems as they are. This attitude, I think, is not for the good of our State. The Andhra Government wants that the Rajalabanda headworks should be transferred to them because the command area is much more in Andhra area than in our State. We do not know whether they have agreed to keep the headworks in Mysore State or not. There was also the problem about the division of liabilities between our State and the Andhra State in respect of the Tungabhadra Left Bank Canal. We wanted that the expenditure should be shared on a fair basis but Andhra Government wanted that the expenditure should be based on the quantity of water supplied to them excluding the transmission losses. We are very reasonable. If we are to take the water through their boundary, nnecessarily we will have to spend more for the canals, etc. This roblem is not solved so far and I think that they are raising these isputes at every stage.

Again, as far as the Tungabhadra Project is concerned, the original project was designed at 85 per cent dependability. Now, the dependability has been reduced to 75 per cent. At this reduced percentage we can have more waters and thereby we can bring more area under irrigation. When the question of constructing our Upper Krishna Project was raised, our Central Minister for Irrigation was saying that there is no water available as far as that project is concerned. Is it right on the part of a Central Minister to say when the dependability has been reduced from 85 per cent to 75 per cent that water is not available ? Why not the Upper Tungabhadra Project be taken up now ? Another thing is that we are hardpressed all round and our rights are curtailed and we are suffering consequently.

As far back as one year they have shifted the dam site from Narayanapura to Sidapur. What grounds and what reasons led the Government to shift the site, we do not know. Our engineers, the Central Water and Power Commission engineers and the Planning Commission-all gave the clearance and after that the foundation was laid. We have also incurred an expenditure of Rs. 25 lakhs on building and we have laid roads. In this context I do not know how they can act on the advice of the Central Minister and shift the dam site. The Chief Minister should take the House and the people into confidence and tell them what reasons led to shift the dam site. We also hear that the contractor who had tendered for this work has claimed a compensation of Rs. 15 lakhs. Perhaps Government may agree to that as they have done in the case of Sharavathi. Instead of constructing projects we are squandering money in this way. I do not think this is the correct approach for the Government to take and if they had only retained the original site and

(SRI ANNA RAO GANAMUKHI)

went on constructing we could have saved much. Instead of that, they have gone on changing the site and after changing the site they have not done anything so far. It is one year since they have changed the site. At Siddhapur they have not taken any steps. At this rate I do not know whether we are going. Anyhow they are postponing the matter.

† ಶ್ರೀಮತಿ ಸುಶೀಲಾಬಾಯಿ ಹೀರಾಚಂದ್‌ಷಾ (ಬಾಗೇವಾಡಿ).—ಮಾನ್ಯ ಅಧ್ಯಕ್ಷರೇ, ಈ ಸಭೆಯಮುಂದಿರುವ ಬೇಡಿಕೆಗಳನ್ನು ನಾನು ಅನುಮೋದಿಸುತ್ತಾ ಒಂದೆರೆಡು ವಿಷಯಗಳನ್ನು ಹೇಳಬಯಸುತ್ತೇನೆ. ಈ ವರ್ಷ ಮೇಜರ್ ಇರಿಗೇಷನ್ ಪ್ರಾಜೆಕ್ಟಿಗೆ 5 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಇದರಪೈಕಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟಿಗೆ 20 ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ. ಆ ಹಣ ಸಾಕಾಗುವುದಿಲ್ಲ. ಮಾನ್ಯ ಹಣಕಾಸಿನ ಮಂತ್ರಿಗಳಿಗೆ, ಗೊತ್ತಿದೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟಿಗೆ 100 ರಿಂದ 300 ಕೋಟಿ ರೂಪಾಯಿಗಳಮೇಲೆ ಬೇಕಾಗುತ್ತದೆ. 20 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಅದು ಇನ್ನು 200-300 ವರ್ಷಗಳಾದರೂ ಆಗುವುದಿಲ್ಲ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಯೋಜನೆಗೆ ಸ್ವಲ್ಪ ಹಣವನ್ನು ಕೊಟ್ಟಿದ್ದರು. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಈ ಯೋಜನೆಗೆ ಮುಖ್ಯ ಮಂತ್ರಿಗಳು ಹೆಚ್ಚು ಹಣವನ್ನು ಕೊಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಮಾನ್ಯ ಮುಖ್ಯ ಮಂತ್ರಿಗಳು ಕೂಡ ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟಿಗೆ ಹೆಚ್ಚು ಹಣವನ್ನು ಒದಗಿಸುತ್ತೇವೆಂದು ಭರವಸೆಯನ್ನು ಕೊಟ್ಟಿದ್ದರು. ಸೆಂಟ್ರಲ್ ಮಿನಿಸ್ಟರಾದ ಶ್ರೀ ರಾವ್‌ರವರು ಬಂದು ಈ ಸ್ಥಳವನ್ನು ನೋಡಿ ಇಲ್ಲಿ ನ್ಯಾಚುರಲ್ ದೇವರ ದೇಣಗಿ ಇದೆ. ಇಲ್ಲಿ ಡ್ಯಾಮ್ ಆಗಲಿಕ್ಕೆ ಬಹಳ ಅನುಕೂಲತೆ ಇದೆ, ಎಂದು ಸೆಂಟ್ರಲ್‌ಗೆ ರಿಪೋರ್ಟ್ ಮಾಡಿದ ಮೇಲೆ ಫೌಂಡೇಷನ್ ಸ್ಟೋನ್ ದೆಶೆಯಿಂದ ದಿವಂಗತ ಶ್ರೀ ಲಾಲಬಹಾದ್ದೂರ ಶಾಸ್ತ್ರಿಯವರು ಬಂದರು. ದಿವಂಗತ ಲಾಲಬಹಾದ್ದೂರ್ ಶಾಸ್ತ್ರಿಗಳು ತಮ್ಮ ಅಮೃತಹಸ್ತದಿಂದ ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟಿಗೆ ಫೌಂಡೇಷನ್ ಸ್ಟೋನ್ ಹಾಕಿದ್ದರು. ಆಗ ನಮ್ಮ ತಾಲ್ಲೂಕಿನಲ್ಲಿ ಹತ್ತಾರು ಸಾವಿರ ಜನರು ಸೇರಿದ್ದರು. ಆ ಸಂದರ್ಭದಲ್ಲಿ ಶ್ರೀ ಲಾಲಬಹಾದ್ದೂರ ಶಾಸ್ತ್ರಿಗಳು ಈ ಅಪ್ಪರ್‌ಕೃಷ್ಣಾ ಪ್ರಾಜೆಕ್ಟ್ ಜಾಗ್ರತೆಯಾಗಿ ಆಗಬೇಕು, ಈ ಜಿಲ್ಲೆಯಲ್ಲಿ ಮಳೆ ಬಹಳ ಕಡಿಮೆ ಎಂದು ಕೇಳಿದ್ದೇನೆ ಎಂದು ಹೇಳಿದ್ದರು. ಆ ಸಮಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಶ್ರೀ ವೀರೇಂದ್ರ ಪಾಟೀಲರು ಈ ಪ್ರಾಜೆಕ್ಟನ್ನು ಜಾಗ್ರತೆ ಮಾಡುತ್ತೇವೆಂದು ಭರವಸೆಯನ್ನ ಕೊಟ್ಟಿದ್ದರು. ನಮ್ಮ ಭಾಗದಲ್ಲಿ ಮಳೆ ಹೆಚ್ಚು ಆಗುವುದಿಲ್ಲ. ಕೃಷ್ಣಾ ಮೇಲ್‌ದಂಡೆಯ ಯೋಜನೆಯನ್ನು ಅವಲಂಬಿಸಿದ್ದೇವೆ. ಆ ಕಾರಣ ಈ ಯೋಜನೆಯನ್ನು ತೀವ್ರ ಮುಗಿಸುತ್ತಾರೆಂದು ನಂಬಿದ್ದೆವು. ಆದರೆ ಇದಕ್ಕಾಗಿ ಸುಮಾರು 20 ಲಕ್ಷದಷ್ಟು ಹಣ ಒದಗಿಸಿರುವುದನ್ನು ನೋಡಿದರೆ ಇದರಿಂದ ಅಪ್ಪರು ಕೃಷ್ಣಾ ಯೋಜನೆ ಆದೀತೋ ಇಲ್ಲವೋ ಎನ್ನುವ ಅನುಮಾನ ನನಗೆ ಬರುತ್ತಿದೆ. ಒಂದು ದೊಡ್ಡ ಪ್ರಾಜೆಕ್ಟಿಗಾಗಿ ಬರೀ ಇಪ್ಪತ್ತು ಲಕ್ಷದಷ್ಟು ಹಣ ಕೊಟ್ಟರೆ ಅದರಿಂದೇನು ಉಪಯೋಗವಾಗುತ್ತದೆ ? ನಮ್ಮ ತಾಲ್ಲೂಕಿಗೆ ಬೇರೆ ಯಾವ ಯೋಜನೆ ಮಾಡಿ ನೀರು ಬರುವಂತೆ ಮಾಡಿಲ್ಲ. ನಮ್ಮಲ್ಲಿ ಆಹಾರ ದವಸ ಹೆಚ್ಚು ಬೆಳೆಯಬೇಕಾದರೆ ಅಪ್ಪರು ಕೃಷ್ಣಾ ಯೋಜನೆಯನ್ನು ಮಾಡಿಕೊಡಲೇ ಬೇಕು. ಇದಕ್ಕಾಗಿ ದಿವಂಗತರಾದ ನಮ್ಮ ಮಾನ್ಯ ಪ್ರಧಾನಮಂತ್ರಿಗಳಾಗಿದ್ದ ಶ್ರೀ ಲಾಲ್‌ಬಹದ್ದೂರು ಶಾಸ್ತ್ರಿಯವರು ಇಲ್ಲಿಗೆ ಬಂದು ಫೌಂಡೇಷನ್ನು ಕಲ್ಲು ಹಾಕಿ ಬಂದರು ಮತ್ತು ಆಗ ಅಲ್ಲಿಗೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳೂ ಬಂದಿದ್ದರು ಮತ್ತು ನಮಗೆ ಈ ಪ್ರಾಜೆಕ್ಟನ್ನು ಮಾಡಿಸಿಕೊಡುತ್ತೇವೆ ಎಂದು ಭರವಸೆಯನ್ನೂ ಕೊಟ್ಟಿದ್ದರು. ಆದರೆ ಬಜೆಟ್ಟಿನಲ್ಲಿ ಇದಕ್ಕಾಗಿ 20 ಲಕ್ಷ ಮಾತ್ರ ಇಟ್ಟಿರುವುದರಿಂದ ಇದನ್ನು ತೆಗೆದುಕೊಳ್ಳುತ್ತಾರೋ ಇಲ್ಲವೋ ತಿಳಿಯಲೊಲ್ಲದು. ಮೊದಲಿಗೆ ಇಲ್ಲಿ ಮೂರು ಸಾವಿರ ಮಂದಿ ಕೆಲಸ ಮಾಡುತ್ತಿದ್ದರು. ಈಗ ಅಷ್ಟು ಮಂದಿ ಅಲ್ಲಿ ಕೆಲಸ ಮಾಡುತ್ತಿಲ್ಲ. ಮತ್ತು ಇಲ್ಲಿ ರಾಮಯ್ಯ ಎನ್ನುವ ಕಂಟ್ರಾಕ್ಟರು ಕೆಲಸ ಮಾಡುತ್ತಿದ್ದವರು ಈಗ ಅಲ್ಲಿಲ್ಲ. ಇಲ್ಲಿಗೆ ಬಂದು ಬಿಟ್ಟಿದ್ದಾರೆ. ಅವರು ಅಲ್ಲಿಯ ಕೂಲಿಗಳಿಗೆ ಇನ್ನೂ ಸಂಬಳ ಕೊಡಲಿಲ್ಲ. ಇದರಿಂದ ಈ ಯೋಜನಾ ಈಗ ಬರುತ್ತದೆಯೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಇದಕ್ಕಾಗಿ ಕೇಂದ್ರದವರು ಈ ವರ್ಷ ಐದು ಕೋಟಿಯಷ್ಟು ಹಣ ಬೇಕಾದರೂ ಕೊಡಬೇಕು. ಇದು ಸುಮಾರು 130 ಕೋಟಿಯಂತಹ ದೊಡ್ಡ ಯೋಜನೆಗಾಗಿ ಕೇವಲ 20 ಲಕ್ಷದಷ್ಟು ಹಣವನ್ನು ಮಾತ್ರ ಏಕೆ ಒದಗಿಸಿದ್ದಾರೆ ಎನ್ನುವುದು ನನಗೆ ತಿಳಿಯಲೊಲ್ಲದು. ಇದನ್ನು ಹೇಗಾದರೂ ಒತ್ತಾಯ ಮಾಡಿ ಸೆಂಟ್ರಲ್ ಗವರ್ನಮೆಂಟಿನ ಕಡೆಯಿಂದಲೇ ಎಲ್ಲ ಕೆಲಸಗಳನ್ನೂ ಮಾಡುವಂತೆ ಏಕೆ ಮಾಡಬಾರದು ? ಈಗ ಸೆಂಟರಿನವರು ನಾಗಾರ್ಜುನ ಸಾಗರಕ್ಕೆ ಹಣ ಕೊಟ್ಟಿದ್ದಾರೆ. ಅದರಂತೆ ನಮ್ಮ ಅಪ್ಪರು ಕೃಷ್ಣ ಯೋಜನೆಗೂ ಹಣ

ಕೊಟ್ಟು ಇದು ಬೇಗ ಆಗುವಂತೆ ಕೆಲಸಗಳನ್ನು ಮಾಡಬೇಕೆಂದು ನಮ್ಮ ಸರಕಾರದಲ್ಲಿ ಒತ್ತಾಯ ಮಾಡುತ್ತೇನೆ. ಇದು ನಮ್ಮ ಬಿಜಾಪುರ ಜಿಲ್ಲೆಗೆ ಬಹಳ ಅನುಕೂಲವಾಗುವಂತಹ ಯೋಜನಾ. ಇದನ್ನು ಮಾಡಿಸಿಕೊಡಬೇಕು.

ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ವಿಚಾರವಾಗಿ ಮಾತನಾಡಬೇಕಾದರೆ ನನಗೆ ಬಹಳ ದುಃಖ ವಾಗುತ್ತದೆ. ನಾನು ಸೆಕ್ರೆಟೇರಿಯಟ್ಟಿಗೆ ಯಾವಾಗ ಹೋದರೂ ಯಾರೂ ಅಲ್ಲಿ ಇರುವುದೇ ಇಲ್ಲ. ಎಲ್ಲಿಗೆ ಹೋಗಿದ್ದಾರೆ ಎನ್ನುವುದೂ ತಿಳಿಯುವುದಿಲ್ಲ. ಕೆಲವು ಸಲ ತಿಂಡಿಗೆ ಹೋಗಿಬಿಟ್ಟಿದ್ದಾರೆ ಎಂದು ಹೇಳುತ್ತಾರೆ. ಇನ್ನೊಂದು ಸಾರಿ ಹೋದರೆ ಅವರು ಇದ್ದಾರೋ ಇಲ್ಲವೋ ಎನ್ನುವುದನ್ನು ಯಾರೂ ತಿಳಿಸುವುದಿಲ್ಲ. ಏನೋ ಅಸೆಂಬ್ಲಿ ನಡೆಯುವ ಕಾಲದಲ್ಲಿ 2—3 ಜನರು ಇರುತ್ತಾರೆ. ಇತರೇ ಕಾಲದಲ್ಲಿ ಸೆಕ್ರೆಟೇರಿಯಟ್ಟು ಕಚೇರಿಗೆ ಹೋದರೆ ಇಲ್ಲಿ ಯಾರೂ ಇರುವುದೇ ಕಾಣುವುದಿಲ್ಲ. ಹೀಗಾದರೆ ನಮ್ಮ ಕೆಲಸಗಳನ್ನು ಮಾಡಿಕೊಳ್ಳುವುದಾದರೂ ಹೇಗೆ ?

ಇನ್ನು ನಮ್ಮ ಬಾಗೇವಾಡಿ ತಾಲ್ಲೂಕಿನಲ್ಲಿ ಫ್ರಾಗ್‌ಮೆಂಟೇಷನ್ನು ಹಾಗೂ ಕನ್‌ಸಾಲಿಡೇಷನ್ ಕಾಯದೆ ಜಾರಿಗೆ ಬಂದಿದೆ. ಇಲ್ಲಿ ಹನ್ನೆರಡು ವರ್ಷವಾದರೂ ಕೂಡ ಈ ಸ್ಕೀಂ ಇನ್ನೂ ಜಾರಿ ಯಲ್ಲಿದೆ. ಇದರಿಂದ ಬಡಜನಕ್ಕೆ ಬಹಳ ತೊಂದರೆಯಾಗಿದೆ. ಇದರ ಕಡೆಗೆ ಸರಕಾರ ಲಕ್ಷ್ಯ ಕೊಡ ಬೇಕು. ಇವರಲ್ಲಿ ಭೂಮಿ ಮಾರುವ ಬಗ್ಗೆ ಅಲ್ಲಿನ ತಹಶೀಲುದಾರರು ತಮಗೆ ಅಧಿಕಾರವಿಲ್ಲ ಎಂದು ಅಲ್ಲಿರುವ ಡಿ. ಸಿ. ಗೆ ಕಾಗದವನ್ನು ಕಳುಹಿಸುತ್ತಾರೆ. ಅಲ್ಲಿಂದ ಸೆಕ್ರೆಟೇರಿಯಟ್ಟಿಗೆ ಕಳುಹಿಸುತ್ತೇವೆ ಎಂದು ಹೇಳುತ್ತಾರೆ. ಹತ್ತು ವರ್ಷವಾದರೂ ಇದರ ಬಗ್ಗೆ ತೀರ್ಮಾನವಾಗಿಲ್ಲ. ಇದರ ಕಡೆಗೆ ಸರಕಾರ ಲಕ್ಷ್ಯ ಕೊಟ್ಟು ಸಹಾಯ ಮಾಡಬೇಕು. ಇದು ನಮ್ಮ ಬಾಗೇವಾಡಿ ತಾಲ್ಲೂಕಿಗೆ ಬಹಳ ತೊಂದರೆಯನ್ನುಂಟು ಮಾಡಿದೆ. ಅದಕ್ಕಾಗಿ ಈ ಸ್ಕೀಂ ಸ್ಕ್ರಾಪ್ ಮಾಡಬೇಕು.

ಇನ್ನು ಸೋಷಿಯಲ್ ವೆಲ್‌ಫೇರು ಸ್ಕೀಂ. ಇದು ಬರೀ ಹೆಣ್ಣುಮಕ್ಕಳಿಗೆ ಹಳ್ಳಿಗಳಲ್ಲಿ ಅನುಕೂಲ ವಾಗಲಿ ಎಂದು ಮಾಡಿರುವ ಯೋಜನೆ. ಆದರೆ ಅವರಲ್ಲಿಯು ಹೆಣ್ಣುಮಕ್ಕಳು ಬಹುತೇಕ ಸಿಟಿಗಳಲ್ಲೇ ಕೆಲಸ ಮಾಡುವುದು ಹೆಚ್ಚು. ಹಳ್ಳಿಗಳಿಗೆ ಕೆಲಸಗಳು ಬಹಳ ಕಡಿಮೆಯಾಗಿವೆ. ಅದಲ್ಲದೇ ಹಳ್ಳಿ ಗಳಿಂದ ಮಹಿಳಾ ಸಮಾಜದ ಹೆಣ್ಣು ಮಕ್ಕಳು ಬಡ್‌ಜಟ್ ಮಾಡಿ, ಎಸ್ಟಿಮೇಟು ಮಾಡಿ ತಯಾರಿಸಿ ಮತ್ತು ಆಡಿಟ್ಟು ಮಾಡಿಸಿ ತಮ್ಮ ಸಂಸ್ಥೆಯಿಂದ ಗ್ರಾಂಟಿನ ಸಲುವಾಗಿ ಅಪ್ಲಿಕೇಷನ್ ಕಳಿಸಿದರೆ ಒಂದು ಸಾವಿರ ರೂಪಾಯಿಗಳಷ್ಟು ಮಂಜೂರು ಮಾಡುತ್ತಾರೆ. ಆದರೆ ಅದನ್ನು ರಿಲೀಜ್ ಮಾಡು ವಾಗ ಸ್ಟೇಟು ಬೋರ್ಡಿನಿಂದ ಒಂದೊಂದೇ ಪ್ರಶ್ನೆಗಳನ್ನು ಕೇಳುವುದು ಪ್ರಾರಂಭವಾಗುತ್ತದೆ. ಒಂದು ಸಲ ಎಸ್ಟಿಮೇಟು ಸರಿಯಾಗಿಲ್ಲ ಎನ್ನುತ್ತಾರೆ. ಇನ್ನೊಂದು ಸಲ ನಮಗೆ ನೀವು ಕಳಿಸಿದ ಇನ್‌ಫರುಮೇಷನ್ ಮುಟ್ಟಿಲ್ಲ ಎನ್ನುತ್ತಾರೆ. ಇದರಿಂದ ಹಳ್ಳಿಗಳಿಗೆ ಗ್ರಾಂಟು ಮಂಜೂರಾದದ್ದು ಲ್ಯಾಪ್ಸ್ ಆಗುವ ಸಂಭವವಿರುತ್ತದೆ. ಅದಕ್ಕಾಗಿ ಸರಕಾರದವರು ಇದು ಸರಿಯಾಗಿ ನಡೆಯುವಂತೆ ಮಾಡಬೇಕು. ಸರಕಾರದವರು ಸ್ಟೇಟು ಸೋಷಿಯಲ್ ವೆಲ್‌ಫೇರು ಅಡ್ವೈಸರಿ ಬೋರ್ಡು ಎಂದು ಮಾಡಿದ್ದಾರೆ. ಅದರಲ್ಲಿ ಮೊದಲು ಬೆಳಗಾವಿಯಿಂದ ಒಬ್ಬ ಸದಸ್ಯ ಬಿಜಾಪುರದ ಕೆಲಸ ಮಾಡು ತ್ತಿದ್ದರು. ಅವರ ತರುವಾಯ ಬಿಜಾಪುರಕ್ಕೆ ಒಂದು ಪ್ರಾಶಸ್ತ್ಯ ಕೊಟ್ಟರು. ಆದರೆ ಹೋದ ವರ್ಷ ಆ ಬೋರ್ಡು ಮತ್ತೆ ರೀ ಕಾನ್‌ಸ್ಟಿಟ್ಯೂಟು ಆದಾಗ ನಮ್ಮ ಬಿಜಾಪುರ ಜಿಲ್ಲೆಯಿಂದ ಯಾರನ್ನೂ ತೆಗೆದುಕೊಳ್ಳದೇ ಬೆಳಗಾವಿಯಿಂದ ಇಬ್ಬರು ಹೆಣ್ಣುಮಕ್ಕಳನ್ನು ತೆಗೆದುಕೊಂಡು ಇದ್ದಾರೆ. ಆದರೆ ಬಿಜಾಪುರದಂತಹ ನಮ್ಮ ಜಿಲ್ಲೆಯಲ್ಲಿರುವ ಹೆಣ್ಣುಮಕ್ಕಳೇ ತುಲಾಭಾರ ಮಾಡಿಸಿ ಹೆಮ್ಮೆಪಡುವಂಥಹ ವರು. ಮತ್ತು ಇಷ್ಟು ಹೆಚ್ಚು ಬಂಗಾರವನ್ನು ಕೊಟ್ಟವರು ನಮ್ಮ ಹಿಂದೂಸ್ಥಾನದಲ್ಲಿ ಬೇರೆಲ್ಲಿಯೂ ಕೊಡಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಲ್ಲಿರುವ ಹೆಣ್ಣು ಮಕ್ಕಳು ಬಂಗಾರ ಕೊಟ್ಟರೂ ನಮ್ಮ ಮಾನ್ಯ ಸದಸ್ಯೆಯವರು ಅವರ ಬಳೆಯನ್ನೂ ತೆಗೆದು ಅವರಿಗೆ ಕೊಡಲಿಲ್ಲ. (ನಗು)

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ನಮ್ಮ ತಾಲ್ಲೂಕಿನಲ್ಲಿ ಹೆಣ್ಣು ಮಕ್ಕಳು ಕೊಟ್ಟಷ್ಟು ಬಂಗಾರ ಬೇರೆ ಎಲ್ಲೂ ಕೊಟ್ಟಿಲ್ಲ. ನಾನೂ ಕೂಡ ಅಚ್ಚ ಬಂಗಾರವನ್ನು ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಬಂದಿದ್ದಾಗ ಕೊಟ್ಟಿದ್ದೇನೆ. ಬೇಕಾದರೆ ತಾವು ಕೇಳಬಹುದು. ಆದುದರಿಂದ ನಾನು ಸರಕಾರದಲ್ಲಿ ವಿನಂತಿ ಮಾಡುವುದೆ ಹೆಣ್ಣು ಮಕ್ಕಳಿ ಗಾಗಿ ಮಾಡಿರುವ ಈ ಸೋಷಿಯಲ್ ವೆಲ್‌ಫೇರು ಅಡ್ವೈಜರಿ ಬೋರ್ಡಿಗೆ ಬಿಜಾಪುರದಿಂದ ಒಬ್ಬ ಮೆಂಬರನ್ನು ಈ ಬೋರ್ಡಿನಲ್ಲೂ ಇರುವಂತೆ ನೇಮಿಸಬೇಕೆಂದು ಸೂಚನಾ ಕೊಡುತ್ತಿದ್ದೇನೆ. ಇದನ್ನು ಮಾಡದೇ ಇರುವುದು ಬಹಳ ವಿಷಾದ ಸಂಗತಿ. ಸೋಷಿಯಲ್ ವೆಲ್‌ಫೇರು ಇಲಾಖೆ ಯಲ್ಲಿ ಹಂಚಿಕೆ ಮಾಡುವಾಗ ಜಿಲ್ಲಾವಾರು ಹಂಚುವ ಏರ್ಪಾಡು ಮಾಡಿ. ಈಗ ಐದು ಜನರಿರುವ

(ಶ್ರೀಮತಿ ಸುಶೀಲಾಬಾಯ್ ಹೀರಾಚಂದ್ ಷಾ)

ಜಿಲ್ಲೆಗೆ ಒಂದು ರೀತಿ 16 ಲಕ್ಷ ಜನರಿರುವ ಕಡೆಗೇ ಒಂದೇ ರೀತಿಯಾಗಿ ಮಾಡುವುದು ಸರಿಯಲ್ಲ. ಎಲ್ಲ ಕಡೆಗೂ ನ್ಯಾಯ ದೊರಕುವಂತೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ನಮ್ಮ ಕಡೆಗೂ ಹೆಚ್ಚು ಲಕ್ಷ್ಯಕೊಡಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು).—ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ಮುಂದೆ ಇಟ್ಟಿರುವ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಇಲ್ಲಿ ಹೇಳಬಯಸುತ್ತೇನೆ.

ಸಾಮಾನ್ಯ ಆಡಳಿತದ ಬಗ್ಗೆ ನಾವು ವಿಚಾರ ಮಾಡುವಾಗ ಏನು ಸುಧಾರಿಸಬೇಕು ಎಂದು ಹೇಳುತ್ತಿದ್ದೆವೋ ಅದರಂತೆ ಸುಧಾರಿತವಾಗದೆ ಅದು ತುಂಬಾ ಹದಗೆಡುತ್ತಿದೆ. ಹದಗೆಡಿಸ ತಕ್ಕಂತಹ ವಿಚಾರದಲ್ಲಿ ಅನೇಕ ಶಕ್ತಿಗಳು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕೆಲಸ ಮಾಡುತ್ತ ಇರುವುದು ತಮಗೆಲ್ಲರಿಗೂ ತಿಳಿದೇ ಇದೆ. ನಾವು ಪ್ರಜಾಪ್ರಭುತ್ವದಡಿಯ ಕೆಲಸ ಮಾಡುತ್ತಿದ್ದು ಪ್ರಜಾ ಪ್ರತಿನಿಧಿಗಳು ಸರ್ಕಾರ ಆಳುತ್ತಿದ್ದರೂ ಇಂದು ಅಧಿಕಾರಿಗಳ ಕೈ ಆಡಳಿತದಲ್ಲಿ ಮೇಲಾಗಿದೆ. ಅಧಿಕಾರಿಗಳಿಗೂ ಪ್ರಜಾ ಮುಖಂಡರಿಗೂ ಹೊಂದಾಣಿಕೆ ಕಾಣುತ್ತಾ ಇಲ್ಲ. ಎಲ್ಲ ಅಧಿಕಾರಿಗಳೂ ಕೆಟ್ಟವರು ಎಂದು ನಾನು ಹೇಳುತ್ತಾ ಇಲ್ಲ. ಅನೇಕ ಜನ ಒಳ್ಳೆಯ ಅಧಿಕಾರಿಗಳು ಇಲ್ಲದೇ ಹೋಗಿದ್ದರೆ ಸರ್ಕಾರ ಇಷ್ಟೂ ಕೂಡ ಉತ್ತಮವಾಗಿ ನಡೆಯುವುದಕ್ಕೆ ಆಗುತ್ತಾ ಇರಲಿಲ್ಲ. ಆದ್ದರಿಂದ ಕೆಲವು ಅಧಿಕಾರಿಗಳು ಇವತ್ತು ಪ್ರಜಾಪ್ರಭುತ್ವದ ಅಡಿಯಲ್ಲಿ ಕೆಲಸ ಮಾಡುತ್ತಾ ಇದ್ದೇವೆ ಅನ್ನುವುದನ್ನೂ ಕೂಡ ಮರೆತು ತಮ್ಮ ಇಷ್ಟಬಂದಹಾಗೆ ಕೆಲಸ ಮಾಡುತ್ತಾ ಇದ್ದಾರೆ. ಇವರ ಮೇಲೆ ಇವತ್ತು ಆಡಳಿತದ ಹೊಣೆ ಹೆಚ್ಚಾಗಿ ಬಿದ್ದಿರುವುದರಿಂದ ಪ್ರಜಾ ಪ್ರತಿನಿಧಿಗಳಿಗಿಂತಲೂ ಹೆಚ್ಚಾಗಿ ಅವರಲ್ಲಿ ದೇಶ ಭಕ್ತಿ ಜನತಾ ಹಿತಾಶಕ್ತಿ, ಹಿತಚಿಂತನೆ ರಾಷ್ಟ್ರ ಇರಬೇಕಾಗಿತ್ತು. ಆದರೆ ಇವತ್ತು ಅವರು ಆಸ್ತಿಪಾಸ್ತಿಗಳನ್ನು ಮಾಡುವುದರಲ್ಲಿ ದುಡ್ಡು ಸಂಪಾದನೆ ಮಾಡುವುದರಲ್ಲಿ ಮತ್ತು ಅನೇಕ ದುಷ್ಕೃಟಗಳನ್ನು ಕಲಿತು ತಮಗೆ ಯಾವುದಾದರೂ ರೀತಿಯಲ್ಲಿ ದುಡ್ಡು ಬರಬೇಕು ಜನ ಹಾಳಾಗಲಿ, ರಾಜ್ಯ ಹಾಳಾಗಲಿ ಎಂಬ ಮನೋಭಾವ ಬೆಳೆಯುತ್ತಾ ಇದೆ. ಇದರ ಜೊತೆಗೆ ಜಾತೀಯತೆ ಅಂತೂ ಬಹಳ ಹೆಚ್ಚಾಗಿದೆ. ಇದು ಇವತ್ತು ಮಂತ್ರಿಗಳಿಗೆ ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಎಲ್ಲರಿಗೂ ಗೊತ್ತಿದೆ. ಆದರೆ ಯಾರೂ ಕೂಡ ಅವರ ಮೇಲೆ ಇವತ್ತು ಕ್ರಮ ತೆಗೆದು ಕೊಳ್ಳುವಷ್ಟು ಶಕ್ತಿಯನ್ನು ನಾವು ಉಳಿಸಿಕೊಂಡಿಲ್ಲ. ಅಧಿಕಾರಿಗಳ ತಪ್ಪೋ ಅಥವಾ ನಮ್ಮಲ್ಲಿ ನೈತಿಕ ಬಲವಿಲ್ಲವೋ ನಮಗೆ ಗೊತ್ತಾಗುತ್ತಾ ಇಲ್ಲ. ಅನೇಕ ಅಧಿಕಾರಿಗಳು ಇಂಥ ತಪ್ಪು ಮಾಡಿದ ಅಧಿಕಾರಿಗಳನ್ನು ಬಿಟ್ಟುಕೊಡುವುದೇ ಇಲ್ಲ. ಅನೇಕ ಒಳ್ಳೆಯ ಅಧಿಕಾರಿಗಳಿಗೆ ಪ್ರೋತ್ಸಾಹ ದೊರೆಯುತ್ತಿಲ್ಲ ಬದಿಮರಿಗೆ ಮೀಸಲು ಅಂತಹ ಖದೀಮ ಅಧಿಕಾರಿಗಳು ಒಳ್ಳೊಳ್ಳೆಯ ಸ್ಥಾನ ಗಳನ್ನೇ ಅಲಂಕರಿಸುತ್ತಾ ಇದ್ದಾರೆ, ದೊಡ್ಡದೊಡ್ಡವರ ಹೆಸರು ಹೇಳಿ ಅವರು ತಮ್ಮ ಸ್ಥಾನ ಮತ್ತು ಪ್ರತಿಷ್ಠೆಗಳನ್ನು, ಬೆಳೆಸಿ ಒಳ್ಳೆಯ ಸ್ಥಾನಗಳನ್ನು ಆಕ್ರಮಿಸಿರುವುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ರಾಜ್ಯ ಸರ್ಕಾರದವರು ಆಡಳಿತ ಸುಧಾರಣೆಗಾಗಿ ಅನೇಕ ಕಾರ್ಯಕ್ರಮಗಳನ್ನು ತೆಗೆದು ಕೊಂಡಿದ್ದಾರೆ. ಅನೇಕ ಏಜೆನ್ಸಿಗಳನ್ನು ಇಟ್ಟಿದ್ದಾರೆ. ಆದರೆ ಈಗ ಇಟ್ಟಿರತಕ್ಕ ಏಜೆನ್ಸಿಗಳು ಸಣ್ಣ ಪುಟ್ಟ ನೌಕರರ ಮೇಲೆ ತಪ್ಪನ್ನು ಹೊರಿಸಿ ಅವರ ಮೇಲೆ ಬಂದಂಥ ದೂರುಗಳನ್ನು ವಿಚಾರಣೆ ಮಾಡುವು ದರಲ್ಲಿ ಹೆಚ್ಚು ಕಾಲ ಕಳೆಯುತ್ತಾ ಇದ್ದಾರೆ. ಆದ್ದರಿಂದ ಈ ಆಡಳಿತ ಸುಭದ್ರವಾದ ಹೊರತು ಒಳ್ಳೆಯ ಸರ್ಕಾರವನ್ನು ನಾವು ನೋಡುವ ಹಾಗೆ ಇಲ್ಲ. ಮತ್ತು ನಮ್ಮ ಯೋಜನೆಗಳೆಲ್ಲಾ ಜಯಪ್ರದ ವಾಗಿ ನಡೆಯುವುದಕ್ಕೆ ಸಾಧ್ಯವಿಲ್ಲ. ಇವತ್ತು ಪಂಚವಾರ್ಷಿಕ ಯೋಜನೆಗಳಿಗಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಾ ಇದ್ದೇವೆ. ಅದು ಸರಿಯಾದ ರೀತಿಯಲ್ಲಿ ಖರ್ಚಾಗಿ ಪ್ರತಿಫಲ ಬರಬೇಕಾದರೆ ಆಡಳಿತ ಭದ್ರವಾಗಿರಬೇಕು. ಉನ್ನತ ಅಧಿಕಾರಿಗಳು ಬಹಳ ಶ್ರಮಪಟ್ಟು ಆಡಳಿತ ಬಿಗಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ದಿವಸ ಈ ಸಮಯದಲ್ಲಿ ಒತ್ತಾಯಮಾಡುತ್ತೇನೆ. ನನ್ನಲ್ಲಿ ಅನೇಕ ನಿದರ್ಶನಗಳು ಇವೆ. ಹೆಚ್ಚು ಕಾಲ ಅವಕಾಶ ಇಲ್ಲದೇ ಇರುವುದರಿಂದ ಅವನ್ನೆಲ್ಲಾ ಹೇಳುವುದಿಲ್ಲ.

ನೀರಾವರಿ ವಿಚಾರವಾಗಿ ಹೇಳುವುದಾದರೆ, ಇವತ್ತಿನ ದಿವಸ ಬೆಳಿಗ್ಗೆ ಹಾಸನ ಜಿಲ್ಲೆಯ ನೀರಾವರಿ ಕಾಮಗಾರಿಗಳ ಬಗ್ಗೆ ಸಾಕಷ್ಟು ಹಣ ಒದಗಿಸಿಲ್ಲ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದರು, ಅಷ್ಟೇ ಅಲ್ಲ ಸಾಕಾದಷ್ಟು ಕೆಲಸಗಳನ್ನು ತೆಗೆದುಕೊಂಡಿಲ್ಲ ಎಂದು ಒತ್ತಾಯಮಾಡಿ ದರು. ಈ ಸಾರಿಯ ಬಡ್ಜೆಟ್‌ನ್ನು ನಾವು ನೋಡುವುದಾದರೆ ಹಾಸನ ಜಿಲ್ಲೆ ಬಡ್ಜೆಟ್‌ನಿಂದ ಹೊರತಾಗಿದೆಯೇನೋ ಎಂಬ ಭಾವನೆ ಕಂಡು ಬರುತ್ತಾ ಇದೆ. ಹಾಸನ ಜಿಲ್ಲೆಯಲ್ಲಿ ಕೆರೆಗಳಿಲ್ಲವೆ, ಹಳ್ಳಗಳಿಲ್ಲವೆ ಅಥವಾ ನದಿಗಳು ಇಲ್ಲವೇ ? ಬಡ್ಜೆಟ್ ತಯಾರು ಮಾಡಿದಂತಹವರು ಮತ್ತು ಅಧಿಕಾರ

ಹೊತ್ತಿರತಕ್ಕಂತಹವರು ಯಾರಿದ್ದಾರೆ ಅವರಿಗೆ ಇದು ಅರ್ಥವಾಗಬೇಕು. ಕಳೆದ ಸುಮಾರು 3-4 ವರ್ಷಗಳಿಂದ ಈ ಜಿಲ್ಲೆಯಲ್ಲಿ ಒಂದೇ ಒಂದು ಪಿ.ಡಬ್ಲ್ಯೂ.ಡಿ ಡಿವಿಜನ್ ಇದೆ, ಎರಡು ಡಿವಿಜನ್ ಮಾಡಬೇಕೆಂದು ಈ ಸಭೆಯೊಳಗೆ ಅನೇಕ ಸಾರಿ ಒತ್ತಾಯ ಮಾಡುತ್ತಾ ಬಂದಿದ್ದೇವೆ ಮತ್ತು ಸಂಬಂಧಪಟ್ಟ ಮಂತ್ರಿಗಳಲ್ಲೂ ಕೂಡ ಒತ್ತಾಯ ಮಾಡಿದ್ದೇವೆ. ವರ್ಕ್ ಲೋಡ್ ಇಲ್ಲ ಎಂದು ಅವರು ಉತ್ತರ ಹೇಳುತ್ತಾರೆ. ಹಾಸನ ಜಿಲ್ಲೆಯಲ್ಲಿ ಸುಮಾರು 6.500 ಕೆರೆಗಳು ಇದ್ದು ಅನೇಕ ನದಿಗಳು ಸಣ್ಣ ಹಳ್ಳಗಳು ಹರಿಯುತ್ತಾ ಇವೆ. ಅನೇಕ ಕಡೆ ಪಿಕ್‌ಅಪ್ ಕಟ್ಟಿದರೆ 15–20 ಸಾವಿರ ಎಕರೆಗೆ ಮೇಲ್ಪಟ್ಟು ನೀರಾವರಿಯಾಗತಕ್ಕ ಅವಕಾಶವಿದೆ. ಈಗ ಆ ನೀರೆಲ್ಲಾ ಸುಮ್ಮನೆ ವೇಸ್ಟ್ ಆಗಿ ಹೋಗುತ್ತಾ ಇದೆ. ಇಂದಿನ ಆಹಾರದ ಅಭಾವದ ಕಾಲದಲ್ಲಿ ಕಡಿಮೆ ಖರ್ಚಿನಲ್ಲಿ ಹೆಚ್ಚು ಬೆಳೆ ಬರತಕ್ಕ ಈ ಯೋಜನೆಗಳನ್ನು ಹಾಕಿದರೆ ಹಾಸನ ಜಿಲ್ಲೆಗೆ ಅನುಕೂಲವಾಗುತ್ತದೆ ಮಾತ್ರವಲ್ಲ ಇಡೀ ದೇಶಕ್ಕೇ ಅನುಕೂಲವಾಗುತ್ತದೆ. ಇಲ್ಲದೇ ಹೋದರೆ ಇಡೀ ದೇಶ ಬರಗಾಲವನ್ನು ಅನುಭವಿಸ ಬೇಕಾಗುತ್ತದೆ. ಹಾಸನ ಜಿಲ್ಲೆಯಲ್ಲಿ ಈ ವರ್ಷ ಮಳೆ ಅಕಸ್ಮಾತ್ತಾಗಿ ಹೋಗಿದ್ದರೂ ಕೂಡ ಮುಂದಿನ ವರ್ಷ ಸರಿಹೋಗಬಹುದು. ಈಗ ಇಡೀ ದೇಶದಲ್ಲಿ ಎಲ್ಲರೂ ತೊಂದರೆಪಡುತ್ತಾ ಇದ್ದಾರೆ. ಆದ್ದರಿಂದ ಸರ್ಕಾರದವರು ಇದನ್ನು ಯೋಚನೆಮಾಡಿ ಹಾಸನ ಜಿಲ್ಲೆಯಲ್ಲಿ ಸಾಕಾದಷ್ಟು ಕಾಮಗಾರಿಗಳನ್ನು ತೆಗೆದುಕೊಂಡು ಹೆಚ್ಚು ಹಣ ಒದಗಿಸಿ ನೀರಿನ ಸೌಲಭ್ಯವನ್ನು ಉಪಯೋಗಿಸಿ ಕೊಳ್ಳಬೇಕೆಂದು ಈ ಸಮಯದಲ್ಲಿ ಒತ್ತಾಯಮಾಡುತ್ತೇನೆ. ಮಳೆ ಹೋದ ಪ್ರಯುಕ್ತ ಅನೇಕ ರಿಲೀಫ್ ಕಾಮಗಾರಿಗಳನ್ನು ತೆಗೆದುಕೊಂಡಿದ್ದೀರಿ, ಇದಕ್ಕೂ ಕೂಡ ಸಾಕಾದಷ್ಟು ಹಣವನ್ನು ಒದಗಿಸದೇ ಇರುವುದರಿಂದ ಅನೇಕ ಜನಕ್ಕೆ ಜೀವನ ಮಾಡಲು ಕೂಲಿ ಇಲ್ಲದೇ ತೊಂದರೆಯಾಗುತ್ತಾ ಇರತಕ್ಕ ಪರಿಸ್ಥಿತಿ ಇದೆ. ಅನೇಕ ಜನರು ಕಷ್ಟಪಡುತ್ತಾ ಇದ್ದಾರೆ. ಈ ಕಡೆಗೆ ಸರ್ಕಾರದವರು ಗಮನಕೊಡಬೇಕು.

ಸಮಾಜ ಕಲ್ಯಾಣದ ಬಗ್ಗೆ ನಾನು ಒಂದೆರಡು ಮಾತುಗತನ್ನು ಹೇಳಬೇಕಾಗಿದೆ. ಇದಕ್ಕೆ ರಾಜ್ಯಮಟ್ಟದಲ್ಲಿ ಸಪರೇಟ್ ಡೈರೆಕ್ಟೊರೇಟ್ ಇಟ್ಟಿದ್ದೀರಿ. ಜಿಲ್ಲಾಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಕೂಡ ಅಧಿಕಾರಿಗಳು ಇದ್ದಾರೆ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿರತಕ್ಕ ಅಧಿಕಾರಿ ಗಳು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಅಸಿಸ್ಟೆಂಟ್ ಮತ್ತು ಬಿ.ಡಿ.ಓ. ಅವರಿಗೆ ಅಧೀನವಾಗಿದ್ದಾರೆ. ಜಿಲ್ಲಾ ಡೆವಲಪ್‌ಮೆಂಟ್ ಅಸಿಸ್ಟೆಂಟ್ ಮತ್ತು ಬಿ.ಡಿ.ಓ.ಗಳು ತಮ್ಮ ಕಾರ್ಯ ಮಾಡುವುದರಲ್ಲಿ ಅವರನ್ನು ಉಪಯೋಗಿಸಿಕೊಳ್ಳುತ್ತಾರೆ, ಅವರು ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ. ಸಮಾಜ ಕಲ್ಯಾಣ ಇಲಾಖೆ ಸೂಪರ್‌ವೈಸ್ ಮಾಡತಕ್ಕ ಕೆಲಸಗಳು ಮತ್ತು ರಾಜ್ಯಾಂಗದಲ್ಲಿ ಹರಿ ಜನರಿಗೆ ಮತ್ತು ಗಿರಿಜನರಿಗೆ ಏನು ಒಂದು ಸೌಲತ್ತು ಒದಗಿಸಿದ್ದಾರೆ 18 ಪರ್ಸೆಂಟ್ ಅಭಿವೃದ್ಧಿ ಕಾರ್ಯಗಳಲ್ಲಿ ಖರ್ಚುಮಾಡುವಾಗ ಅದನ್ನು ಸೂಪರ್‌ವೈಸ್ ಮಾಡುವುದನ್ನು ಈ ಇಲಾಖೆಯವರು ಮಾಡಬೇಕಾಗಿತ್ತು. ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಅಸಿಸ್ಟೆಂಟ್ ಬಿ.ಡಿ.ಓ. ಅಧೀನದಲ್ಲಿರುವ ಅವರು ಹರಿಜನ ಮತ್ತು ಗಿರಿಜನ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡತಕ್ಕ ಹಣವನ್ನು ಒಂದು ಪಕ್ಷ 18 ಪರ್ಸೆಂಟ್ ಖರ್ಚುಮಾಡದೇ ಹೋದರೆ ಈ ಅಧಿಕಾರಿಗಳು ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಅವರ ಮೇಲೆ ಡೈರೆಕ್ಟರ್ ಆಫ್ ಸೋಷಿಯಲ್ ವೆಲ್‌ಫೇರ್ ಅಥವಾ ಸರ್ಕಾರದವರಿಗೆ ಬರೆಯುವುದಕ್ಕೆ ಅಧಿಕಾರವಿದೆಯೋ ಎಂಬುದನ್ನು ತಾವು ಪರಿಶೀಲನೆ ಆದ್ದರಿಂದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಇಂಡಿಪೆಂಡೆಂಟಾಗಿ ಈ ಇಲಾಖೆಯನ್ನು ಇಟ್ಟರೆ ಹರಿಜನರಿಗೆ ಬಹಳ ಸಹಾಯ ವಾಗುತ್ತದೆ. ಇದನ್ನು ಪ್ರತ್ಯೇಕವಾಗಿ ಮಾಡಬೇಕು ಮತ್ತು ಅವರಿಗೆ ಸ್ವಲ್ಪ ಹೆಚ್ಚಿನ ಅಧಿಕಾರ ಗಳನ್ನು ಕೊಡಬೇಕು. ಬೇರೆ ಇಲಾಖೆಗಳಲ್ಲಿ ಖರ್ಚುಮಾಡತಕ್ಕ ಹಣದಲ್ಲಿ ಈ ಪರ್ಸೆಂಟೇಜ್ ನಿಜ ವಾಗಿಯೂ ಖರ್ಚಾಗುತ್ತಾ ಇದೆಯೋ ಇಲ್ಲವೋ ಎಂಬುದನ್ನು ಸೂಪರ್‌ವೈಸ್ ಮಾಡುವುದಕ್ಕೆ ಅವರಿಗೆ ಇಂಡಿಪೆಂಡೆಂಟ್ ಚಾರ್ಜ್ ಕೊಟ್ಟರೆ ಅನುಕೂಲವಾಗುತ್ತದೆ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಅವರಿಗೆ ಆಫೀಸುಗಳನ್ನು ಮಾಡಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

†ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಬಹುಶಃ ಈ ಸಭೆಯೇ ಕೊನೆಯದಾಗಬಹುದು. ಈ ಸಭೆಯಲ್ಲಿ ರಾಜ್ಯಭಾರ ಹೇಗಿದೆ, ಜನಜೀವನ ಹೇಗಿದೆ ಎಂಬುದನ್ನು ಅನೇಕ ಸದಸ್ಯರು ಹೇಳಿ ದ್ದಾರೆ. ಆ ದೃಷ್ಟಿಯಿಂದ ನಾಲ್ಕು ಮಾತುಗಳನ್ನು ಹೇಳುತ್ತೇನೆ. ಮುಂದಿನ ಚರಿತ್ರಕಾರ ಕಾವ್ಯ ರೂಪದಲ್ಲಿ ಏನು ಹೇಳುತ್ತಾನೆಂಬುದನ್ನು ಊಹಿಸಬಹುದು. ಆಳುವ ಪಕ್ಷದವರು ಮಾಡಿರುವ ಕಾರ್ಯಕಲಾಪಗಳು. ಜನರಿಗೆ ಅವರು ಮಾಡಿರುವ ಅನೂಕೂಲ ನೋಡಿ ಈ ಪವಿತ್ರ ಸಭೆಯಲ್ಲಿ ಮಮಕಾರ ಭೂಪಾಲರು ಅಂದರೆ ಸದಸ್ಯರು ಮಮಕಾರದ ಒಡ್ಡೋಲಗದಲ್ಲಿ ಕುಳಿತು ಮಮಕಾರದ

(ಶ್ರೀ ವಿ. ಎಮ್. ದೇವ್)

ಕಾಲದಲ್ಲಿ ಕಾನೂನುಗಳನ್ನು ರಚಿಸಿ ಅದರಲ್ಲಿ ಜನರನ್ನು ಸಿಕ್ಕಿಸಿ ಕೊಂದರೆಗೆ ಗುರಿಮಾಡಿದ್ದಾರೆ ಎಂದು ಚಿತ್ರಿಸುತ್ತಾನೆ. ಈ ಸಭೆಯಲ್ಲಿ ನಾವು ಸ್ವಲ್ಪ ಹಣ ಓಟು ಮಾಡಿದ್ದೇವೆ, ಅದರಲ್ಲಿ ಮೊದಲನೆಯದು ಸಾಲ. ನಮ್ಮ ಸಭಾಧ್ಯಕ್ಷರು ವಿರೋಧ ಪಕ್ಷದವರನ್ನು ಕುರಿತು ಹೀಗೆ ಹೇಳಿದರು: "I will not touch with a parch pole"

ನಿಜವಾಗಿಯೂ ವಿರೋಧ ಪಕ್ಷದವರನ್ನು ಅಸ್ಪೃಶ್ಯರಂತೆ ನೋಡುತ್ತಿದ್ದಾರೆ. ಇಷ್ಟೇ ಅಲ್ಲದೆ ಟೇಬಲ್ ಮ್ಯಾನರ್ಸ್‌ಗೂ ಇದು ಅನ್ವಯಿಸುತ್ತದೆ. ನೆಹ್ರೂರವರು ಒಂದು ಸಲ ಸಬ್-ಸ್ಟ್ಯಾಂಡರ್ಡ್ ಸದಸ್ಯರು ಎಂದು ಹೇಳಿದರು. ಆಳುವ ಪಕ್ಷದವರು ಯಾವರೀತಿ ಅಧ್ಯಕ್ಷರನ್ನು ಚುನಾಯಿಸುತ್ತಾರೆ, ಆಸೇತು ಹಿಮಾಚಲದವರೆಗೆ The rules of procedure in this House are suspended. ಮಾತನಾಡುವಾಗ ಏನು ಐಡಿಯಾಸ್ ಕೊಡುತ್ತೀರಿ ಏನಾದರೂ ಕಾಂಟ್ರಿಬ್ಯೂಟ್ ಮಾಡುತ್ತೀರಾ ಎಂದು ಕೇಳುವುದಿಲ್ಲ. ಈ ಪವಿತ್ರ ಸಭೆಯಲ್ಲಿ ಮಮಕಾರ ಭೂಪಾಲರು ಜನರ ಉದ್ಧಾರದಲ್ಲಿ ಆಸಕ್ತಿವಹಿಸದೆ ಇಷ್ಟನ್ನು ಮಾಡಿದ್ದಾರೆ ಎಂದು ಚರಿತ್ರಕಾರ ಬರೆದಿರುತ್ತಾನೆ. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ. ಮೂರು ಪಾಯಿಂಟ್ ಇವೆ. ರೂಲ್ಸ್ ಆಫ್ ಪ್ರೊಸೀಜರ್ ದೆಶೆಯಿಂದ ತಾವು ಅಧ್ಯಕ್ಷರು. Under your aegis the rules of procedure are under suspension and you have treated the Opposition just like Scheduled Caste people.

[MR. SPEAKER in the Chair]

ಒಂದು ಸಾರಿ ನಾನು ಹೇಳಿದ್ದು ತಮಗೆ ಜ್ಞಾಪಕವಿರಬಹುದು.

Mr. SPEAKER.—Let me follow the Hon'ble Member; It is too dense an indea.

Sri V. M. DEO.—"I will not touch you with a parched people." You said this, Sir, with reference to the Opposition.

Mr. SPEAKER.—The Chair is not able to understand the Hon ble Member.

Sri V. M. DEO.—Better not.

ಆಮೇಲೆ ಮಮಕಾರ ಭೂಪಾಲರು ಅಂದರೆ ಸದಸ್ಯರು ಸರಿಯಾಗಿ ಕೆಲಸಮಾಡುವುದಿಲ್ಲವೆಂಬ ಭಾವನೆಯಿದೆ. ಏಕೆಂದರೆ ಹಣಕಾಸಿನ ಮುಗ್ಗಟ್ಟನ್ನು ಹೋಗಲಾಡಿಸಿ ಆರ್ಥಿಕಸ್ಥಿತಿಯನ್ನುತ್ತಮ ಪಡಿಸುವುದಕ್ಕೆ ಮನಸ್ಸು ಮಾಡದೆ ವೈಯಕ್ತಿಕವಾಗಿ ಅಧಿಕಾರಕ್ಕೆ ಬರುವುದಕ್ಕೆ ಅಥವ ಯಾವುದಾದರೂ ಸಮಿತಿಗೆ ನೇಮಕ ಮಾಡುವುದಕ್ಕೆ ತಮ್ಮ ಬುದ್ಧಿವಂತಿಕೆಯನ್ನು ಖರ್ಚುಮಾಡುತ್ತಿದ್ದಾರೆ.

Mr. SPEAKER.—How does it come under our budget ?

ಶ್ರೀ ವಿ. ಎಂ. ದೇವ್.—ಅದನ್ನು ಹೇಳುತ್ತೇನೆ. ಒಂದು ಒಳ್ಳೆಯ ಕೆಲಸಮಾಡಿದ್ದಾರೆಂದು ಕಾಣುತ್ತದೆ. ಜನಜೀವನ ಸ್ವಲ್ಪ ರೂಪಿಸಬೇಕು. ಇಂಥ ಮಂತ್ರಿಮಂಡಲ ಬೇರೆ ಇರಲಿಲ್ಲ. ಯಾವುದಕ್ಕೂ ಒಂದು ಲಿಮಿಟೇಷನ್ನಿರುತ್ತದೆ ಜನಜೀವನವನ್ನು ರೂಪಿಸುವುದು ನಿಜವಾದ ಒಂದು ಹೋರಾಟ ಮಾರ್ಗ. ನಾವು ಸರಿಯಾದ ಮಾರ್ಗದಲ್ಲಿ ನಡೆದು ಇತರರಿಗೆ ಮಾರ್ಗದರ್ಶಿಗಳಾಗಬೇಕೇ ಹೊರತು ಸುಮ್ಮನೆ ಬಾಯಲ್ಲಿ ಹೇಳಿದರೆ ಸಾಲದು, ನುಡಿದಂತೆ ನಡೆಯಬೇಕು, ನಡೆದು ತೋರಿಸಬೇಕು. ಇನ್ನೊಂದು ಮಾತು. ಕೆಲವು ವರ್ಷಗಳ ಹಿಂದೆ ರೀಡರ್ಸ್ ಡೈಜೆಸ್ಟ್ ಓದಿದೆ. ಹೆನ್ರಿ ಫೋರ್ಡ್ ಎನ್ನುವವರು ಒಬ್ಬ ದೊಡ್ಡ ಕೈಗಾರಿಕೋದ್ಯಮಿ, ಅವರ ವಿಚಾರದಲ್ಲಿ ಒಂದು ಆರ್ಟಿಕಲ್ಲಿತ್ತು. ಅದನ್ನು ಬಹಳ ಆಸಕ್ತಿಯಿಂದ ಓದಿದೆ.

ಅಧ್ಯಕ್ಷರು.—ಅದು ಇಲ್ಲಿ ಹೇಗೆ ಬರುತ್ತದೆ ?

ಶ್ರೀ ವಿ. ಎಂ. ದೇವ್.—ನೀವು ಲೇವಡಿಮಾಡಬಹುದು. ಆದರೆ ವಿಚಾರ ನಿರೂಪಣೆ ಮಾಡುವುದಕ್ಕೆ ಮುಂಚೆ ಜನರಲೈಸೇಷನ್ ಮಾಡುವುದು ಹೇಗೆ ? ಕಾಲ ಸ್ವಲ್ಪ ಕೊಟ್ಟರೆ ಒಳ್ಳೆಯದು.

Mr. SPEAKER.—A dead man and a living Budget won't go together.

Sri V. M. DEO.—The Chair's interrupting the process of my thought.

Mr. SPEAKER.—Had I known it, I would not have said that. The member can go on peacefully.

ಶ್ರೀ ವಿ. ಎಂ. ದೇವ್.—ಹೆನ್ರಿ ಫೋರ್ಡ್ ವ್ಯವಹಾರ ಮಾಡುವಾಗ ಅವನ ಕೈಕೆಳಗೆ ಬಹಳ ಜನರಿದ್ದರು. ಆತ ತನ್ನ ಹತ್ತಿರವಿದ್ದ ಹಣವನ್ನು ತ್ಯಾಗಮಾಡುತ್ತಿದ್ದ, ವಿಜ್ಞಾನಕ್ಕೆ ಖರ್ಚು ಮಾಡುತ್ತಿದ್ದ. ಅದು ಡೆವಲಪ್ ಆದಾಗ ಏನಾಯಿತೆಂದರೆ ಅಕೌಂಟ್ ಮಾಡುವುದು ಕಷ್ಟವಾಗಿತ್ತು, ಆತನಿಗೆ ಅಕೌಂಟಿಂಗ್ ಗೊತ್ತಿರಲಿಲ್ಲ, ಹಣವನ್ನು ಬ್ಯಾಂಕಿನಲ್ಲಿಟ್ಟಿದ್ದ, ಬೇಕಾದಾಗ ಕೊಡುತ್ತಿದ್ದರು. ಇದರಿಂದ ಅವನ ಕೈಗಾರಿಕೆ ಬಹಳ ಹೊಲಸಾಯಿತು. ಇದಾದಮೇಲೆ ಆತ ಸತ್ತುಹೋದ, ಅವನ ಮಗ ಉತ್ತರಾಧಿಕಾರಿಯಾದ, ಬಂಡವಾಳ ಹೂಡಬೇಕಾದರೆ ಹೇಗೆ ಮಾಡಬೇಕೆಂದು ಯೋಚಿಸಿದ. ತಂದೆಗೆ ಅಕೌಂಟಿಂಗ್ ಗೊತ್ತಿಲ್ಲದೆ ಯಾವುದಕ್ಕೆ ಖರ್ಚುಮಾಡಬೇಕು, ಯಾವುದಕ್ಕೆ ಮಾಡಬಾರದು ಎಂಬುದು ಗೊತ್ತಾಗಲಿಲ್ಲ. ಆ ಕಾರಣದಿಂದ ಕೈಗಾರಿಕೆ ಹಾಳಾಗುವ ಸ್ಥಿತಿ ಬಂದಿದೆ ಏನುಮಾಡಬೇಕು ಎಂದು ಯೋಚನೆ ಮಾಡಿದ. ಅವನ ಅದೃಷ್ಟ ಚೆನ್ನಾಗಿತ್ತು. ಅವನಿಗೆ ಶ್ರೀಮಂತರ ಮನೆ ಹುಡುಗಿ ಕೊಟ್ಟು ಮದುವೆಮಾಡಿದ್ದರು, ಬಂಡವಾಳವಿತ್ತು, ಆಕೆಯಿಂದ ಹಣ ಸಾಲ ಪಡೆದ, ಕಾರುಗಳನ್ನು ತಯಾರಿಸಿದ, ಹೀಗೆ ಮಾಡಿದಮೇಲೆ ಫೋರ್ಡ್ ಸಂಸ್ಥೆ ಮುಂದೆ ಬಂತು. ಇದಕ್ಕೆ ಕಾರಣ ಅವನು ತನ್ನ ಕೆಲಸವನ್ನು ಒಳ್ಳೆಯ ರೀತಿಯಲ್ಲಿ ಶ್ರದ್ಧೆವಹಿಸಿ ಮಾಡಿದ್ದು. ಆಡಿಟ್ ಮತ್ತು ಅಕೌಂಟಿಂಗಿಗೆ ಆತ ಚೆನ್ನಾಗಿ ಗಮನಕೊಟ್ಟ. ಅದರಿಂದ ಪ್ರತಿಫಲ ತನ್ನ ಕೈಗಾರಿಕೆಯಿಂದ ಬರುತ್ತಿದೆ ಎಂಬುದು ಗೊತ್ತಾಯಿತು. ವರ್ಷಾಖೈರಿನಲ್ಲಿ ಆಡಿಟ್ ಆಗುವುದಕ್ಕೆ ಮುಂಚೆ ಸಾಮಾನ್ಯವಾಗಿ ತಪ್ಪುಮಾಡಿರುವುದು ಗೊತ್ತಾಗುತ್ತದೆ. ಅದರಿಂದೇನಾಗುತ್ತದೆಯೆಂದರೆ ಹೂಡಿರುವ ಬಂಡವಾಳಕ್ಕೆ ತಕ್ಕ ಪ್ರತಿಫಲ ಸರಿಯಾದ ಕಾಲದಲ್ಲಿ ಬರುತ್ತದೆ. ಈ ದೃಷ್ಟಿಯಿಂದ ಕಳಕಳಿಯಿಂದ ಕೇಳುವುದು. This is a simple thing and you can adopt this cost accounting and cost auditing, whether it is in administration or in irrigation or in any other sphere. ಈ ಸಿಸ್ಟಂಅನ್ನು ಇನ್‌ಸ್ಟಿಟ್ಯೂಟ್ ಮಾಡಿದರೆ ಬಹಳ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ. ಇನ್ನೊಂದು ವಿಷಯ ಸ್ವಾಮಿ. ಒಂದಾನೊಂದು ಕಾಲದಲ್ಲಿ ನಮ್ಮ ದೇಶಕ್ಕೆ ಒಳ್ಳೆಯದು ಆಗಲಿ ಎಂದು ಈಗ ನಾವು ಬುತ್ತಿ ಕಟ್ಟುವುದಕ್ಕೆ ಒಂದು ದಾರಿ ಇದೆ. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಹಿಂದಕ್ಕೆ ಸರಕಾರದವರು ಲ್ಯಾಂಡ್ ರಿಫಾರ್ಮ್ಸ್ ತರಬೇಕೆಂದು ಯೋಚನೆ ಮಾಡಿದ ಕಾಲದಲ್ಲಿ ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಸಂಪೂರ್ಣವಾಗಿ ಪರಿಶೀಲನೆ ಮಾಡಿ ಒಂದು ರಿಪೋರ್ಟು ಕೊಡುವುದಕ್ಕಾಗಿ ಜತ್ತಿ ಕಮಿಟಿ ಎಂದು ಒಂದು ಕಮಿಟಿ ನೇಮಕ ಮಾಡಿದ್ದರು. ಶ್ರೀಮಾನ್ ಜತ್ತಿಯವರು ಆ ಕಮಿಟಿಗೆ ಚೇರ್‌ಮನ್ ಆಗಿದ್ದರು. ಶ್ರೀಮಾನ್ ಜತ್ತಿಯವರು ಈ ವಿಚಾರದಲ್ಲಿ ಒಂದು ರಿಪೋರ್ಟು ಕೊಟ್ಟಿದ್ದಾರೆ. ಈ ರಿಪೋರ್ಟು ಪ್ರಕಟವಾದ ಕೂಡಲೆ ಅದರ ಪರಿಣಾಮ ಏನಾಗುತ್ತದೆಯೋ ಎಂದು ನಮ್ಮೆಲ್ಲರಿಗೂ ಗಾಬರಿಯಾಯಿತು. ಏಕೆಂದರೆ ನಮಗೆ ಒಟ್ಟು 160 ಎಕರೆ ಜಮೀನು ಇದೆ, ಈ ಜಮೀನಿನಲ್ಲಿ ದುಡಿಯುವುದಕ್ಕೆ ನಮಗೆಲ್ಲರಿಗೂ ಹಕ್ಕು ಇದ್ದರೂ ಕೂಡ ಅದರ ಆದಾಯದ ಬಗ್ಗೆ ನಮಗೆ ಹಕ್ಕು ಇರಲಿಲ್ಲ. ನಾವು ಅಣ್ಣ ತಮ್ಮಂದಿರು ಮೂರು ಜನ ಇದ್ದೇವೆ. ಈ ಸಂದರ್ಭದಲ್ಲಿ ಏನು ಮಾಡಬೇಕು ಎಂಬುದನ್ನು ಯೋಚನೆ ಮಾಡಿ ನಾವು ಎಲ್ಲರೂ ಏನು ಮಾಡಿದೆವು ಅಂದರೆ ನಮಗೆ ಇರತಕ್ಕ ಒಟ್ಟು ಜಮೀನನ್ನು ತಾವು ಭಾಗ ಮಾಡಿ ನಾವೆಲ್ಲರೂ ಪಾಲು ಮಾಡಿಕೊಂಡೆವು. ಹೊಸ ಕಾನೂನಿನಿಂದ ಬರತಕ್ಕ ತೊಂದರೆಯನ್ನು ತಪ್ಪಿಸುವುದಕ್ಕಾಗಿ ಹೀಗೆ ನಾವು ನಮ್ಮ ಭೂಮಿಯನ್ನು ಪಾಲು ಮಾಡಿಕೊಂಡೆವು.

Mr. SPEAKER. Why bring in family matters here into the Budget?

Sri V. M. DEO.—You were a Lawyer previously, and even Gandhiji had stated that it is a lier's job. Please understand two things: (1) truth and (2) realism.

Mr. SPEAKER.—My profession has been wrongly estimated and it does not come under the Budget.

ಶ್ರೀ ವಿ. ಎಂ. ದೇವ್.—ತಾವು ಮೊದಲು ಮಂತ್ರಿಗಳಾಗಿದ್ದಿರಿ. ಅದನ್ನು ಬಿಟ್ಟು ಕೊಟ್ಟು ಈಗ ಈ ಸಭೆಯ ಸ್ಪೀಕರ್ ಆಗಿದ್ದೀರಿ. ತಾವೂ ಕೂಡ ತಮ್ಮ ಸ್ಥಾನವನ್ನು ಬದಲು ಮಾಡಿಕೊಂಡಿದ್ದೀರಿ.

Mr. SPEAKER.—None of the points arise under the Demands before the House.

ಶ್ರೀ ಬಿ. ಎಂ. ದೇವ್.—ನಾನು ಕಳಕಳಿಯಿಂದ ಒಂದು ಮಾತನ್ನು ಕೇಳಿಕೊಳ್ಳುತ್ತೇನೆ. ನಾನು ದುಡಿಯುವವನು ಒಬ್ಬನೇ ಆದುದರಿಂದ ನನಗೆ ಗಾಬರಿಯಾಯಿತು. ಆದುದರಿಂದ ನಾವೆಲ್ಲರೂ ಭೂಮಿ ಪಾಲು ಮಾಡಿಕೊಂಡೆವು. ಇದರಿಂದ ನಮಗೆ ಹಿತವಾಯಿತು. ಇಷ್ಟೇ ಅಲ್ಲದೆ 250 ರೂಪಾಯಿ ಡಿಪಾಜಿಟ್ ಕಟ್ಟಿ ಎಲೆಕ್ಷನ್ನಿಗೆ ನಿಂತು ಈ ಸಭೆಗೆ ಸದಸ್ಯನಾಗಿ ಬರುವುದಕ್ಕೆ ಒಂದು ದಾರಿ ಆಯಿತು. ಇದಕ್ಕೆಲ್ಲಾ ಕಾರಣ ಅಂದರೆ ಶ್ರೀ ಜತ್ತಿಯವರ ರಿಪೋರ್ಟು. ಇಂದಿಗೂ ಕೂಡ ನಾವು ಮನೆಯಲ್ಲಿ ಜತ್ತಿಯವರನ್ನು ನೆನೆಸಿಕೊಂಡು ಅವರ ಹೆಸರು ಹೇಳಿ ದೀಪ ಹಚ್ಚುತ್ತೇವೆ. ಇಲ್ಲದಿದ್ದರೆ ನಾವು ಯಾವಾಗಲೋ ಪಾಪರ್ ಆಗುತ್ತಿದ್ದೆವು.

ಕೊನೆಯದಾಗಿ ಮುಖ್ಯ ಮಂತ್ರಿಗಳಿಗೆ ಒಂದು ಸಲಹೆ ಮಾಡಲು ಇಷ್ಟ ಪಡುತ್ತೇನೆ. ನಾನು ಹೇಳುವುದು ಇಷ್ಟೇ. ಸರಕಾರಿ ನೌಕರರಿಗೆ ಹೆಚ್ಚಿನ ತುಟ್ಟಿ ಭತ್ಯ ಕೊಡುವುದರ ಬದಲು ಅವರಿಗೆ ಆಹಾರ ಧಾನ್ಯ ಬಟ್ಟೆ ಕೊಡಿಸುತ್ತೇವೆಂದು ಹೇಳಿದ್ದಾರೆ. ಇದು ಒಳ್ಳೆಯದು ಎಂದು ಅವರಿಗೆ ಹೇಳುತ್ತೇನೆ. ದೇಶದ ಹಿತ ದೃಷ್ಟಿಯಿಂದ ಎಲ್ಲರಿಗೂ ಒಳ್ಳೆಯದಾಗಬೇಕೆಂದು ಈಗ ಪ್ರಯತ್ನ ಪಟ್ಟು ಬುತ್ತಿ ಕಟ್ಟಿದರೆ ದಾರಿ ಸುಗಮವಾಗುತ್ತದೆ, ಇಲ್ಲದಿದ್ದರೆ ಎಲ್ಲರಿಗೂ ಗಾಬರಿಯುಂಟಾಗುತ್ತದೆ. ಆದುದರಿಂದ ಎಷ್ಟೆಷ್ಟು ಒಳ್ಳೆಯ ಕೆಲಸ ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನು ಮಾಡಬೇಕೆಂದು ಹೇಳಿ ನನ್ನ ಈ ಎರಡು ಮಾತು ಮುಗಿಸುತ್ತೇನೆ.

Mr. SPEAKER.—At 6 o'clock there is a party by the Chief Minister. I suppose the members would like to attend the party. Therefore, we will adjourn at Six O' Clock.

Sri H. D. DEVE GOWDA.—We may continue this discussion tomorrow for one hour.

Mr. SPEAKER.—Members must be very practical; and must have grip on the point they are talking. I suggested that the Whips might meet and arrive at some understanding.

Sri H. D. DEVE GOWDA.—The Congress Whip is not available.

Sri S. SIVAPPA—As suggested by you, our Whip tried to contact the Congress Whip, but the Congress Whip is not available. My suggestion is............

Mr. SPEAKER—I am not receiving any suggestion.

Sri S. SIVAPPA.—The whole of tomorrow and day after, we have the Education Demand. We can take one hour from the Education Demand and allot that time to these Demands.

Mr. SPEAKER.—I have been mentioning this from the very beginning. In the morning the Whips did not meet. Afterwards the Whips gave me an independent list, an irreconcilable list. It is very amusing; I do not want to read it. It is the duty of the Business Advisory Committee, the Whips, the Leader of the House and the Leader of the Opposition. It is never the duty of the Speaker. If the House tries to pass on the whole burden on me what can I do? Let the House come to some conclusion. Why should we not talk to each other and decide? After all this is the last Budget Session. Who is going to be what afterwards we do not know. I want all of you to meet. Otherwise I will call all of you to my Chamber for discussion.

† **ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).**—ಮಾನ್ಯ ಅಧ್ಯಕ್ಷರೇ, ಈ ದಿವಸ ಮಂಡಿಸಿರ ತಕ್ಕಂಥ ಡಿಮಾಂಡುಗಳನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳಲು ಬಯಸುತ್ತೇನೆ. ಈ ಡಿಮಾಂಡುಗಳನ್ನು ವಿರೋಧಿಸುತ್ತಾ ಅನೇಕ ಮಾನ್ಯ ಸದಸ್ಯರು

ಸೂಚನೆಗಳನ್ನು ಕೊಟ್ಟಿದ್ದಾರೆ. ನಾನೂ ಕೂಡ ಒಂದೆರಡು ಪಾಯಿಂಟ್ಸ್ ಹೇಳುತ್ತೇನೆ. ಈ ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಏನಾಗಿದೆ ಅಂದರೆ ಮ್ಯಾಗ್ಜಿಮಮ್ ಎಕ್‌ಸ್ಪೆಂಡೀಚರ್ ಮತ್ತು ಮಿನಿಮಮ್ ಎಫಿಷಿಯನ್ಸಿ ಆಗಿದೆ ಎಂದು ಹೇಳಬಹುದು. ಆದರೆ ಬ್ರಿಟಿಷರ ಕಾಲದಲ್ಲಿ ನಮ್ಮ ಆದಾಯಕ್ಕೆ ಅನುಗುಣವಾಗಿ ಮ್ಯಾಗ್ಜಿಮಮ್ ಎಫಿಷಿಯನ್ಸಿ ಇದ್ದು ಮಿನಿಮಮ್ ಎಕ್ಸ್‌ಪೆಂಡಿಚರ್ ಇತ್ತು. ಅದು ಈಗ ರಿವರ್ಸ್ ಆಗಿದೆ. ಇದರಿಂದ ಸಂಕಟವಾಗುತ್ತದೆ. ಸೆಂಟರ್ ಮತ್ತು ಸ್ಟೇಟ್ ನೌಕರರ ಪೇ ಸ್ಕೇಲುಗಳಲ್ಲಿ ವ್ಯತ್ಯಾಸ ಇರುವುದರಿಂದ ರಾಜ್ಯದ ನೌಕರರಲ್ಲಿ ಅಸಮಾಧಾನ ಉಂಟಾಗಿದೆ. ಒಂದೇ ಸ್ಥಳದಲ್ಲಿ ಒಂದೇ ರೀತಿಯ ಕೆಲಸ ಮಾಡತಕ್ಕ ಸ್ಟೇಟ್ ಮತ್ತು ಸೆಂಟರ್ ನೌಕರರಿಗೆ ಬೇರೆ ಬೇರೆ ಸಂಬಳ ಕೊಟ್ಟರೆ ಯಾರಿಗೆ ಸಮಾಧಾನವಾಗುತ್ತದೆ ಯೋಚನೆ ಮಾಡಬೇಕು. ನಮ್ಮ ಮುಖ್ಯ ಮಂತ್ರಿಗಳು ಬೇರೆ ರಾಜ್ಯದ ಮುಖ್ಯ ಮಂತ್ರಿಗಳ ಸಹಕಾರ ಪಡೆದು ಕೇಂದ್ರಕ್ಕೆ ಹೋಗಿ ಈ ವಿಷಯ ಚರ್ಚೆಮಾಡಿ ಇದಕ್ಕೆ ಪರಿಹಾರ ಕಂಡುಹಿಡಿದು ಎಲ್ಲರಿಗೂ ಒಂದೇರೀತಿಯ ಪೇಸ್ಕೇಲ್ ಇರುವಹಾಗೆ ಮಾಡಬೇಕು. ಸೆಂಟರ್ ಪೇಸ್ಕೇಲ್ಸ್ ಮಟ್ಟಕ್ಕೆ ಸ್ಟೇಟ್ ನೌಕರರ ಪೇಸ್ಕೇಲ್ಸ್ ಏರಿಸಬೇಕು. ಇದಕ್ಕಾಗಿ ಸಬ್‌ಸಿಡಿ ಅಥವಾ ಗ್ರಾಂಟ್ ಕೇಂದ್ರದವರು ಕೊಡಬೇಕು. ಈ ರೀತಿ ಮಾಡದೇ ಇದ್ದರೆ ಯಾವ ಕೆಲಸಕಾರ್ಯಗಳನ್ನೂ ಸುಸೂತ್ರವಾಗಿ ನೆರವೇರಿಸುವುದಕ್ಕೆ ಸಾಧ್ಯವಿಲ್ಲ. ಇದಕ್ಕಾಗಿ ಮುಖ್ಯಮಂತ್ರಿಗಳು ಕೇಂದ್ರಕ್ಕೆ ಹೋಗಿ ಪ್ರತಿಭಟಿಸಬೇಕು ಮತ್ತು ಒಂದೇ ರೀತಿಯ ಪೇಸ್ಕೇಲ್ಸ್ ಬರುವಂತೆ ಏರ್ಪಾಡು ಮಾಡಬೇಕು, ಯಾಕೆಂದರೆ ಎಲ್ಲಿಯವರೆಗೆ ನೌಕರರಿಗೆ ಅಸಮಾಧಾನವಿರುತ್ತದೆಯೋ ಅಲ್ಲಿಯವರೆಗೆ ಸರಕಾರದ ಕೆಲಸ ಸುಸೂತ್ರವಾಗಿ ನಡೆಯುವುದಿಲ್ಲ ಎಂದು ಹೇಳುತ್ತೇನೆ.

ಈ ಸಮಯದಲ್ಲಿ ಆಹಾರ ಸಾಮಗ್ರಿಗಳ ಬೆಲೆ ಒಂದೇ ಸಮನೆ ಏರುತ್ತಿರುವುದರಿಂದ ಕಷ್ಟವಾಗಿದೆ. ಇದಕ್ಕೆ ಒಂದು ಪರಿಹಾರಮಾರ್ಗ ಕಂಡುಹಿಡಿಯಬೇಕು. ಮುಖ್ಯಮಂತ್ರಿಗಳು ಒಂದು ಪರಿಹಾರ ಕಂಡು ಹಿಡಿದಿದ್ದಾರೆ ಎಂದು ಪೇಪರಿನಲ್ಲಿ ಓದಿದ್ದೇನೆ, ಸರಕಾರಿ ನೌಕರರಿಗೆ ಸಂಬಳ ಹೆಚ್ಚಿಗೆ ಕೊಡದೆ ಬಟ್ಟೆ ಬರೆ ಸಕ್ಕರೆ ಧಾನ್ಯ ಕಡಿಮೆ ಬೆಲೆಗೆ ಒದಗಿಸುವ ವ್ಯವಸ್ಥೆ ಮಾಡುತ್ತಾರೆಂದು ಕೇಳಿದ್ದೇನೆ. ಈ ರೀತಿ ಮಾಡಿದರೆ ಸರಕಾರದ ಕೆಲಸ ಸರಿಯಾಗಿ ನಡೆಯುತ್ತದೆ.

ಸರ್ಕಾರೀ ನೌಕರರು ತಮ್ಮ ವೈಯ್ಯಕ್ತಿಕ ಸ್ವಂತ ಅನುಕೂಲಕ್ಕಾಗಿ ಕೆಲಸ ಮಾಡುವುದು ತಷ್ಟೇನು ತೃಪ್ತಿಕರವಾಗಿ ಕಾಣುವುದಿಲ್ಲ. ತ್ಯಾಗ ಮಾಡಬೇಕು. ದೇಶಕ್ಕಾಗಿ ದುಡಿಯಬೇಕು. ಅಮ್ಮ ಅಣ್ಣತಮ್ಮಂದಿರು, ರೈತವರ್ಗದವರು ಎಷ್ಟು ಕಷ್ಟದಲ್ಲಿದ್ದಾರೆ- ಅವರ ಸ್ಟ್ಯಾಂಡರ್ಡ್ ಆಫ್ ಲೀವಿಂಗ್ ಎಷ್ಟು ಚಿಂತಾಜನಕವಾಗಿದೆ, ಅವರ ಬಟ್ಟೆಬರೆ ಎಷ್ಟು ಕೊಳಕು ಮಟ್ಟದಲ್ಲಿರುತ್ತದೆ, ಎಂಬುದನ್ನೆಲ್ಲಾ ತಿಳಿದುಕೊಂಡು, ಮನಸ್ಸಿನಲ್ಲಿಟ್ಟುಕೊಂಡು ನೌಕರರು ಕೆಲಸಮಾಡಬೇಕು. ಇವತ್ತು ಒಬ್ಬ ರೈತನ ಮಗ ಅಧಿಕಾರಕ್ಕೆ ಬಂದಮೇಲೆ ಅವನು ತನ್ನ ಮನಸ್ಸನ್ನು ಬದಲಾಯಿಸುತ್ತಾನೆ. ಈ ರೀತಿಯ ಧೋರಣೆಯ ಬದಲಾವಣೆಗಳು ಅವರಲ್ಲಿ ಆಗುವುದು ಸರಿಯಲ್ಲ. ಅವನ ಅಣ್ಣತಮ್ಮಂದಿರೆ ಕೆಲಸಕ್ಕಾಗಿ ಬಂದರೆ ಸಲೀಸಾಗಿ ಕೆಲಸ ಮಾಡಿಕೊಡುವುದಿಲ್ಲ. ಒಬ್ಬ ರೈತ ತನ್ನ ಕೆಲಸಕ್ಕಾಗಿ ತಾಲ್ಲೋಕ್ ಆಫೀಸ್‌ಗೆ ನೂರಾರುಸಾರಿ ಅಲೆದರೂ ಅವನ ಕೆಲಸವಾಗುವುದಿಲ್ಲ. ಕೊನೆಗೆ ಸರ್ಕಾರವೆಂದರೆ ಅವನಿಗೆ ಒಂದು ರೀತಿಯ ಜಿಗುಪ್ಸೆ ಉಂಟಾಗುತ್ತದೆ. ಒಂದು ರೀತಿಯ ಬೇಜಾರು ಬಂದು ಬಿಡುತ್ತದೆ. ಇದಕ್ಕೆಲ್ಲಾ ಸರ್ಕಾರದವರು ಅವಕಾಶ ಮಾಡಿಕೊಡಬಾರದೆಂದು ಹೇಳುತ್ತೇನೆ. ಜಿಲ್ಲಾ ಮಟ್ಟದಲ್ಲಿ, ತಾಲ್ಲೋಕ್ ಮಟ್ಟದಲ್ಲಿ ಎಷ್ಟು ಅನ್ಯಾಯಗಳು ಆಗುತ್ತಿವೆ ಎಂದರೆ, ಅಷ್ಟೊಂದು ಆಗುತ್ತಿದೆ. ರೈತರುಗಳಿಗೆ ಎಷ್ಟೊಂದು ಅನ್ಯಾಯವಾಗುತ್ತಿದೆ, ಸಾರ್ವಜನಿಕರಿಗೆ ಎಷ್ಟೊಂದು ಅನ್ಯಾಯವಾಗುತ್ತಿದೆ, ಎಷ್ಟೊಂದು ಕಿರುಕುಳವನ್ನು ಸರ್ಕಾರಿ ಅಧಿಕಾರಿಗಳು ಕೊಡುತ್ತಿದ್ದಾರೆ ಎಂಬುದರ ಬಗ್ಗೆ ಸರ್ವೆ ಮಾಡಿಸಿ ನೋಡಿದರೆ ಸರ್ಕಾರಕ್ಕೆ ಗೊತ್ತಾಗುತ್ತದೆ. ರೈತರುಗಳು ಇವತ್ತಿನ ದಿವಸ ಯಾವ ಕೆಲಸ ಮಾಡಿಸಿಕೊಂಡು ಹೋಗುವುದು ಕಷ್ಟಸಾಧ್ಯವಾಗಿದೆ. ರೈತರ ದೃಷ್ಟಿಯಿಂದ ಸರ್ಕಾರಿ ಕಛೇರಿಗಳಲ್ಲಿ ಸುಗಮವಾಗಿ ಕೆಲಸ ನಡೆಯುವುದಕ್ಕೆ ಸಾಧನಗಳನ್ನು ಸರ್ಕಾರದವರು ಕಂಡುಹಿಡಿದರೆ ಬಹಳ ಒಳ್ಳೆಯದು. ಸರ್ಕಾರಿ ನೌಕರರಿಗೆ ಕೈತುಂಬ ಸಂಬಳ ಕೊಡಿ, ಬೇಕಾದ ಅನುಕೂಲಗಳನ್ನು ಮಾಡಿಕೊಡಿ, ನನ್ನ ಅಭ್ಯಂತರವಿಲ್ಲ, ಆದರೆ ಅವರು ಸಹ ದಯೆ, ಇಟ್ಟುಕೊಂಡು ಬಡಬಗ್ಗರ ವಿಚಾರದಲ್ಲಿ, ಬುದ್ಧಿಮತ ಕಡಿಮೆ ಇರುವ ಜನಗಳಿಗೆ ಸಹಾಯ, ಸಹಕಾರವನ್ನು ಕೊಟ್ಟು ಸರಿಯಾಗಿ ಸರಿಯಾಗಿ ಕೆಲಸ ಮಾಡಿಕೊಂಡು ಹೋಗಬೇಕು. ಇದು ಅವರ ಆದ್ಯ ಕರ್ತವ್ಯವೆಂದು ನಾನು ಹೇಳುತ್ತೇನೆ.

ಮುಂದಕ್ಕೆ ಬಂದರೆ, ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟೀಸ್ ವಿಚಾರಕ್ಕೆ ಬಂದರೆ ಕೋರ್ಟುಗಳು ಜಾಸ್ತಿಯಾದ ಹಾಗೆಲ್ಲಾ ಅಷ್ಟೇ ಅನ್ಯಾಯಗಳು ಜಾಸ್ತಿಯಾಗುತ್ತಿವೆ. ಸರ್ಕಾರದವರು ಈ ಕೋರ್ಟುಗಳನ್ನು ನಿರ್ಮಿಸಿರುವುದು ಸಾಹುಕಾರರ, ದೊಡ್ಡವರ, ರಿಚ್ ಪೀಪಲ್ಸ್‌ಗಳ ಉಪಯೋಗ

(ಶ್ರೀ ಹೆಚ್. ಆರ್. ಕೇಶವಮೂರ್ತಿ)

ಕ್ಕಾಗಿ, ಅನುಕೂಲಕ್ಕಾಗಿ ಇವೆಯೇ ಹೊರತು, ಬಡವರಿಗೆ ಅನುಕೂಲ ಮಾಡಲಿಕ್ಕೆ ಇಲ್ಲ. ಈ ವಿಚಾರದಲ್ಲಿ ಕವಿಯಾದ ಗೋಲ್ಡ್‌ಸ್ಮಿತ್ ಈ ರೀತಿ ಹೇಳಿದ್ದಾನೆ.

" Laws grind the poor and the rich men rule the laws. "

ಹಾಗೆಯೇ ನಾನಾದರೂ ಹೇಳುವುದು ಎಂದರೆ, ಈ ಬಡವರಿಗೆ ಅಲ್ಲ, ಸಾಹುಕಾರರಿಗೆ ಮಾತ್ರ ಕೋರ್ಟ್‌ಗಳು ಇರುವುದು. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಇರುವುದರಿಂದ ಕೋರ್ಟ್‌ಗಳು ಬಡವರ ಅನುಕೂಲಕ್ಕಾಗಿ ಇರಬೇಕೇ ಹೊರತು, ಸಾಹುಕಾರರಿಗೆ ಅಲ್ಲ. ಒಂದು ಕೋರ್ಟ್‌ನಲ್ಲಿ ಜಡ್ಜ್‌ಗಳು ಯಾವರೀತಿ ಇರಬೇಕು ಎಂಬುದನ್ನು ಓದುತ್ತೇನೆ.

" When an appeal decision is given, the law which is applied is extremely uneventful and the result obtained in any one case depends more on what each judge hears in the case than the merits of ths case, the preparation of witnesses and the skill of the lawyer. There may be respect for the law......But there is there is no such thing as rule of law ".

ಆದ್ದರಿಂದ ನಾನಾದರೂ ಹೇಳುವುದು ಇಷ್ಟೇ, ಈ ಅಧಿಕಾರಿಗಳು, ಜಡ್ಜಿಗಳು ಬಡವರಿಗೆ ನ್ಯಾಯ ದೊರೆಯುವಂತೆ ತಮ್ಮ ದೃಷ್ಟಿಯನ್ನು ರೀಓರಿಯೆಂಟೇಟ್ ಮಾಡಿಕೊಳ್ಳಬೇಕು. ಬಡವರಿಗೆ ಯಾವ ಖರ್ಚೂ ಇಲ್ಲದ ರೀತಿ ನ್ಯಾಯ ದೊರೆಯುವಂತೆ ಮಾಡಬೇಕು. ಕೆಲವು ಕಡೆ ಜಡ್ಜಿಗಳು, ಮ್ಯಾಜಿಸ್ಟ್ರೇಟ್‌ಗಳು ಪಾಲಿಟಿಕ್ಸ್‌ಗೆ ಇಳಿಯುತ್ತಿದ್ದಾರೆ. ಖಾಸಗೀ ಸಮಾರಂಭಗಳಿಗೆ ಹೋಗಿ ಅಧ್ಯಕ್ಷತೆ ವಹಿಸುತ್ತಿದ್ದಾರೆ. ಈ ರೀತಿಯೆಲ್ಲಾ ಮಾಡುವುದು ತಪ್ಪು ಅವರು ಸರಿಯಾದ ರೀತಿ ಇರಬೇಕು ಎಂದು ಎಚ್ಚರಿಕೆ ಕೊಡುತ್ತಿದ್ದೇನೆ.

ಟೂರಿಸಮ್ ವಿಷಯದಲ್ಲಿ ನಮ್ಮ ದೇಶವು ಮುಂದುವರಿಯದೆ ಬಹಳ ಹಿಂದೆ ಬಿದ್ದಿದೆ. ಬೇಲೂರು ಮತ್ತು ಹಳೇಬೀಡು ಸರ್ ಮಿರ್ಜಾ ಅವರ ಕಾಲದಲ್ಲಿ ಬಹಳ ಅಭಿವೃದ್ಧಿಯಾಗಿತ್ತು. ಆದರೆ ನಮಗೆ ಸ್ವರಾಜ್ಯ ಬಂದಮೇಲೆ ಅವುಗಳನ್ನು ಹಿಂದಕ್ಕೆ ನೂಕಿದ್ದಾರೆ. ನಾನು ಹೇಳುವುದೇನೆಂದರೆ, ಬೇಲೂರು ಮತ್ತು ಹಳೇಬೀಡುಗಳಲ್ಲಿ ಇರತಕ್ಕಂಥ ಒಂದು ವೈಶಿಷ್ಟ್ಯ ಇಡೀ ಭಾರತದಲ್ಲಿಯೇ ಎಲ್ಲೂ ಇಲ್ಲ ಆದ್ದರಿಂದ ಸರ್ಕಾರದವರು ಬೇಲೂರು, ಹಳೇಬೀಡು ಮತ್ತು ಇತರ ದೇವಸ್ಥಾನಗಳಿಗೆ ನಿಗಾ ಕೊಟ್ಟು, ಹೊಯ್ಸಳರು, ಚೋಳರು, ಚಾಲುಕ್ಯರ ಕಾಲದ ದೇವಸ್ಥಾನಗಳನ್ನು ಉದ್ಧಾರ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇರಿಗೇಷನ್ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳುತ್ತೇನೆ. ಇದುವರೆಗೆ ಕೃಷ್ಣಾ ನದಿಯ ವಿಚಾರವನ್ನು ಕೆಲವರು ಮಾತನಾಡಿದ್ದಾರೆ. ನಾವು ಎಷ್ಟೋ ದಿವಸಗಳಿಂದಲೂ ಈ ಮನೆಯೊಳಗೆ ಕಾವೇರಿ ವಾಟರ್ಸ್ ವಿಚಾರವಾಗಿ ಮಾತನಾಡಿದ್ದೇವೆ. 1974ರಲ್ಲಿ ತುಂಬಾ ತೊಂದರೆ ಬರಬಹುದು. ಮದ್ರಾಸ್ ಸರ್ಕಾರದವರು ಮುಂದೆ ಒಂದು ಅಣೆಕಟ್ಟನ್ನು ಕಟ್ಟುವುದಕ್ಕೆ ಬಿಡುವುದಿಲ್ಲವೆಂದು ಪದೇ ಪದೇ ಈ ಮನೆಯಲ್ಲಿ ಹೇಳುತ್ತಿದ್ದೇವೆ. ಆದರೂ ಸಹ ಸರ್ಕಾರದ ಕಣ್ಣಿಗೆ ಈ ವಿಷಯ ಬೀಳುತ್ತಿಲ್ಲ. ಬಹುಶಃ ಈ ವಿಚಾರದಲ್ಲಿ ಸರ್ಕಾರದ ಕಿವಿ ಕಿವುಡಾಗಿದೆಯೆಂದು ಹೇಳಿದರೆ ತಪ್ಪಾಗಲಾರದು. ಸರ್ಕಾರದವರು ದುಡ್ಡು ಇಲ್ಲವೆಂದು ಹೇಳಬಹುದು. ಹಿಂದೆ ಒಂದು ಸಾರಿ ಬ್ರಿಟನ್ ಈ ರೀತಿಯ ಕೆಲಸಕ್ಕಾಗಿ 27 ಸಾವಿರ ಮಿಲಿಯನ್ ಪೌಂಡ್ ಸಾಲಮಾಡಿ, ಅನಂತರ ಎರಡನೇ ಮಹಾ ಯುದ್ಧವಾದಮೇಲೆ ಮತ್ತೆ 5 ಸಾವಿರ ಮಿಲಿಯನ್ ಪೌಂಡ್ ಸಾಲಮಾಡಿ ಡೆವಲಪ್‌ಮೆಂಟ್ ಕೆಲಸವನ್ನು ಪ್ರಾರಂಭಮಾಡಿದ್ದಾರೆ. ಆದರೆ ಇವತ್ತು ನಮ್ಮ ಹತ್ತಿರ ದುಡ್ಡು ಇಲ್ಲ, ಸಾಲ ಇದೆಯೆಂದು ಹೇಳಿದರೆ ರಾಜ್ಯವಾಳುವುದಕ್ಕೆ ನೀವು ಅಸಮರ್ಥರು, ನಿಮಗೆ ಯೋಗ್ಯತೆ ಇಲ್ಲ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಸಾಲ ಮಾಡಿದರೂ ಸಹ ಇಂಥ ಕಾಮಗಾರಿಗಳನ್ನು ಮಾಡಿದರೆ ದೇಶದ ಅಸೆಟ್ಸ್ ಅಭಿವೃದ್ಧಿಯಾಗುತ್ತದೆ. ಈಗ ಇಲ್ಲದಿದ್ದರೂ ನಮ್ಮ ಮುಂದಿ ಪೀಳಿಗೆಯವರು ಸಾಲ ತೀರಿಸಿಕೊಳ್ಳುತ್ತಾರೆ. ಇಲ್ಲದಿದ್ದರೆ ನಮ್ಮ ಆ ಪೀಳಿಗೆಯವರು ತೊಂದರೆ ಪಡಬೇಕಾಗುತ್ತದೆ. ಮತ್ತು ಸರ್ಕಾರವನ್ನು ಬೈಯುತ್ತಾರೆ. ಕಾಮಗಾರಿಗಳನ್ನು ಮಾಡಿದರೆ ಸರ್ಕಾರವನ್ನು ಅಭಿನಂದಿಸುತ್ತಾರೆ, ಎಂದು ಆಲೋಚನೆ ಮಾಡಬೇಕು. ಇಲ್ಲದೆ ಹೋದರೆ ಮುಂದೆ ನಮ್ಮ ದೇಶಕ್ಕೆ ದೊಡ್ಡ ಅನ್ಯಾಯ ಮಾಡಿದಹಾಗೆ ಆಗುತ್ತದೆ ಎಂದು ಹೇಳುತ್ತೇನೆ. ಆದ್ದರಿಂದ ಆದಷ್ಟು ಬೇಗ ಯಾವ

ರೀತಿಯಿಂದಲಾದರೂ ಸಹ ಹಣ ಒದಗಿಸಿ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳಬೇಕು ಎಂದು ಸಲಹೆ ಮಾಡುತ್ತೇನೆ. ಈ ನೀರಾವರಿ ವಿಷಯದಲ್ಲಿ ಒಂದೆರಡು ಮಾತುಗಳನ್ನು ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಹೇಳುತ್ತೇನೆ. ಈ ಸರ್ಕಾರದವರು ನಮ್ಮ ಹಾಸನ ಜಿಲ್ಲೆಯನ್ನು ಕಡೆಗಣ್ಣಿನಿಂದ ನೋಡುತ್ತಿದ್ದಾರೆ. ಪಿ. ಡಬ್ಲ್ಯು. ಡಿ. ಇಲಾಖೆಯವರು ನಮ್ಮ ಕಡೆ ರಸ್ತೆಯ ಬಾಬಿನಲ್ಲಾಗಲೀ, ಕಟ್ಟಡಗಳ ಬಾಬಿನಲ್ಲಾಗಲೀ ನೀರಾವರೀ ಬಾಬಿನಲ್ಲಾಗಲೀ ಹೆಚ್ಚು ಗಮನವನ್ನು ಕೊಡುತ್ತಿಲ್ಲ. ಕಡೆಗಣ್ಣಿನಿಂದ ನೋಡುತ್ತಿದ್ದಾರೆ. ತುಮಕೂರಿಗೆ ಹೋದರೆ ಅಲ್ಲಿ 20 ಲಕ್ಷ ರೂಪಾಯಿಗಳು ಬಾಳುವ 2 ಭವ್ಯವಾದ ಭವನಗಳನ್ನು ನೋಡಬಹುದು. ನಮ್ಮ ಜಿಲ್ಲೆಯಲ್ಲಿ ಈ ರೀತಿಯ ಕಟ್ಟಡಗಳಿಲ್ಲ. ತುಮಕೂರಿಗಾದರೆ ಕಲ್ಲು ಸೀಮೆಂಟ್ ತೋರಿಸುತ್ತಾರೆ, ಹಾಸನಕ್ಕಾದರೆ ಇಟ್ಟಿಗೆ, ಗಾರೆ ಮಣ್ಣು ತೋರಿಸುತ್ತಾರೆ. ಈ ರೀತಿ ತಾರತಮ್ಯ ಭಾವನೆ ತೋರಿಸುವುದು ಸರಿಯಲ್ಲ. ಎಲ್ಲಾ ಜಿಲ್ಲೆಗಳನ್ನು ಒಂದೇ ರೀತಿಯಲ್ಲಿ ನೋಡಬೇಕು. ತುಮಕೂರಿಗೆ ಕೊಟ್ಟದ್ದೀರೆಂದು ನನಗೆ ಹೊಟ್ಟೆಉರಿಯಿಲ್ಲ. ಆದರೆ ಹಾಸನ ಜಿಲ್ಲೆಯನ್ನು ಮಾರಿಯ ಹಾಗೆ ನೋಡುವುದು ಸರಿಯಲ್ಲ. ಹಣವನ್ನು ಎಲ್ಲಾ ಜಿಲ್ಲೆಗಳಿಗೂ ಸರಿಯಾದ ರೀತಿಯಲ್ಲಿ ಹಂಚಬೇಕು. ನಮ್ಮ ಜಿಲ್ಲೆಯಲ್ಲಿ 6,000 ಕೆರೆಗಳು ಇದ್ದರೂ ಕೂಡ 4 ವರ್ಷದಿಂದ ಸಾಮಾನ್ಯವಾಗಿ 100 ಕೆರೆಗಳನ್ನೂ ತೆಗೆದುಕೊಂಡಿಲ್ಲ. ಸಾವಿರಾರು ಪಲ್ಲ ಭತ್ತ ಬೆಳೆಯುವ ಜಮೀನು ನೀರಿಲ್ಲದೆ ಬೆಂಗಾಡಾಗಿದೆ. ಇನ್ನು ಮುಂದಾದರೂ ಸಹ ಸರ್ಕಾರದವರು ನಮ್ಮ ಜಿಲ್ಲೆಯ ಬಗ್ಗೆ ದ್ವೇಷ ಭಾವನೆ ಬಿಟ್ಟು ತಮ್ಮ ದೃಷ್ಟಿಕೋನವನ್ನು ಬದಲಾಯಿಸಬೇಕು ಎಂದು ಸೂಚನೆ ಕೊಡುತ್ತಿದ್ದೇನೆ. ನಮ್ಮ ದೇಶದಲ್ಲಿ ಇರಿಗೇಟೆಡ್ ಏರಿಯಾ 21·4 ಲಕ್ಷ ಎಕರೆ ಇದೆ. ಅಂದರೆ 8·3 ಪರ್‌ಸೆಂಟ್ ಆಯಿತು. ನಮ್ಮ ಇಂಡಿಯಾದೇಶದ ಪರ್‌ಸೆಂಟ್ ನೋಡಿದರೆ 18 ಆಗುತ್ತದೆ. ನಮ್ಮ ಅಲ್ಟಿಮೇಟ್ ಪೊಟೆನ್ನಿಯಾಲಿಟಿ 88.1 ಲಕ್ಷ ಎಕರೆ. ಈಗ ಕೇವಲ 21 ಲಕ್ಷವಾಗಿದೆ. 60 ಲಕ್ಷವನ್ನು ಯಾವಾಗ ಮಾಡುತ್ತೇವೆ, 1974ನೇ ಇಸವಿಯೊಳಗೆ ಮಾಡಲು ಸಾಧ್ಯವೇ? ಕಾಲ ಮಾತ್ರ ಕಳೆಯುತ್ತಿದೆ, ರೈತರ ಭಾಷೆಯಲ್ಲಿ ಹೇಳುವುದಾದರೆ ಇದಕ್ಕೆ ಆರಂಭ ಶೂರತ್ವ ಎಂದು ಹೇಳುತ್ತಾರೆ. ಬಾಯಲ್ಲಿ ಹೇಳಿಕೊಂಡು ಕಾಲ ತಳ್ಳುವುದು ಸರಿಯಲ್ಲ. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House will now stand adjourned to re-assemble tomorrow at 1 P.M.

The House adjourned at Six of the Clock to meet again at One of the Clock on Wednesday, the 16th March 1966.

WD 6561—GPB—500—13-6-1966